# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 11–04–2012 ರಂದು ನಡೆದ ಸಭೆಯ ನಡವಳಿಗಳು

| **ಹಾಜರಿದ್ದ ಸದಸ್ಯರುಗಳು** | **ಹಾಜರಿದ್ದ ಅಧಿಕಾರಿಗಳು** |
|---|---|
| **ಶ್ರೀಯುತರುಗಳಾದ :** | |
| ಜಿ. ಮಂಜುನಾಥರಾಜು – ಅಧ್ಯಕ್ಷರು | **ಅಧಿಕ ಕೌನ್ಸಿಲ್ ಕಾರ್ಯದರ್ಶಿ,** |
| ಜಿ. ಮಂಜುನಾಥ – ಸದಸ್ಯರು | **ಉಪ ಅರಣ್ಯ ಸಂರಕ್ಷಣಾಧಿಕಾರಿ** (ಉತ್ತರ), |
| ಲತಾ. ಕೆ – ಸದಸ್ಯರು | **ಸಹಾಯಕ ಕಾನೂನು ಅಧಿಕಾರಿ** (ಪಶ್ಚಿಮ) |
| ಎಂ.ಸಿ. ಶ್ರೀನಿವಾಸ್ – ಸದಸ್ಯರು | **ಉಪ ಸಾರ್ವಜನಿಕ ಸಂಪರ್ಕಾಧಿಕಾರಿ/ಕಲ್ಯಾಣಾಧಿಕಾರಿ** (ಮಹದೇವಪುರ) |
| ವಿ. ವಾಗಿಶ್ – ಸದಸ್ಯರು | **ಕಂದಾಯ ಅಧಿಕಾರಿ** (ಚಿಕ್ಕಪೇಟೆ), |
| ಮಂಜುನಾಥ – ಸದಸ್ಯರು | **ಕಾರ್ಯಪಾಲಕ ಅಭಿಯಂತರರು** (ಬೊಮ್ಮನಹಳ್ಳಿ), (ರಾಜರಾಜೇಶ್ವರಿನಗರ), (ದಾಸರಹಳ್ಳಿ), |
| ಎಲ್. ನಾಗರತ್ನ – ಸದಸ್ಯರು | |
| ವರಲಕ್ಷ್ಮಿ. ಜೆ – ಸದಸ್ಯರು | **ಸಹಾಯಕ ಕಂದಾಯ ಅಧಿಕಾರಿ** (ಶಾಂತಿನಗರ), (ಮಹಾಲಕ್ಷ್ಮಿಪುರ), (ಶೆಟ್ಟಿಹಳ್ಳಿ), (ಶ್ರೀರಾಮಮಂದಿರ), (ವಸಂತನಗರ), (ಹೆಗ್ಗನಹಳ್ಳಿ), (ಜಾಹೀರಾತು), (ಕೆಂಪೇಗೌಡನಗರ) (ಗೋವಿಂದರಾಜನಗರ), |
| ಆಶಾ ಸುರೇಶ್ – ಸದಸ್ಯರು | |
| ಎನ್. ಜಯಪಾಲ – ಸದಸ್ಯರು | |
| ಲಾವಣ್ಯಗಣೇಶ್‌ರೆಡ್ಡಿ – ಸದಸ್ಯರು | **ಸಹಾಯಕ ಕಾರ್ಯಪಾಲಕ ಅಭಿಯಂತರರು** (ಯೋಜನೆ–ದಾಸರಹಳ್ಳಿ), (ಯೋಜನೆ), |
| –– | |
| –– | **ಸಹಾಯಕ ಅಭಿಯಂತರರು** (ಯೋಜನೆ), |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## *01]. ವಿಷಯದ ಸಂಖ್ಯೆ :–ತೆಆಸ್ಥಾಸ/503/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)ಪಿಆರ್/129/10–11, ದಿನಾಂಕ : 16–11–2011 ರಲ್ಲಿ ವಿವರಿಸಿರುವಂತೆ, ವಾರ್ಡ್–97 ದಯಾನಂದ, 7ನೇ ಮುಖ್ಯರಸ್ತೆಯಲ್ಲಿ ಬರುವ ಸರ್ಕಾರಿ ಆರ್ಯುವೇದಿಕ್ ಮತ್ತು ಯುನಾನಿ ಕಾಲೇಜಿಗೆ ಈ ಹಿಂದೆ 1949ರಲ್ಲಿ ಸದರಿ ಸಂಸ್ಥೆಗೆ 100X48 ಚದರ ಅಡಿಗಳ ಜಾಗವನ್ನು ಆರ್ಯುವೇದಿಕ ಆಸ್ಪತ್ರೆ ನಿರ್ಮಿಸಿಕೊಂಡು ನಡೆಸಲು ನಗರ ಪಾಲಿಕೆಯಿಂದ ಉಚಿತವಾಗಿ ಹಂಚಿಕೆ ಮಾಡಲಾದ ಸ್ವತ್ತಿಗೆ ಸಂಬಂಧಿಸಿದಂತೆ ಸ್ವತ್ತಿನ ನೊಂದಾವಣೆಯನ್ನು ತಮ್ಮ ಖರ್ಚಿನಲ್ಲಿ ಮಾಡಿಕೊಳ್ಳುವಂತೆ ಸೂಚಿಸಲಾಗಿರುತ್ತದೆ. ಸದರಿ ಸಂಘದವರು ಕಾರಣಾಂತರಗಳಿಂದ ಸಂಘದ ಹೆಸರಿನಲ್ಲಿ ನೊಂದಾವಣೆ ಮಾಡಿಸಲು ಸಾಧ್ಯವಾಗಲಿಲ್ಲವೆಂದು ತಮ್ಮ ಮನವಿಯಲ್ಲಿ ತಿಳಿಸಿರುತ್ತಾರೆ.

ಸದರಿ ಸ್ವತ್ತಿನಲ್ಲಿ ನೆಲ ಮಹಡಿ, ಒಂದನೇ ಅಂತಸ್ತು, ಎರಡನೇ ಅಂತಸ್ತಿನ ಆರ್. ಸಿ.ಸಿ ಕಟ್ಟಡವಿದ್ದು, ಕಟ್ಟಡದ ಸ್ವಲ್ಪ ಭಾಗವನ್ನು ಸಂಜೀವಿನಿ ನರ್ಸಿಂಗ್ ಹೋಂ ನಡೆಸಲು ಬಾಡಿಗೆಗೆ ನೀಡಲಾಗಿದ್ದು, ಈ ಸ್ವತ್ತಿಗೆ ಸಂಬಂಧಿಸಿದಂತೆ ಸದರಿ ಸಂಸ್ಥೆಯವರು ಸಲ್ಲಿಸಿರುವ ದಾಖಲೆಗಳ ಆಧಾರದ ಮೇರೆಗೆ ಸದರಿ ಸ್ವತ್ತಿಗೆ ಶುದ್ಧ ಕ್ರಯಪತ್ರವನ್ನು ಮಾಡಕೋಡುವಂತೆ ಕೋರಿರುತ್ತಾರೆ.

ಪ್ರಸ್ತುತ ಸ್ಥಳದಲ್ಲಿ ನಮ್ಮ ಸಂಸ್ಥೆಯ ವತಿಯಿಂದ 1946 ರಿಂದ ಉಚಿತವಾಗಿ ಆರ್ಯುವೇದಿಕ್ ಆಸ್ಪತ್ರೆಯನ್ನು ನಡೆಸುತ್ತಿದ್ದು, ಇಬ್ಬರು ವೈದ್ಯರು, ಒಬ್ಬ ಕಾಂಪೌಂಡರ್ ಮತ್ತು ಆಯಾ ಸಿಬ್ಬಂದಿ ವರ್ಗವನ್ನು ಇದಕ್ಕಾಗಿ ನೇಮಕ ಮಾಡಿಕೊಳ್ಳಲಾಗಿದೆ. ತಮ್ಮ ಸಂಸ್ಥೆಯು ಉಚಿತವಾಗಿ ನೇತ್ರ ತಪಾಸಣೆಯನ್ನು ಹಾಗೂ ಕಣ್ಣಿನ ಶಸ್ತ್ರ ಚಿಕಿತ್ಸೆಯನ್ನು ಪ್ರತಿಮಾಹೆಯಲ್ಲಿ ನಡೆಸುತ್ತಿದ್ದು, ಉಚಿತ ದಂತಗಳ ಪರೀಕ್ಷೆ ಹಾಗೂ ವೈದ್ಯಕೀಯ ಶಿಬಿರಗಳನ್ನು ಸಹ ಆಗಾಗ್ಗೆ ನಡೆಸುತ್ತಿರುತ್ತದೆ. ತಮ್ಮ ಸಂಸ್ಥೆಯ ಪದವೀಧರರುಗಳಿಗೆ Continuous Medical Education ಕಾರ್ಯಕ್ರಮವನ್ನು ಆಗಾಗ್ಗೆ ನಡೆಸುತ್ತಿದೆ. ಈ ಕಾರ್ಯಕ್ರಮಗಳನ್ನು ನಡೆಸಲು ಹಾಗೂ ನಿರ್ವಹಿಸಲು ಹಣದ ಅವಶ್ಯಕತೆ ಇರುವುದರಿಂದ ಕಟ್ಟಡದ ನೆಲ ಮಹಡಿಯ ಸ್ವಲ್ಪ ಭಾಗವನ್ನು ಸಂಸ್ಥೆಯ ಸದಸ್ಯರೊಬ್ಬರಿಗೆ ಬಾಡಿಗೆಗೆ ನೀಡಿರುವುದಾಗಿ ತಿಳಿಸಿರುತ್ತಾರೆ. ಸಂಸ್ಥೆಯ ಖರ್ಚು ವೆಚ್ಚಗಳಿಗೆ ಸಂಬಂಧಿಸಿಂತೆ 2006 ರಿಂದ 2011ನೇ ಸಾಲಿನ ವರೆಗಿನ Balance Sheet ಹಾಗೂ ಆಡಿಟ್ ವರದಿಗಳನ್ನು ಸಲ್ಲಿಸಿರುತ್ತಾರೆ.

ದಿನಾಂಕ: 01-03-2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು, ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶೀಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಮೇಲಿನ ವಿವರಗಳ ಹಿನ್ನೆಲೆಯಲ್ಲಿ ಸರ್ಕಾರಿ ಅಯುರ್ವೇದಿಕ ಮತ್ತು ಯುನಾನಿ ಕಾಲೇಜಿನ ಸದರಿ ಸಂಸ್ಥೆಯ ಹೆಸರಿಗೆ ಶುದ್ಧ ಕ್ರಯ ಪತ್ರ ನೊಂದಾಯಿಸಿ ಕೊಡುವ ಬಗ್ಗೆ ನಗರ ಯೋಜನೆ ಮತ್ತು ಆಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆಯ ಮುಂದೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಲಾದ ಟಿಪ್ಪಣಿಯ ಮೇರೆಗೆ ದಿನಾಂಕ : 16-11-2011ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 20-12-2011ರ ನಿರ್ಣಯ.

***ನಿರ್ಣಯ :-*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 22.11.2011ರ ನಿರ್ಣಯವನ್ನು ಒಪ್ಪಿದೆ.**

## *021. ವಿಷಯದ ಸಂಖ್ಯೆ :-ತೆಆಸ್ಥಾಸ/508/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/266/11-12, ದಿನಾಂಕ: 19-01-2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ವಾರ್ಡ್-142, 4ನೇ ಅಡ್ಡರಸ್ತೆ, ಮೌಂಟ್‌ಜಾಯ್ ರಸ್ತೆ, ಹನುಮಂತನಗರದ ಪಾಲಿಕೆ ಕಟ್ಟಡವನ್ನು ಅಂಚೆ ಕಛೇರಿಗಾಗಿ ಅಂಚೆ ಇಲಾಖೆಗೆ ಮಾಸಿಕ ರೂ.5000/-ಗಳನ್ನು ನಿಗದಿಪಡಿಸಿ, ದಿನಾಂಕ:12-12-2004 ರಿಂದ ಮೂರು ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಿದ್ದು, ದಿನಾಂಕ:11-12-2007ಕ್ಕೆ ಮುಕ್ತಾಯಗೊಂಡಿರುತ್ತದೆ.

ವಲಯಾಧಿಕಾರಿಗಳು ಸ್ಥಳ ಪರಿಶೀಲಿಸಿ, ಇಲ್ಲಿ ಅಂಚೆ ಕಛೇರಿ ಕಾರ್ಯನಿರ್ವಹಿಸುತ್ತಿದ್ದು, ನಿಗಧಿಯಂತೆ ಮಾಸಿಕ ರೂ.5000/-ಗಳ ಮೊತ್ತವನ್ನು ಪಾವತಿಸುತ್ತಿರುತ್ತಾರೆ. ಆದರೆ, ನವೀಕರಿಸಲು ಅಂಚೆ ಇಲಾಖೆ ಅಧಿಕಾರಿಗಳ ಪತ್ರ ಸಲ್ಲಿಸಿರುವುದಿಲ್ಲ. ಆದರೆ, ಅಂಚೆ ಕಛೇರಿಯು ಸಾರ್ವಜನಿಕ ಉಪಯೋಗಕ್ಕೆ ಅವಶ್ಯವಿರುವುದರಿಂದ, ಹಾಲೀ ಮಾರುಕಟ್ಟೆ ದರದಂತೆ 5-ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಲು ಪ್ರಸ್ತಾಪಿಸಿರುತ್ತಾರೆ.

ದಿನಾಂಕ:01-03-2002ರ ಆಯುಕ್ತರ ಸುತ್ತೋಲೆ ಕಲಂ-7(4) ರಲ್ಲಿ ಗುತ್ತಿಗೆ ಹಣ ಸ್ಥಳದ ಹಾಲಿ ಮಾರುಕಟ್ಟೆ ದರಕ್ಕೆ 10%ರಷ್ಟು ವಾರ್ಷಿಕ ಗುತ್ತಿಗೆ ಹಣ ನಿಗಧಿಪಡಿಸಲು ಆದೇಶವಿರುತ್ತದೆ. ಇದು ಕಟ್ಟಡವಾಗಿರುವುದರಿಂದ, ಕಾಮಗಾರಿ ಇಲಾಖೆಯವರು ಗುತ್ತಿಗೆ ಹಣ ನಿಗಧಿಪಡಿಸಬೇಕಾಗಿರುತ್ತದೆ. ಶೇ:100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿಸಮಿತಿಗೆ, ಪಾಲಿಕೆಗೆ ಅಧಿಕಾರವಿರುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿ ಅಂಚೆ ಕಛೇರಿಗೆ ಗುತ್ತಿಗೆಯನ್ನು ಪಾಲಿಕೆ ಸಭೆ ನಡವಳಿ ಆದೇಶದ ದಿನಾಂಕದಿಂದ 5-ವರ್ಷಗಳ ಅವದಿಗೆ ಗುತ್ತಿಗೆ ನವೀಕರಿಸಲು ಹಾಗೂ ಡಿಸೆಂಬರ್-2007 ರಿಂದ ಆದೇಶದ ದಿನಾಂಕದ ಮಧ್ಯೆ ಅವದಿಯ ಗುತ್ತಿಗೆ ಹಣ ನಿಗಧಿಪಡಿಸಲು ಹಾಗೂ ಪ್ರಸಕ್ತ ಲೋಕೋಪಯೋಗಿ ದರದಂತೆ ನವೀಕರಿಸಿದ ಅವದಿಗೆ ಗುತ್ತಿಗೆ ಹಣ ನಿಗಧಿಪಡಿಸುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ಈಗಿನ ಪ್ರಸಕ್ತ ಮಾರುಕಟ್ಟೆ ದರದಂತೆ ಗುತ್ತಿಗೆ ದರವನ್ನು ನಿಗದಿಪಡಿಸಿ ಮುಂದಿನ 5 ವರ್ಷಗಳ ಅವಧಿಗೆ ಗುತ್ತಿಗೆ ಅವಧಿಯನ್ನು ನವೀಕರಿಸುವ ಮಾನ್ಯ ಆಯುಕ್ತರ ದಿನಾಂಕ: 19-01-2012ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 07-02-2012ರ ನಿರ್ಣಯ.

***ನಿರ್ಣಯ :-*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 07.02.2012ರ ನಿರ್ಣಯವನ್ನು ಒಪ್ಪಿದೆ.**

## *03]. ವಿಷಯದ ಸಂಖ್ಯೆ :–ತೆಆಸ್ಥಾಸ/509/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/148/11–12, ದಿನಾಂಕ: 12–01–2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ.108ರ ರಾಜಾಜಿನಗರ, 8 ಮತ್ತು 9ನೇ ಅಡ್ಡರಸ್ತೆ, 5ನೇ ಬ್ಲಾಕ್‌ನಲ್ಲಿರುವ ಪಾಲಿಕೆಯ ಸ್ವತ್ತಿನ ಅಳತೆ 120X80=9600 ಚದರ ಅಡಿ ಜಾಗವನ್ನು ಬೆಂಗಳೂರು ಉತ್ತರ ರೋಟರಿ ಟ್ರಸ್ಟ್‌ಗೆ ದಿನಾಂಕ:23–04–1975 ರಲ್ಲಿ ಮಾಸಿಕ ರೂ.50/– ರಂತೆ 35 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿದ್ದು, ಸದರಿ ಗುತ್ತಿಗೆ ಅವಧಿಯು 2010ಕ್ಕೆ ಮುಕ್ತಾಯಗೊಂಡಿರುತ್ತದೆ. ಸರ್ಕಾರದ ಪತ್ರದ ಸಂಖ್ಯೆ ನ.ಅ.ಇ/406/ಎಂಎನ್‌ಜಿ/2011 ದಿ:17–10–2011ರ ಪತ್ರದಲ್ಲಿ ಸದರಿ ಗುತ್ತಿಗೆ ಅವಧಿಯನ್ನು ಮುಂದಿನ 35 ವರ್ಷಗಳ ಅವಧಿಗೆ ನವೀಕರಿಸುವಂತೆ ಅಥವಾ ನಾಮಮಾತ್ರ ಬೆಲೆಗೆ ನೀಡುವಂತೆ ಸದರಿ ಸಂಸ್ಥೆಯು ಕೋರಿದ್ದು, ಈ ಬಗ್ಗೆ ನಿಯಮಾನುಸಾರ ಪರಿಶೀಲಿಸಿ, ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸರ್ಕಾರವು ತಮ್ಮ ಪತ್ರದಲ್ಲಿ ಕೋರಿರುತ್ತದೆ.

ಸದರಿ ರೋಟರಿ ಟ್ರಸ್ಟ್ ತಮ್ಮ ವತಿಯಿಂದ ಉಚಿತವಾಗಿ ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆಯನ್ನು ರಿಯಾಯಿತಿ ದರದಲ್ಲಿ ಮಾಡುತ್ತಿರುವುದು ಕಂಡುಬಂದಿರುತ್ತದೆ ಹಾಗೂ ಸಂಸ್ಥೆಯ ಗುತ್ತಿಗೆ ಅವಧಿಯು ಮುಗಿದ ದಿನಾಂಕದವರೆಗೆ ಗುತ್ತಿಗೆ ಮೊತ್ತ ಪಾವತಿಸಿರುತ್ತಾರೆ. ಸಂಸ್ಥೆಯ ಮನವಿಯ ಮೇರೆಗೆ ಪ್ರಸ್ತುತ ಜಾಗದ ಗುತ್ತಿಗೆ ಅವಧಿಯನ್ನು ಮುಂದಿನ 35 ವರ್ಷಗಳ ಅವಧಿಗೆ ನವೀಕರಿಸಬಹುದೆಂದು ವಲಯಾಧಿಕಾರಿಗಳು ವರದಿ ಮಾಡಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 120*80=9600 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿ:21–09–2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರ ಚದರ ಅಡಿ ಒಂದಕ್ಕೆ ರೂ.4150/– ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 4150X9600=3,98,40000/–ರೂ. ಒಟ್ಟು ಮೊತ್ತಗಳಾಗುತ್ತದೆ. ಶೇ:10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.39,84,000/– ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.3,32,000/– ಗಳಾಗುತ್ತದೆ.

ದಿನಾಂಕ:01–03–2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು, ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ರೋಟರಿ ಟ್ರಸ್ಟ್‌ಗೆ ಗುತ್ತಿಗೆ ನೀಡಿರುವ ಜಾಗದ ಅವಧಿಯನ್ನು ಮುಂದಿನ 35 ವರ್ಷಗಳ ಅವಧಿಗೆ ನವೀಕರಿಸಿ ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ದಿನಾಂಕ: 12–01–2012ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 07–02–2012ರ ನಿರ್ಣಯ.

***ನಿರ್ಣಯ :–*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 07.02.2012ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.10,000/– (ಹತ್ತು ಸಾವಿರ) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *04]. ವಿಷಯದ ಸಂಖ್ಯೆ :–ತೆಆಸ್ಥಾಸ/511/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/165/11–12, ದಿನಾಂಕ: 10–01–2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಶ್ರೀ ಎಸ್. ಮಂಜುನಾಥ ಅಂಗವಿಕಲರು ರವರಿಗೆ ಹಳೇ ವಾರ್ಡ್–35 ಹೊಸ ವಾರ್ಡ್ 125, ವಿಜಯನಗರ, 3ನೇ ಮುಖ್ಯರಸ್ತೆ, ಮಾರೇನಹಳ್ಳಿ, ಮಾರುತಿಮಂದಿರ ಬಸ್ ನಿಲ್ದಾಣದ ಬಳಿಯ 4*4=16 ಚದರ ಅಡಿಗಳ ಜಾಗವನ್ನು ದೂರವಾಣಿ ಬೂತ್ ನಡೆಸಲು ಮಾಸಿಕ ರೂ.280/– ರಂತೆ ದಿ:28–07–2007 ರಿಂದ 3 ವರ್ಷಗಳ ಅವಧಿಗೆ ಗುತ್ತಿಗೆ ನೀಡಿದ್ದು, ಸದರಿ ಗುತ್ತಿಗೆ ಅವಧಿ ದಿನಾಂಕ: 28–07–2011 ರಂದು ಮುಕ್ತಾಯವಾಗಿರುತ್ತದೆ. ಹಾಗೂ 3 ವರ್ಷದ ಮಾಸಿಕ ಬಾಡಿಗೆ ಪಾವತಿಸಿರುತ್ತಾರೆ. ಹಾಗೂ ಸದರಿ ಗುತ್ತಿಗೆ ಅವಧಿಯನ್ನು ಮುಂದಿನ 3 ವರ್ಷಗಳ ಅವಧಿಗೆ ನವೀಕರಿಸುವಂತೆ ಕೋರಿರುತ್ತಾರೆ.

ಸದರಿ ವಲಯದ ಕಾರ್ಯಪಾಲಕ ಅಭಿಯಂತರರು ತಮ್ಮ ವರದಿಯಲ್ಲಿ ಸದರಿ ಸ್ಥಳದಲ್ಲಿ ದೂರವಾಣಿ ಬೂತ್ ನಡೆಸುವುದರಿಂದ ವಾಹನ ಸಂಚಾರಕ್ಕೆ ಮತ್ತು ಪಾದಚಾರಿ ಮಾರ್ಗಕ್ಕೆ ಯಾವುದೇ ತೊಂದರೆಯಾಗುವುದಿಲ್ಲವೆಂದು ವರಧಿ ನೀಡಿದ್ದು, ಸದರಿ ಗುತ್ತಿಗೆ ಅವಧಿಯನ್ನು ನವೀಕರಿಸಬಹುದೆಂದು ತಿಳಿಸಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 4X4=16 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿ:21-09-2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.3,900/- ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 3900X16=62,400/-ರೂ. ಒಟ್ಟು ಮೊತ್ತಗಳಾಗುತ್ತದೆ. ಶೇ:10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.6,240/- ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.748/- ಗಳಾಗುತ್ತದೆ.

ದಿನಾಂಕ:01-03-2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು, ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿ ಶ್ರೀ.ಎಸ್. ಮಂಜುನಾಥ ಇವರಿಗೆ ನೀಡಿರುವ ಸ್ಥಳದ ಗುತ್ತಿಗೆ ಅವಧಿಯನ್ನು ನವೀಕರಿಸುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆಯ ಮುಂದೆ ಸೂಕ್ತ ಸೂಕ್ತ ನಿರ್ಣಯಕ್ಕಾಗಿ ಮಂಡಿಸಲಾದ ಟಿಪ್ಪಣಿ ಮೇರೆಗೆ, ಶ್ರೀ ಎಸ್. ಮಂಜುನಾಥ ರವರು ಅಂಗವಿಕಲರಾಗಿರುವ ಹಿನ್ನೆಲೆಯಲ್ಲಿ ದೂರವಾಣಿ ಬೂತ್ ನಡೆಸಲು ಈ ಹಿಂದೆ ನೀಡಲಾಗಿರುವ 4*4=16 ಚದರ ಅಡಿಗಳ ಸ್ವತ್ತಿನ ಗುತ್ತಿಗೆ ಅವಧಿಯನ್ನು ಮುಂದಿನ 3 ವರ್ಷಗಳ ಅವಧಿಗೆ ನವೀಕರಿಸುವ ಮಾನ್ಯ ಆಯುಕ್ತರ ದಿನಾಂಕ:10-01-2012ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 07.02.2012ರ ನಿರ್ಣಯ.

***ನಿರ್ಣಯ :-*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 07.02.2012ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.400/- (ನಾಲ್ಕು ನೂರು) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *05]. ವಿಷಯದ ಸಂಖ್ಯೆ :-ತೆಆಸ್ಥಾಸ/512/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಎ3(2)ಪಿಆರ್/413/10-11, ದಿನಾಂಕ: 21-01-2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ವಾರ್ಡ್-90, ಸ್ವತ್ತಿನ ಸಂಖ್ಯೆ: 'ಸಿ' ನಂ.2, ಸ್ಟ್ರೀಟ್, ಅಲಸೂರು ಸಿವಿಲ್ ಸ್ಟೇಷನ್, ಬೆಂಗಳೂರು ಇಲ್ಲಿನ 515 ಚದರ ಅಡಿಗಳ ಜಾಗವನ್ನು ಲೇ॥ ಶ್ರೀ.ಎಸ್.ದೊರೈಸ್ವಾಮಿ ಹೆಡ್ ಗ್ಯಾಂಗ್‌ಮೆನ್ ಕಾಮಗಾರಿ ಇಲಾಖೆ ರವರಿಗೆ ವಾಸದ ಉಪಯೋಗಕ್ಕಾಗಿ ಖಾಲಿ ನಿವೇಶನವನ್ನು 40 ವರ್ಷಗಳ ಅವಧಿಗೆ (ದಿನಾಂಕ:21-08-1959 ರಿಂದ 20-08-1999) ಮಾಸಿಕ ನೆಲಬಾಡಿಗೆ 1-00/- ನಂತೆ ನೆಲ ಬಾಡಿಗೆ ವಿಧಿಸಿ ಗುತ್ತಿಗೆಗೆ ನೀಡಲಾಗಿದ್ದು, ಗುತ್ತಿಗೆ ಅವಧಿ ಮುಗಿದ ಕಾರಣ ಸಹ ಕಂದಾಯ ಅಧಿಕಾರಿ (ಶಿವಾಜಿನಗರ) ರವರ ಕಛೇರಿಯಿಂದ ದಿನಾಂಕ:02-12-2009, 18-01-2010, 24-05-2010 ನೋಟೀಸ್ ಜಾರಿ ಮಾಡಿ ಪುನ: ದಿನಾಂಕ:29-07-2010 ರಂತೆ ಕೆ.ಪಿ.ಪಿ.ಕಾಯ್ದೆಯನ್ವಯ 4(1) ಹಾಗೂ 5(1) ನೋಟೀಸ್ ಜಾರಿ ಮಾಡಲಾಗಿದೆಯೆಂದು ವರದಿ ಮಾಡಿರುತ್ತಾರೆ.

ತದನಂತರ ಗುತ್ತಿಗೆದಾರ ಶ್ರೀ.ಎಸ್.ದೊರೈಸ್ವಾಮಿ ರವರ ಮೊಮ್ಮಗಳು ಶ್ರೀಮತಿ. ವಿಜಯಲಕ್ಷ್ಮೀ ಹಾಲಿ ಸ್ಥಳದಲ್ಲಿ ವಾಸಿಸುತ್ತಿರುವ ಇವರು ಮನವಿ ಸಲ್ಲಿಸಿ ಶ್ರೀ.ಎಸ್.ದೊರೈಸ್ವಾಮಿಯವರು ದಿನಾಂಕ:09-10-1984 ರಲ್ಲಿ ಮರಣ ಹೊಂದಿರುವುದಾಗಿ ಮರಣ ಸಮರ್ಥನ ಪತ್ರ ಗುತ್ತಿಗೆ ಕರಾರು ಪತ್ರದ ಪ್ರತಿ ತೆರಿಗೆ ಪಾವತಿ ರಸೀದಿಯ ಪ್ರತಿಗಳನ್ನು ಲಗತ್ತಿಸಿ ನಾನು ದೊರೈಸ್ವಾಮಿಯವರ ಮೊಮ್ಮಗಳೆಂದು ಗುತ್ತಿಗೆಗೆ ನೀಡಿರುವ ಮನೆಯಲ್ಲಿ ವಾಸಿಸುತ್ತಿರುವುದಾಗಿ ನಮಗೆ ಬೇರೆ ಮನೆಯಿಲ್ಲವೆಂದು ಸದರಿ ಜಾಗವನ್ನು ಗುತ್ತಿಗೆ ನವೀಕರಿಸುವಂತೆ ಅಥವಾ ಕ್ರಯಕ್ಕೆ ನೀಡುವಂತೆ ಕೋರಿರುತ್ತಾರೆ.

ಗುತ್ತಿಗೆ ನವೀಕರಿಸುವಂತೆ ಕೋರಿರುವ ಸ್ವತ್ತಿನ ಅಳತೆ 515 ಚದರ ಅಡಿಗಳಾಗಿದ್ದು ನೋಂದಾಣಿ ಮತ್ತು ಮುದ್ರಾಂಕ ಇಲಾಖೆ ಅಧಿಸೂಚನೆ 19-04-2007ರ ಮಾರ್ಗಸೂಚಿ ದರದಂತೆ ಪ್ರಸ್ತುತ ಆಸ್ತಿಯ ಮಾರುಕಟ್ಟೆ ಮೌಲ್ಯ ಚದರ ಅಡಿ 1ಕ್ಕೆ ರೂ.1500/- ಗಳಿದ್ದು, ಸ್ವತ್ತಿನ ಮಾರುಕಟ್ಟೆ ಮೌಲ್ಯ (1500*515=7,72,500) ರೂ.7,72,500/- ಗಳಾಗುತ್ತದೆ. ಸ್ವತ್ತಿನ ಮಾರುಕಟ್ಟೆ ಮೌಲ್ಯದ ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ ರೂ.77,250/- ಗಳಾಗುತ್ತದೆ. ಮಾಸಿಕ ರೂ.6438/- ಗಳಾಗುತ್ತದೆ.

ಆದುದರಿಂದ, ಮೂಲ ಗುತ್ತಿಗೆದಾರ ಶ್ರೀ.ಎಸ್.ದೊರೈಸ್ವಾಮಿ ರವರ ಮೊಮ್ಮಗಳ ಹೆಸರಿಗೆ ಗುತ್ತಿಗೆ ವರ್ಗಾವಣೆ ಮಾಡಿ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಕರಾರು ಪತ್ರ ನೊಂದಾಯಿಸುವ ದಿನಾಂಕದವರೆವಿಗೂ ಹಳೆಯ ದರದಂತೆ ಹೊಸದಾಗಿ ಕರಾರು ಪತ್ರ ನೊಂದಾಯಿಸುವ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಮಾರುಕಟ್ಟೆ ಬೆಲೆಯ ಶೇ 10% ರಂತೆ ಮಾಸಿಕ ರೂ.6438/- ಗಳಂತೆ ಗುತ್ತಿಗೆ ವಿಧಿಸಿ ನವೀಕರಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯ ನಿರ್ಣಯದೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅನುಮೋದನೆ ಪಡೆಯಬೇಕಾಗಿದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆ ಮುಂದೆ ಟಿಪ್ಪಣಿ ಮಂಡಿಸಲಾಗಿ ವಿಷಯದ ಸಂಖ್ಯೆ:35(57)2011-12 ದಿನಾಂಕ:28-06-2011 ರಂದು ಪಾಲಿಕೆ ಸಭೆಯಲ್ಲಿ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಮರುಮಂಡಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಡತವನ್ನು ಹಿಂದಿರುಗಿಸಲಾಗಿ ವಿಷಯದ ಸಂಖ್ಯೆ:ನಯೋಅಸ್ಥಾಸ/101/2010-11, ದಿನಾಂಕ:02-08-2011 ರಂದು ದಿನಾಂಕ:10-03-2011ರ ಆಯುಕ್ತರ ಟಿಪ್ಪಣಿಯನ್ನು ತಿರಸ್ಕರಿಸುತ್ತಾ ಸ್ವತ್ತನ್ನು ಪಾಲಿಕೆ ವಶಕ್ಕೆ ತೆಗೆದುಕೊಳ್ಳಲು ತೀರ್ಮಾನಿಸಲಾಗಿರುತ್ತದೆ.

ಈ ವಿಷಯದ ಬಗ್ಗೆ ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ಬಿಬಿಎಂಪಿ ರವರು ದಿನಾಂಕ:19-09-2011 ರಂದು ಪತ್ರ ಬರೆದು ಸಮಿತಿಯ ಮುಂದೆ ಸೂಕ್ತ ತೀರ್ಮಾನ ಕೈಗೊಳ್ಳಲು ಮರು ಮಂಡಿಸಲು ಕೋರಿರುವುದರಿಂದ ಎಸ್.ದೊರೈಸ್ವಾಮಿ ಹೆಡ್ ಗ್ಯಾಂಗ್ ಮೆನ್ ರವರ ಮೊಮ್ಮಗಳ ಹೆಸರಿಗೆ ಗುತ್ತಿಗೆ ವರ್ಗಾಯಿಸಿ ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆ ಮುಂದೆ ಮರುಮಂಡಿಸಲಾದ ಟಿಪ್ಪಣಿ ಮೇರೆಗೆ, ಮಾನ್ಯ ಆಯುಕ್ತರ ದಿನಾಂಕ: 21-01-2012ರ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ, ಎಸ್.ದೊರೈಸ್ವಾಮಿ ಹೆಡ್ ಗ್ಯಾಂಗ್ ಮೆನ್ ರವರ ಮೊಮ್ಮಗಳು ಶ್ರೀಮತಿ. ವಿಜಯಲಕ್ಷ್ಮೀ ರವರ ಹೆಸರಿಗೆ ಗುತ್ತಿಗೆ ವರ್ಗಾಯಿಸಿ, 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ಸಮಿತಿಯು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 07-02-2012ರ ನಿರ್ಣಯ.

***<u>ನಿರ್ಣಯ :-</u>*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 07.02.2012ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.1000/- (ಒಂದು ಸಾವಿರ) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ***<u>06]. ವಿಷಯದ ಸಂಖ್ಯೆ :-ತೆಆಸ್ಥಾಸ/513/2011-12</u>***

ವಿಶೇಷ ಆಯುಕ್ತರ ಟಿಪ್ಪಣಿ ಸಂಖ್ಯೆ : ಎಲ್ಎಕ್ಯೂ/ಸಿಆರ್/16/2011-12, ದಿನಾಂಕ: 21-01-2012ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ-189ರ ಬೊಮ್ಮನಹಳ್ಳಿ ವಲಯದ ಬೇಗೂರು ಹೋಬಳಿ, ಹೊಂಗಸಂದ್ರ ಗ್ರಾಮದ ಹೊಸ ಸರ್ವೆ ನಂ. 69/1 (ಹಳೆಯದು ನಂ.69) ರ ಖಾಸಗಿ ಸ್ವತ್ತಿನ ಭಾಗಶಃ ವಿಸ್ತೀರ್ಣವನ್ನು ಪಾಲಿಕೆಯು ಅತಿಕ್ರಮಿಸಿ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳದೆ ಬೃಹತ್ ಮಳೆ ನೀರುಗಾಲುವೆ ನಿರ್ಮಾಣ ಮಾಡುತ್ತಿರುವುದರ ವಿರುದ್ಧ ಸ್ವತ್ತಿನ ಮಾಲೀಕರು ನ್ಯಾಯಾಲಯದಲ್ಲಿ ಓ.ಎಸ್.ನಂ.6421/2009 ರನ್ವಯ ದಾವೆ ದಾಖಲು ಮಾಡಿರುತ್ತಾರೆ. ಈ ಬಗ್ಗೆ ಮುಖ್ಯ ಇಂಜಿನಿಯರ್ (ಬೃಹತ್ ನೀರುಗಾಲುವೆ) ರವರ ಕಛೇರಿಯಲ್ಲಿ ಸ್ವತ್ತಿನ ಮಾಲೀಕರುಗಳೊಂದಿಗೆ ಮುಖ್ಯ ಇಂಜಿನಿಯರ್ ರವರ ಸಮ್ಮುಖದಲ್ಲಿ ಬೊಮ್ಮನಹಳ್ಳಿ ವಲಯದ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರು ಚರ್ಚಿಸಿದಂತೆ, ದಿನಾಂಕ: 28-04-2011 ರಂದು ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡಿ ಸದರಿ ಜಾಗದಲ್ಲಿರುವ ಅಪಾರ್ಟ್‌ಮೆಂಟ್ ಕಟ್ಟಡಕ್ಕೆ ಹಾಗೂ ನಿವೇಶನಕ್ಕೆ ಹೆಚ್ಚಿನ ಧಕ್ಕೆಯಾಗದಂತೆ ಮಳೆನೀರುಗಾಲುವೆ ನಿರ್ಮಿಸಲು ಸ್ವತ್ತನ್ನು ಭೂಸ್ವಾಧೀನಪಡಿಸಿಕೊಳ್ಳಲು ಮಾಲೀಕರು ಒಪ್ಪಿರುತ್ತಾರೆಂದು, ಆದಷ್ಟು ಶೀಘ್ರವಾಗಿ ಸ್ವತ್ತಿನ ಮಾಲೀಕರಿಗೆ ಭೂಪರಿಹಾರವನ್ನು ಪಾವತಿಸಲು ಭೂಸ್ವಾಧೀನ ಪ್ರಕ್ರಿಯೆಯನ್ನು ಕೂಡಲೇ ಕೈಗೊಳ್ಳುವಂತೆ ಕೋರಿ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ಯೋಜನೆ ಹಾಗೂ ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಆರ್.ಟಿ.ಸಿ.ದಾಖಲೆಯಂತೆ ಹೊಂಗಸಂದ್ರ ಗ್ರಾಮದ ಹೊಸ ಸರ್ವೆ ನಂ.69/1 (ಹಳೆಯದು ನಂ.69), ರ ಜಮೀನು ಹಿಡುವಳಿ ಜಮೀನಾಗಿದ್ದು, 1 ಗುಂಟೆ ಖರಾಬು ಸೇರಿದಂತೆ ಒಟ್ಟು 1 ಎಕರೆ 2 ಗುಂಟೆ ವಿಸ್ತೀರ್ಣ ಇರುತ್ತದೆ. ಈ ಒಟ್ಟು ವಿಸ್ತೀರ್ಣದಲ್ಲಿ 20 ಗುಂಟೆಯನ್ನು ಎಸ್.ಆರ್.ನಂ. 3616/1990-91ರಂತೆ ದಿನಾಂಕ: 27-2-1991ರಲ್ಲಿ ಶ್ರೀ ಬಿ.ಬಕ್ಕಿರೆಡ್ಡಿ ಬಿನ್ ಲೇಟ್ ಬಜ್ಜರೆಡ್ಡಿ ಮತ್ತು ಬಿ. ರಾಮಸ್ವಾಮಿರೆಡ್ಡಿ ಲೇಟ್ ಬಜ್ಜರೆಡ್ಡಿ ರವರು ಜಂಟಿಯಾಗಿ ಶುದ್ಧಕ್ರಯಕ್ಕೆ ಕೊಂಡುಕೊಂಡಿರುತ್ತಾರೆ. ಎಮ್.ಆರ್.ನಂ.65/1991-92ರಲ್ಲಿ ಕಂದಾಯ ಖಾತೆಯನ್ನು ಈ ಇಬ್ಬರಿಗೆ ಜಂಟಿಯಾಗಿ

ನೊಂದಾಯಿಸಲಾಗಿದೆ. ಕ್ರಯಪತ್ರದ ಪ್ರತಿ ಸಲ್ಲಿಸಲಾಗಿದೆ. ಈ ಸ್ವತ್ತಿಗೆ ತಹಲ್‌ವರೆಗೆ ಪಾಲಿಕೆಯಲ್ಲಿ ಆಸ್ತಿ ತೆರಿಗೆ ಪಾವತಿಸಲಾಗಿದೆ. ಈ ಬಗ್ಗೆ ರಸೀದಿ ಪ್ರತಿ ಸಲ್ಲಿಸಿರುತ್ತಾರೆ. ಈ ಸ್ವತ್ತು ಪಾಲಿಕೆಯ ವ್ಯಾಪ್ತಿಯಲ್ಲಿದ್ದರೂ, ಈ ಸ್ವತ್ತಿಗೆ ಭೂಪರಿವರ್ತನೆ ಆದೇಶವಾಗಲೀ, ಪಾಲಿಕೆಯಲ್ಲಿ ಖಾತೆ ನೊಂದಾಯಿಸಿರುವ ಬಗ್ಗೆಯಾಗಲೀ ಯಾವುದೇ ದಾಖಲೆ ಸಲ್ಲಿಸಿರುವುದಿಲ್ಲ. ಲಭ್ಯ ದಾಖಲೆಗಳ ಆಧಾರದ ಮೇಲೆ ಹಾಗೂ ಭೂಮಾಪಕರು ತಯಾರಿಸಿ ಕಾಮಗಾರಿ ಇಲಾಖೆಯಿಂದ ದೃಢೀಕರಿಸಿರುವ ನಕ್ಷೆ ಹಾಗೂ ಪ್ರಸ್ತಾವನೆಯಂತೆ ಭೂಸ್ವಾಧೀನಕ್ಕೆ ಒಳಪಡುವ ಸ್ವತ್ತಿನ ವಿವರ ಈ ಕೆಳಕಂಡಂತಿದೆ:–

| ಕ್ರಮ ಸಂಖ್ಯೆ | ಗ್ರಾಮದ ಹೆಸರು | ಸರ್ವೆ ನಂ. | ಮಾಲೀಕರ/ ಅನುಭವದಾರರ ಹೆಸರು | ಭೂಸ್ವಾಧೀನಕ್ಕೆ ಒಳೊಪಡುವ ಅಂದಾಜು ವಿಸ್ತೀರ್ಣ (ಚ. ಅ.) | ತರಹೆ |
|---|---|---|---|---|---|
| 1 | ಹೊಂಗಸಂದ್ರ | 69/1 | ಬಿ.ಬಕ್ಕಿರೆಡ್ಡಿ ಬಿನ್ ಲೇಟ್ ಬಜ್ಜರೆಡ್ಡಿ ಮತ್ತು ಬಿ. ರಾಮಸ್ವಾಮಿರೆಡ್ಡಿ ಲೇಟ್ ಬಜ್ಜರೆಡ್ಡಿ (ಜಂಟಿ) | 5445.00<br>0 ಎಕರೆ 05 ಗುಂಟೆ | ಖಾಲಿ ನಿವೇಶನ |

ಮೇಲ್ಕಂಡ ಸ್ವತ್ತು ಕೃಷಿ ಜಮೀನಾಗಿದ್ದು, ಭೂಪರಿವರ್ತನೆ ಆದೇಶ ಹಾಗೂ ಪಾಲಿಕೆಯಲ್ಲಿ ಖಾತೆ ನೋಂದಾವಣೆಯಾಗಿಲ್ಲದೇ ಇರುವುದರಿಂದ, ದಿನಾಂಕ: 21–09–2011ರ ಸರ್ಕಾರದ ಕೇಂದ್ರ ಮೌಲ್ಯ ಮಾಪನ ಸಮಿತಿಯ ಅಧಿಸೂಚನೆ ಸಂಖ್ಯೆ: ಸಿವಿಸಿ/19/2010–11ರ ಸ್ಥಿರಾಸ್ತಿಗಳ ಅಂದಾಜು ಮಾರುಕಟ್ಟೆ ಮಾರ್ಗಸೂಚಿ ದರದನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಹೊಂದದ ವಾಸೋಪಯೋಗಿ ಸ್ವತ್ತುಗಳಿಗೆ ಕೃಷಿ ದರದ ಮೇಲೆ 50% ಹೆಚ್ಚಿಗೆ ದರವನ್ನು ಅಳವಡಿಸುವುದು ಸೂಕ್ತವಾಗಿರುತ್ತದೆ. ಸ್ವತ್ತಿನ ಖಾತೆದಾರರು ನ್ಯಾಯಾಲಯದಲ್ಲಿ ದಾಖಲಿಸಿರುವ ದಾವೆಯಲ್ಲಿ ಮತ್ತು ಈ ಕಛೇರಿಗೆ ಸಲ್ಲಿಸಿರುವ ಮನವಿಪತ್ರದಲ್ಲಿ ಕೋರಿರುವಂತೆ ಬಿ.ಬಿ.ಎಂ.ಪಿ ವ್ಯಾಪ್ತಿಗೆ ಒಳಪಡುವ ನಿವೇಶನಗಳಿಗಿರುವ ದರ ಚದರ ಅಡಿಗೆ ರೂ. 1000/– ಗಳನ್ನು ಪರಿಹಾರವಾಗಿ ನೀಡುವ ಬಗ್ಗೆ ಭೂಸ್ವಾಧಿನ ಕಾಯ್ದೆಯ ಕಲಂ 5 (ಎ) ವಿಚಾರಣೆಯಲ್ಲಿ ಅವರು ಸಲ್ಲಿಸುವ ದಾಖಲೆಗಳು, ಹೇಳಿಕೆಗಳನ್ನು ಪರಿಶೀಲಿಸಿ ಅಂತಿಮ ಅವಾರ್ಡ್ ರಚಿಸುವ ಸಂದರ್ಭದಲ್ಲಿ ಪರಿಗಣಿಸಬಹುದಾಗಿದೆ ಎಂದು ಅಭಿಪ್ರಾಯಪಡಲಾಗಿದೆ. ಆದ್ದರಿಂದ ದಿನಾಂಕ:21–09–2011ರ ಸರ್ಕಾರದ ಕೇಂದ್ರ ಮೌಲ್ಯ ಮಾಪನ ಸಮಿತಿಯ ಅಧಿಸೂಚನೆ ಸಂಖ್ಯೆ: ಸಿವಿಸಿ/19/2010–11ರ ಸ್ಥಿರಾಸ್ತಿಗಳ ಅಂದಾಜು ಮಾರುಕಟ್ಟೆ ಮಾರ್ಗಸೂಚಿ ದರದನ್ವಯ ಈ ಸ್ವತ್ತಿನ ಅಂದಾಜು ಮಾರುಕಟ್ಟೆ ಕೃಷಿ ದರ ಎಕರೆಗೆ 150 ಲಕ್ಷಗಳನ್ನು ನಿಗದಿಪಡಿಸಲಾಗಿದ್ದು, ಭೂಸ್ವಾಧೀನಕ್ಕೆ ಒಳಪಡುವ 5 ಗುಂಟೆಯ (5445 ಚ.ಅ.) ಮೌಲ್ಯ ಚದರ ಅಡಿಗೆ ರೂ.516/– ಗಳಂತೆ (ರೂ.344+50%) ಒಟ್ಟು ರೂ. 28,09,620/–ಗಳಾಗುತ್ತದೆ. ಈ ಮೌಲ್ಯಕ್ಕೆ ಭೂಸ್ವಾಧೀನ ಕಾಯ್ದೆಯಂತೆ ಭೂಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗಿದೆ.

**"ಅ"–ಭೂ ಪರಿಹಾರ ವೆಚ್ಚ**

| ಕ್ರಮ ಸಂ | ವಿವರಣೆ | ಮೊಬಲಗೂ ರೂ. ಗಳಲ್ಲಿ |
|---|---|---|
| 1 | ದಿನಾಂಕ: 21–09–2011ರ ಸರ್ಕಾರದ ಮಾರ್ಗಸೂಚಿ ದರದಂತೆ, ಚ.ಅಡ ಒಂದಕ್ಕೆ ರೂ. 516/– 5445 ಚ. ಅಡಿಗಳಿಗೆ | 28,09,620/– |
| 2 | ಈ ಮೊಬಲಗಿಗೆ 1894ರ ಭೂಸ್ವಾಧೀನ ಕಾಯ್ದೆಯ ಕಲಂ.23(2)ರ ಅನ್ವಯ ಶೇಕಡಾ 30ರಂತೆ ಶಾಸನ ಬದ್ಧ ಭತ್ಯೆ | 8,42,886/– |
| 3 | 1894ರ ಭೂಸ್ವಾಧೀನ ಕಾಯ್ದೆಯ ಕಲಂ 23(1)ಎರ ಅನ್ವಯ ಮಾರಕಟ್ಟೆ ಬೆಲೆ ಮೇಲೆ ಶೇಕಡಾ 12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (ಒಂದು ವರ್ಷಕ್ಕೆ) | 3,37,154/– |
| | **ಒಟ್ಟು (1+2+3)** | **39,89,660/–** |

**"ಆ"–ಇತರೆ ವೆಚ್ಚ**

| | | |
|---|---|---|
| 4 | ಸಿಬ್ಬಂದಿ ವೆಚ್ಚ ಶೇಕಡಾ 10 ರಷ್ಟು | – |
| 5 | ಆಡಿಟ್ ವೆಚ್ಚ ಶೇಕಡಾ 1 ರಷ್ಟು | – |
| 6 | ಪ್ರಕಟಣಾ ವೆಚ್ಚ (ಅಂದಾಜು) | **1,00,000/–** |
| | **ಒಟ್ಟು (1+2+3+6)** | **40,89,660** |

ಷರಾ: ದಿನಾಂಕ: 5-9-1963ರ ಸರ್ಕಾರದ ಅಧಿಸೂಚನೆ ಸಂಖ್ಯೆ ಎಫ್‌ಡಿ 126 ಆರ್‌ಎಫ್‌ಸಿ 60, ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಛೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೆಲಿನ ಕ್ರಮ ಸಂಖ್ಯೆ 4 ಮತ್ತು 5ರಲ್ಲಿನ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಾಚಾರದಿಂದ ಕೈಬಿಡಲಾಗಿದೆ.

**(ನಲವತ್ತು ಲಕ್ಷದ ಎಂಭತ್ತೊಂಬತ್ತು ಸಾವಿರದ ಆರುನೂರ ಅರವತ್ತು ರೂ.ಗಳು ಮಾತ್ರ)**

ಮೇಲೆ ನಮೂದಿಸಿರುವ ಸ್ವತ್ತುಗಳನ್ನು ಭೂಸ್ವಾಧೀನ ಕಾಯ್ದೆ 1894ರನ್ವಯ ಭೂಸ್ವಾಧೀನಪಡಿಕೊಳ್ಳಲು ಹಾಗೂ ಇದಕ್ಕೆ ತಗಲುವ ಭೂ ಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ. 40,89,660/-(ನಲವತ್ತು ಲಕ್ಷದ ಎಂಭತ್ತೊಂಬತ್ತು ಸಾವಿರದ ಆರುನೂರ ಅರವತ್ತು ರೂ.ಗಳು ಮಾತ್ರ) ಗಳನ್ನು ಪಾಲಿಕೆಯ 2011-12ನೇ ಸಾಲಿನ ಆಯ್ಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಾಮಾನ್ಯ ಸಭೆಯ ಮಂಡಿಸಲಾದ ಟಿಪ್ಪಣಿ ಮೇರೆಗೆ, ಮಾನ್ಯ ವಿಶೇಷ ಆಯುಕ್ತರ ದಿನಾಂಕ: 21-01-2012ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 07-02-2012ರ ನಿರ್ಣಯ.

***ನಿರ್ಣಯ :-*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 07.02.2012ರ ನಿರ್ಣಯವನ್ನು ಒಪ್ಪಿದೆ.**

## *07]. ವಿಷಯದ ಸಂಖ್ಯೆ :-ತೆಆಸ್ಥಾಸ/514/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/315/10-11, ದಿನಾಂಕ: 07-01-2012 ಲ್ಲಿ ವಿವರಿಸಿರುವಂತೆ ವಾರ್ಡ್ 71ರ ವಿವೇಕನಗರದ ಬಸ್ ನಿಲ್ದಾಣದ ಎದುರಿನಲ್ಲಿರುವ ಪಾಲಿಕೆಯ ಕಟ್ಟಡದ 1ನೇ ಅಂತಸ್ತಿನಲ್ಲಿರುವ ಕೊಠಡಿಯನ್ನು ಜೈ ಕರ್ನಾಟಕ ಸಂಘಕ್ಕೆ ಕನ್ನಡ ಕಲಿಸುವ ತರಗತಿಗಳನ್ನು ನಡೆಸಲು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ದಿನಾಂಕ:02-03-1996 ರಿಂದ ಒಂದು ವರ್ಷದ ಅವಧಿಗೆ (ದಿನಾಂಕ:02-03-1996 ರಿಂದ 01-03-1997) ಒಂದು ವರ್ಷದ ಅವಧಿಗೆ ಮಾಹೆಯಾನ 50/-ರೂ ಗಳಂತೆ ನಿಗಧಿಪಡಿಸಿ ಗುತ್ತಿಗೆಗೆ ನೀಡಲಾಗಿದ್ದು, ಗುತ್ತಿಗೆ ಅವಧಿಯು ದಿನಾಂಕ:01-03-1997 ರಂದು ಮುಕ್ತಾಯವಾಗಿರುತ್ತದೆ.

ತದನಂತರ ದಿನಾಂಕ:31-03-2003 ರವರೆಗೆ ಹಳೆಯ ಗುತ್ತಿಗೆ ದರದಲ್ಲಿ ಗುತ್ತಿಗೆ ಮೊತ್ತ ಪಾವತಿಸಿಕೊಳ್ಳಲಾಗಿರುತ್ತದೆ. ಗುತ್ತಿಗೆ ಅವಧಿ ಮುಗಿದ ನಂತರ ವಿಷಯದ ಸಂಖ್ಯೆ ನಯೋ:89/2003-2004 ದಿನಾಂಕ:19-01-2004ರ ನಿರ್ಣಯ ಮತ್ತು ವಿಷಯದ ಸಂಖ್ಯೆ ತೆರಿಗೆ ಆರ್ಥಿಕ 165/2003-2004 ದಿನಾಂಕ: 08-03-2004 ರಂದು ನಡೆದ ಸಭೆಯ ನಡವಳಿಕೆಗಳಲ್ಲಿ ಮಾಸಿಕ ರೂ. 3044=66/- ಗಳಂತೆ ದರ ನಿಗಧಿಪಡಿಸಿ ದಿನಾಂಕ:01-10-2003 ರಿಂದ 30-09-2006 3 ವರ್ಷಗಳ ಅವಧಿಗೆ ನಿರ್ಣಯಿಸಲಾಗಿರುತ್ತದೆ.

ಆದರೆ ಸಮಿತಿಗಳ ತೀರ್ಮಾನದಂತೆ ಗುತ್ತಿಗೆ ಮೊತ್ತವನ್ನು ಕಾಲಕಾಲಕ್ಕೆ ಪಾವತಿಸದೇ ದಿನಾಂಕ: 18-01-2011ರ ಹಿಂಬರಹ ಪತ್ರದ ಮೇರೆಗೆ ಮಾಸಿಕ ರೂ.3044=6 ಗಳಂತೆ ಪಾವತಿಸಲು ಸಂಘಕ್ಕೆ ಶಕ್ತಿಯಿಲ್ಲವೆಂದು ತಿಳಿಸಿ ದಿನಾಂಕ:03-04-2011 ರಂದು ಹಳೆಯ ಗುತ್ತಿಗೆ ದರವಾದ ಮಾಸಿಕ 50/- ರೂಗಳಂತೆ ದಿನಾಂಕ:01-04-2003 ರಿಂದ 31-03-2011ರ ವರೆಗೆ ತೆರಿಗೆ ಪಾವತಿಸಿ ದಿ:28-01-2011 ರಂದು ಸಲ್ಲಿಸಿರುವ ಮನವಿ ಪತ್ರದಲ್ಲಿ 3044=66 ನಿಗಧಿಪಡಿಸಿರುವ ಮೊತ್ತವು ಜಾಸ್ತಿಯಾಗಿರುವುದಾಗಿ ನಮ್ಮ ಸಂಘಕ್ಕೆ ಯಾವುದೇ ವರಮಾನವಿರುವುದಿಲ್ಲ, ಪ್ರತಿ ತಿಂಗಳ ಲೈಟ್ ಬಿಲ್, ನೀರಿನ ಬಿಲ್, ಕಟ್ಟಡದ ನಿರ್ವಹಣೆ ಮತ್ತು ಸುಣ್ಣ ಬಣ್ಣ ಇತ್ಯಾದಿಗಳನ್ನು ಸಂಘದ ಸದಸ್ಯರೇ ಬರಿಸುತ್ತಿರುವುದಾಗಿ, ಈ ಕಟ್ಟಡದಲ್ಲಿ ಸರ್ಕಾರದ ಯೋಜನೆಗಳು ಮತ್ತು ಬಿಬಿಎಂಪಿ ಯೋಜನೆಗಳು ನಡೆಯುತ್ತಿರುವುದಾಗಿ ಈ ಹಿಂದೆ ನಿಗಧಿಪಡಿಸಿದ ಮಾಸಿಕ 50/- ರೂಗಳಂತೆ ಗುತ್ತಿಗೆ ಹಣ ನಿಗಧಿಪಡಿಸಿ ಗುತ್ತಿಗೆ ಅವಧಿಯನ್ನು 15 ವರ್ಷಗಳ ಅವಧಿಗೆ ನವೀಕರಿಸಲು ಕೋರಿದ್ದು, ವಾರ್ಡ್ 115ರ ಪಾಲಿಕೆ ಸದಸ್ಯರು ಸಹಾ ಈ ಬಗ್ಗೆ ಪತ್ರ ಬರೆದಿರುತ್ತಾರೆ.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ದೊಮ್ಮಲೂರು ಉಪ ವಿಭಾಗರವರ ವರದಿಯಂತೆ ಪ್ರಸಕ್ತ ಕಟ್ಟಡ ಗುತ್ತಿಗೆ / ಬಾಡಿಗೆ ದರವು ರೂ.4497/- ಗಳೆಂದು ವರದಿ ಮಾಡಿರುತ್ತಾರೆ.

ದಿನಾಂಕ:01–03–2002ರ ಆಯುಕ್ತರ ಸುತ್ತೋಲೆ ಕ್ರಮಸಂಖ್ಯೆ 5ರನ್ವಯ ಅಂಗವಿಕಲರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು ಸಮಾಜಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ನೀಡಲು ಪರಿಗಣಿಸಬಹುದಾಗಿದೆ. ಆದರೆ ವಿಷಯದ ಸಂಖ್ಯೆ:ನಯೋ 89/2003–04 ದಿನಾಂಕ:19–01–2004 ವಿಷಯದ ಸಂಖ್ಯೆ:165/2003–04, ದಿನಾಂಕ:08–03–2004 ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನದಂತೆ 01–10–2003 ರಿಂದ 30–09–2006ರ ವರೆಗೆ ನಿಗದಿಪಡಿಸಿರುವ ಗುತ್ತಿಗೆ ಮೊತ್ತ 3044=66 ರೂಗಳನ್ನು ಪಾವತಿಸದೇ, ತದನಂತರವೂ ದಿ:31–03–2011ರ ವರೆಗೆ ಒಂದು ವರ್ಷದ ಅವಧಿಗೆ ಗುತ್ತಿಗೆಗೆ ನೀಡಲಾದ ದರದಂತೆ ಪಾವತಿಸಿರುವುದರಿಂದ ದಿ:01–10–2003 ರಿಂದ ಹೊಸದಾಗಿ ಗುತ್ತಿಗೆ ನವೀಕರಣ ಕರಾರು ನೊಂದಾಯಿಸುವ ದಿನಾಂಕದ ಹಿಂದಿನ ದಿನಾಂಕದವರೆಗೆ ಪ್ರತ್ಯೇಕ ದರ ಹಾಗೂ ನವೀಕರಣ ಕರಾರು ನೊಂದಾಯಿಸುವ ದಿನಾಂಕದಿಂದ

ಐದು ವರ್ಷಗಳ ಅವಧಿಗೆ ಸೂಕ್ತ ಗುತ್ತಿಗೆ ಮೊತ್ತ ನಿಗಧಿಪಡಿಸಿ ನವೀಕರಿಸಲು ಸ್ಥಾಯಿ ಸಮಿತಿಗಳು ಹಾಗೂ ಬಿಬಿಎಂಪಿ ಸಭೆ ಮುಂದೆ ಟಿಪ್ಪಣಿ ಮಂಡಿಸಬೇಕಾಗಿದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ಜೈ ಕರ್ನಾಟಕ ಸಂಘಕ್ಕೆ ಕನ್ನಡ ಕಲಿಸುವ ತರಗತಿಗಳನ್ನು ನಡೆಸಲು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಪ್ರಸಕ್ತ ಮಾರುಕಟ್ಟೆ ದರವನ್ನು ನಿಗದಿಪಡಿಸಿ ಗುತ್ತಿಗೆ ಅವಧಿಯನ್ನು ಮುಂದಿನ 5 ವರ್ಷಗಳಿಗೆ ನವೀಕರಿಸುವ ಮಾನ್ಯ ಆಯುಕ್ತರ ದಿನಾಂಕ 07–01–2012ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 07–02–2012ರ ನಿರ್ಣಯ.

***ನಿರ್ಣಯ :–*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 07.02.2012ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.500/– (ಐದುನೂರು) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *08]. ವಿಷಯದ ಸಂಖ್ಯೆ :–ತೆಆಸ್ಥಾಸ/515/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/110/2005–2006, ದಿನಾಂಕ: 21–01–2012 ರಲ್ಲಿ ವಿವರಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಸಂತನಗರ ಉಪ–ವಿಭಾಗ, ವಾರ್ಡ್–93, ವಸಂತನಗರ, ಮಿಲ್ಲರ್ ಟ್ಯಾಂಕ್ ರಸ್ತೆಯಲ್ಲಿರುವ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆ ಬಳಿ ಪಾಲಿಕೆ ಸ್ವತ್ತಿನ ಅಳತೆ 6x6 ಅಡಿಗಳ ಜಾಗವನ್ನು ಶ್ರೀ ಸಂಗಣ್ಣಯಾರಿ ರವರಿಗೆ ದೂರವಾಣಿ ಬೂತ್ ನಡೆಸಲು ದಿನಾಂಕ: 08–12–2003 ರಿಂದ 07–12–2008 ರವರೆಗೆ 5 ವರ್ಷಗಳ ಅವದಿಗೆ ಅನುಮೋದನೆ ಕೋರಿದ್ದು, ಕಾರಣಾಂತರಗಳಿಂದ ಸರ್ಕಾರದ ಅನುಮೋದನಗೆ ಇಲ್ಲದೆ ಮುಂದುವರೆದಿದ್ದು, ಪುನ: ಗುತ್ತಿಗೆ ಅವದಿಯನ್ನು ಮುಂದಿನ 5 ವರ್ಷಗಳ ಕಾಲಾವಧಿಗೆ (ದಿನಾಂಕ:08–12–2008 ರಿಂದ 07–12–2013) ಗುತ್ತಿಗೆ ಅವದಿ ನವೀಕರಿಸಲು ಕೋರಿರುತ್ತಾರೆ.

ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಡವಳಿಕೆಯಂತೆ, ದಿನಾಂಕ 15–06–2006 ರಂದು ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ: 4(101)ನ್ನು ಅನುಮೋದಿಸಿ, ಗುತ್ತಿಗೆ ಅವದಿಯನ್ನು ದಿನಾಂಕ: 08–12–2008 ರವರೆಗೆ 5 ವರ್ಷಗಳ ಅವದಿಗೆ ಗುತ್ತಿಗೆ ನವೀಕರಿಸಲು ನಿರ್ಣಯಿಸಿದ್ದು, ಸದರಿ ನಿರ್ಣಯದ ಬಗ್ಗೆ ಸರ್ಕಾರದ ಅನುಮೋದನೆ ದಿನಾಂಕ: 31–07–2006 ರಂದು ಕೋರಿದ್ದು, ಸರ್ಕಾರದ ಅನುಮೋದನೆ ಅವಶ್ಯಕತೆ ಇಲ್ಲದಿದ್ದ ಕಾರಣ ಇದುವರೆವಿಗೂ, ಸದರಿ ಪ್ರಸ್ತಾವನೆಗೆ ಅನುಮೋದನೆ ದೊರೆತಿರುವುದಿಲ್ಲ.

ಕಡತದಲ್ಲಿ ಲಗತ್ತಿಸಿರುವ ರಸೀತಿಯ ಜುಲೈ 2005 ರಿಂದ ನವೆಂಬರ್ 2011 ರವರೆಗೆ ಪ್ರತಿಗಳಂತೆ ಜೂನ್ 2005 ರವರೆಗೆ ಗುತ್ತಿಗೆ ಮೊತ್ತವನ್ನು ಬಹಳ ಹಿಂದೆಯೇ ಪಾವತಿಸಿದ್ದು, ಮಾಸಿಕ ರೂ.700/–ಗಳಂತೆ 41 ತಿಂಗಳ ಅವದಿಗೆ ರೂ.31,035/–ಗಳನ್ನು ರಸೀದಿ ಸಂಖ್ಯೆ: 141741 ದಿನಾಂಕ: 28–09–2011 ರಂದು ಪಾವತಿಸಿಕೊಳ್ಳಲಾಗಿದೆ.

ಸದರಿ ಸ್ಥಳದ ಅಳತೆ 6X6 ಅಡಿ = 36 ಚದರ ಅಡಿಗಳಾಗಿದ್ದು, ಪ್ರಸಕ್ತ ಮಾರುಕಟ್ಟೆ ದರವು ಇತ್ತೀಚಿನ ಸರ್ಕಾರದ ಮಾರ್ಗಸೂಚಿ ಅನ್ವಯ ಚದರಡಿ ಒಂದಕ್ಕೆ ವಾಣಿಜ್ಯಕ್ಕೆ ರೂ.2,520/–ಗಳಾಗಿದ್ದು, 36 X ರೂ.2,520 = 90, 720–00 ಗಳಾಗುತ್ತದೆ. ಶೇ.10 ರಂತೆ ಪರಿಗಣಿಸಲಾಗಿ, ಅದರಂತೆ ಲೆಕ್ಕಾಚಾರ ಮಾಡಿದಾಗ ರೂ. 90,720/– ಗಳಾಗುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಶೇ.40 ರಷ್ಟು ಪರಿಗಣಿಸಲಾಗಿ, ಅದರಂತೆ ಲೆಕ್ಕಾಚಾರ ಮಾಡಿದಾಗ ರೂ.3,629/–

ಗಳಾಗುತ್ತದೆ. ಒಟ್ಟು ವಾರ್ಷಿಕ ಗುತ್ತಿಗೆ ಹಣ (ರೂ.9,072 + ರೂ.3,629) = 12,701/– ರೂಗಳಾಗುತ್ತದೆ. ಮಾಸಿಕೆ ಬಾಡಿಗೆ ಹಣ ರೂ.1,059/–ಗಳಾಗುತ್ತದೆ.

ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಡವಳಿಕೆಯಂತೆ, ದಿನಾಂಕ 15–06–2006 ರಂದು ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ: 4(101)ನ್ನು ಅನುಮೋದನೆಯಂತೆ ಗುತ್ತಿಗೆ ಅವದಿ ದಿನಾಂಕ: 08–12–2003 ರಿಂದ 07–12–2008 ರವರೆಗೆ 5 ವರ್ಷಗಳ ಕಾಲ ಮುಂದುವರೆದಿದ್ದು, ದಿನಾಂಕ: 07–12–2008ಕ್ಕೆ ಗುತ್ತಿಗೆ ಅವಧಿ ಮುಕ್ತಾಯವಾಗಿರುವುದರಿಂದ, ಮುಂದಿನ 5 ವರ್ಷಗಳ ಕಾಲ ದಿನಾಂಕ: 08–12–2008 ರಿಂದ 07–12–2013 ರವರೆಗೆ ಗುತ್ತಿಗೆ ಅವಧಿ ನವೀಕರಿಸುವ ಬಗ್ಗೆ ಸ್ಥಾಯಿ ಸಮಿತಿಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆ ಅನುಮೋದನೆ ಪಡೆಯಬೇಕಾಗಿದ್ದು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ಗುತ್ತಿಗೆ ಅವಧಿಯನ್ನು ನವೀಕರಿಸುವ ದಿನಾಂಕ : 21–01–2012ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 07–02–2012ರ ನಿರ್ಣಯ.

***ನಿರ್ಣಯ :–*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 07.02.2012ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.1000/– (ಒಂದು ಸಾವಿರ) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *09]. ವಿಷಯದ ಸಂಖ್ಯೆ :–ತೆಆಸ್ಥಾಸ/516/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 21–12–2011 ರಲ್ಲಿ ವಿವರಿಸಿರುವಂತೆ, **ಮೆ॥ ಬ್ರಿಗೇಡ್ ಶಾಪ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಅಸೋಸಿಯೇಷನ್‌ರವರಿಗೆ** ಬ್ರಿಗೇಡ್ ರಸ್ತೆಯಲ್ಲಿ ಎಂ.ಜಿ ರಸ್ತೆಯಿಂದ ರೆಕ್ಸ್ ಚಿತ್ರಮಂದಿರದವರೆಗೂ ಪಾವತಿ ಮತ್ತು ನಿಲುಗಡೆ ಸ್ಥಳದಲ್ಲಿ ನಿಲುಗಡೆ ಶುಲ್ಕ ವಸೂಲು ಮಾಡಲು ಟೆಂಡರ್ ಮುಖಾಂತರ ಕರಾರು ಮಾಡಿಕೊಂಡಿದ್ದು, ದಿನಾಂಕ: 01–12–2009 ರಿಂದ 30–11–2010 ರವರೆಗೂ ಒಂದು ವರ್ಷ ಪೂರ್ಣಗೊಳಿಸಿದ್ದು, **ಮೆ॥ ಬ್ರೀಗೇಡ್ ಎಸ್ಟಾಬ್ಲಿಷ್‌ಮೆಂಟ್ ಸಂಸ್ಥೆಯವರು** ದಿನಾಂಕ: 01–09–2009 ರಿಂದ ಯಶಸ್ವಿ ಬಿಡ್‌ದಾರರಾಗಿ ಪ್ರತಿ ತಿಂಗಳಿಗೆ ರೂ.2,25,000/– ರಂತೆ ಇದುವರೆವಿಗೂ ಮಾನ್ಯ ಆಯುಕ್ತರ ಖಾತೆಗೆ ರೂ. 51,75,000/–ಗಳನ್ನು ಜಮಾ ಮಾಡಲಾಗಿದೆ. ಅಂದರೆ ದಿನಾಂಕ: 01–12–2009 ರಿಂದ 30–11–2011 ರವರೆಗೆ ಪಾರ್ಕಿಂಗ್ ಶುಲ್ಕವನ್ನು ಪಾವತಿಸಿರುತ್ತಾರೆ. ದಿನಾಂಕ: 30–11–2011 ಕ್ಕೆ 2 ವರ್ಷ ಅವಧಿ ಪೂರ್ಣಗೊಂಡಿದ್ದು ಸದರಿ ಸಂಸ್ಥೆಯವರು ಮುಂದಿನ ಒಂದು ವರ್ಷಕ್ಕೆ ಅಂದರೆ ದಿನಾಂಕ: 01–12–2011ರಿಂದ 30–11–2012 ರವರೆಗೆ ನವೀಕರಿಸಲು ಅನುಮತಿ ಕೋರಿ ದಿನಾಂಕ: 10–10–2011 ರಂದು ಅರ್ಜಿ ನೀಡಿರುತ್ತಾರೆ. ಮುಂದುವರೆದಂತೆ ಸದರಿ ಸಂಸ್ಥೆಯವರ ಸೇವೆಯು ತೃಪ್ತಿಕರವಾಗಿರುವುದರಿಂದ ಟೆಂಡರ್ ಕರಾರು ಪತ್ರದ ದಿನಾಂಕ: 01–12–2009ರ ಪ್ರಕಾರ ಮುಂದಿನ ವರ್ಷಕ್ಕೆ ನವೀಕರಿಸಲು ಅಥವಾ ಹೊಸದಾಗಿ ಟೆಂಡರ್ ಕರೆಯುವ ಬಗ್ಗೆ ತಿರ್ಮಾನ ಕೈಗೊಳ್ಳಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ಮಾನ್ಯ ಆಯುಕ್ತರ ದಿನಾಂಕ: 21–12–2011ರ ಟಿಪ್ಪಣಿಯನ್ನು ಪರಿಶೀಲಿಸಿ, **ಮೆ॥ ಬ್ರಿಗೇಡ್ ಶಾಪ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಅಸೋಸಿಯೇಷನ್‌ರವರಿಗೆ** ಬ್ರಿಗೇಡ್ ರಸ್ತೆಯಲ್ಲಿ ಎಂ.ಜಿ ರಸ್ತೆಯಿಂದ ರೆಕ್ಸ್ ಚಿತ್ರಮಂದಿರದವರೆಗೂ ಪಾವತಿ ಮತ್ತು ನಿಲುಗಡೆ ಸ್ಥಳದಲ್ಲಿ ನಿಲುಗಡೆ ಶುಲ್ಕ ವಸೂಲು ಮಾಡಲು ದಿನಾಂಕ: 01–12–2011 ರಿಂದ 30–11–2012ರ ವರೆಗೆ ಟೆಂಡರ್ ಕರಾರು ಪತ್ರದ ದಿನಾಂಕ: 01–12–2009ರ ಪ್ರಕಾರ ಮುಂದಿನ ಒಂದು ವರ್ಷಕ್ಕೆ ನವೀಕರಿಸಲು ಸಮಿತಿಯು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 07–02–2012ರ ನಿರ್ಣಯ.

***ನಿರ್ಣಯ :–*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 07.02.2012ರ ನಿರ್ಣಯವನ್ನು ಮಾರ್ಪಡಿಸುತ್ತಾ ಪಾಲಿಕೆಯ ಆದಾಯದ ಹಿತದೃಷ್ಟಿಯಿಂದ ಹೊಸದಾಗಿ ಟೆಂಡರ್ ಕರೆಯುವುದೆಂದು ಸಮಿತಿಯು ತೀರ್ಮಾನಿಸಿತು.**

## *10]. ವಿಷಯದ ಸಂಖ್ಯೆ :–ತೆಆಸ್ಥಾಸ/517/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಎ3(1)/ಪಿಆರ್/145/11–12, ದಿನಾಂಕ: 07–01–2012 ರಲ್ಲಿ ವಿವರಿಸಿರುವಂತೆ ಶ್ರೀ.ಎಂ.ಸುಬ್ಬಯ್ಯ ರವರು ನಗರ ಪಾಲಿಕೆಗೆ ಅರ್ಜಿ ಸಲ್ಲಿಸಿ ತಾವು ಅಂಗವಿಕಲರಾಗಿದ್ದು, ಜೀವನ ಉಪಯೋಗಕ್ಕಾಗಿ ಪೀಣ್ಯದ ಪೈಪ್‌ಲೈನ್ ರಸ್ತೆ,

ಸೆಲೆಕ್ಷನ್ ಕಾರ್ನರ್ ಮುಂಭಾಗದ ಪುಟ್‌ಪಾತ್ ಮೂಲೆಯಲ್ಲಿ ಪೆಟ್ಟಿಗೆ ಅಂಗಡಿಯನ್ನು ತೆರೆದು ಎಸ್.ಟಿ.ಡಿ ಬೂತ್‌ನ್ನು ಈಗಾಗಲೇ ನಡೆಸುತ್ತಿದ್ದು, ಇದಕ್ಕೆ ಅನುಮತಿ ನೀಡುವಂತೆ ಕೋರಿರುತ್ತಾರೆ. ಈ ಬಗ್ಗೆ ಸ್ಥಳೀಯ ನಗರ ಪಾಲಿಕೆಯ ಸದಸ್ಯರು ನಂತರ ಇದನ್ನು ಮಾನ್ಯತೆ ಮಾಡಬೇಕೆಂದು ಪತ್ರ ಮುಖೇನ ಕೋರಿರುತ್ತಾರೆ. ಪೀಣ್ಯ ಸಂಚಾರಿ ವಿಭಾಗದ ಪೋಲೀಸ್ ಠಾಣಾ ಅಧಿಕಾರಿಗಳು ಈ ಬಗ್ಗೆ ನಿರಕ್ಷೇಪಣಾ ಪತ್ರವನ್ನು ದಿನಾಂಕ:13–07–2011 ರಲ್ಲಿ ನೀಡಿರುತ್ತಾರೆ.

ಅರ್ಜಿದಾರರು ರಸ್ತೆ ಅಪಘಾತದಿಂದ ತಮ್ಮ ಕಾಲನ್ನು ಕಳೆದುಕೊಂಡು ಜೀವನ ನಡೆಸಲು ಕಷ್ಟಕರವಾಗಿರುವುದರಿಂದ ಪೆಟ್ಟಿಗೆ ಅಂಗಡಿಯನ್ನು ಇಟ್ಟುಕೊಂಡು ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಸದರಿ ಪೆಟ್ಟಿಗೆ ಅಂಗಡಿಯಿಂದ ರಸ್ತೆಯಲ್ಲಿ ವಾಹನ ಸಂಚಾರಕ್ಕಾಗಲಿ ಅಥವಾ ಪಾದಚಾರಿ ಸಂಚಾರಕ್ಕಾಗಲಿ ಯಾವುದೇ ತೊಂದರೆ ಇರುವುದಿಲ್ಲವೆಂದು ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಮುಖ್ಯ ಅಭಿಯಂತರರು ತಮ್ಮ ವರದಿಯಲ್ಲಿ ತಿಳಿಸಿ ಅರ್ಜಿದಾರನಿಗೆ ಸದರಿ ಅಂಗಡಿ ನಡೆಸಲು ಅನುಮತಿ ನೀಡಬಹುದೆಂದು ಹೇಳಿರುತ್ತಾರೆ. ಅರ್ಜಿದಾರರು ಅಂಗವಿಕಲರಾಗಿದ್ದು, ಅವರ ಮನವಿಯನ್ನು ಪರಿಗಣಿಸಬಹುದಾಗಿರುತ್ತದೆ.

ಪ್ರಸ್ತುತ ಜಾಗದ ವಿಸ್ತೀರ್ಣವು 6*4=24 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿ:21–09–2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.1200/– ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 1200x24=28,800/–ರೂ. ಆಗುತ್ತದೆ. ಶೇ:10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.2880/– ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.240/– ಗಳಾಗುತ್ತದೆ.

ದಿನಾಂಕ:01–03–2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು, ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿ ಶ್ರೀ.ಎಂ.ಸುಬ್ಬಯ್ಯ, ಅಂಗವಿಕಲರು ರವರಿಗೆ ಎಸ್‌ಟಿಡಿ ಬೂತ್ ನಡೆಸಲು ಅನುಮತಿ ನೀಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆಯ ಮುಂದೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಲಾದ ಟಿಪ್ಪಣಿ ಮೇರೆಗೆ, ಮಾನ್ಯ ಆಯುಕ್ತರ ದಿನಾಂಕ07–01–2012ರ ಪ್ರಸ್ತಾವನೆಯನ್ನು ಪರಿಶೀಲಿಸಿ ಶ್ರೀ.ಎಂ.ಸುಬ್ಬಯ್ಯ ರವರು ಅಂಗವಿಕಲರಾಗಿರುವ ಹಿನ್ನೆಲೆಯಲ್ಲಿ ಪಾದಚಾರಿಗಳಿಗೆ ಅನಾನುಕೂಲವಾಗದಂತೆ ಸದರಿ ಸ್ಥಳದಲ್ಲಿ ಎಸ್.ಟಿ.ಡಿ ಬೂತ್ ನಡೆಸಲು 3 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 24–01–2012ರ ನಿರ್ಣಯ.

***<u>ನಿರ್ಣಯ :–</u>*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 24.01.2012ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.240/– (ಎರಡು ನೂರ ನಲವತ್ತು) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ***<u>11]. ವಿಷಯದ ಸಂಖ್ಯೆ :–ತೆಆಸ್ಥಾಸ/518/2011–12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಎ3(4)/ಪಿಆರ್/251/11–12, ದಿನಾಂಕ: 03–01–2012 ರಲ್ಲಿ ವಿವರಿಸಿರುವಂತೆ ವಾರ್ಡ್–124, ವಿಜಯನಗರ ಬಸ್ ನಿಲ್ದಾಣದ ಹತ್ತಿರದ ಸರ್ವಿಸ್ ರಸ್ತೆ 10 ಮತ್ತು 11ನೇ ಮುಖ್ಯರಸ್ತೆಯ ಪಕ್ಕದ 6X4 ಅಡಿಗಳ ಪಾಲಿಕೆ ಜಾಗ ದಿನಾಂಕ:18–02–1997 ರಿಂದ ಹತ್ತು ವರ್ಷಗಳ ಅವಧಿಗೆ ವಾರ್ಷಿಕ 1000/– ರೂ.ಗಳನ್ನು ನಿಗಧಿಪಡಿಸಿ, ಶ್ರೀ ಹೆಚ್.ಕೆ.ರೇವಣಸಿದ್ದಪ್ಪ ರವರಿಗೆ ಹಾಲಿನ ಮಾರಾಟ ಮಳಿಗೆಗೆ ಗುತ್ತಿಗೆಗೆ ನೀಡಿದ್ದು, ಅವಧಿ ಮುಗಿದಿರುತ್ತದೆ.

ಈ ಬಗ್ಗೆ ವಲಯಾಧಿಕಾರಿಗಳು ಶ್ರೀ ಹೆಚ್.ಕೆ.ರೇವಣಸಿದ್ದಪ್ಪರವರಿಗೆ ದಿನಾಂಕ:18–02–1997ರಲ್ಲಿ ಹತ್ತು ವರ್ಷಗಳಿಗೆ ಗುತ್ತಿಗೆಗೆ ನೀಡಿದ್ದು, ದಿನಾಂಕ:17–02–2007ಕ್ಕೆ ಗುತ್ತಿಗೆ ಅವಧಿ ಮುಗಿದಿರುವುದರಿಂದ ಮುಂದಿನ 5–ವರ್ಷಗಳಿಗೆ ಗುತ್ತಿಗೆ ನವೀಕರಿಸಲು ಆದೇಶಕ್ಕೆ ಮಂಡಿಸಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾಯ್ದೆನ್ವಯ–1976 ಕಲಂ–176ರ (6) ಹಾಗೂ (ಬಿ)IIರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01–02, ದಿನಾಂಕ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದ್ದು.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:21–09–2011ರ ಸರ್ಕಾರದ ಮಾರ್ಗಸೂಚಿಯಂತೆ ವಸತಿಯೇತರ ಚದರ ಅಡಿ ಒಂದಕ್ಕೆ ರೂ.5,460–/–ಗಳಿದ್ದು, ಅರ್ಜಿದಾರರುಗಳು ಕೋರಿರುವ ಜಾಗವು 24 ಚ.ಅಡಿಗಳಾಗುತ್ತದೆ. ಇದರಂತೆ 5460X24 = 1,31,040/– ರೂ.ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ 13,104/– ರೂ.ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 1,100/– ರೂ. ಗಳಾಗುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀ ಹೆಚ್.ಕೆ.ರೇವಣಸಿದ್ದಪ್ಪರವರಿಗೆ ನಂದಿನಿ ಮಿಲ್ಕ್ ಪಾರ್ಲರ್ ನಡೆಸಲು ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ನವೀರಕಣದ ದಿನಾಂಕದ ವರೆವಿಗೆ ಕಾಲಾನುಕ್ರಮದ ಮಾರುಕಟ್ಟೆ ದರದ ಅನುಸಾರ ಆಯುಕ್ತರ ದಿನಾಂಕ: 01–03–2002ರ ಸುತ್ತೋಲೆಯಂತೆ, ಗುತ್ತಿಗೆ ಹಣ ನಿಗಧಿಪಡಿಸಿ ಬಾಕಿಯಾಗಿ ಪಾವತಿಸಿಕೊಂಡು ಹಾಗೂ ಮುಂದಿನ 5–ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಲು ಸಂಬಂದಿಸಿದ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ಹಿಂದಿನ ಬಾಕಿ ಹಣವನ್ನು ಪಾವತಿಸಿಕೊಂಡು ಶ್ರೀ ಹೆಚ್.ಕೆ.ರೇವಣಸಿದ್ದಪ್ಪರವರಿಗೆ ನಂದಿನಿ ಮಿಲ್ಕ್ ಪಾರ್ಲರ್ ನಡೆಸಲು ನೀಡಿರುವ ಗುತ್ತಿಗೆ ಅವಧಿಯನ್ನು ಮುಂದಿನ 5 ವರ್ಷಗಳ ಅವಧಿಗೆ ನವೀಕರಿಸುವ ಮಾನ್ಯ ಆಯುಕ್ತರ ದಿನಾಂಕ: 03–01–2012 ಪ್ರಸ್ತಾವನೆಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 07–02–2012ರ ನಿರ್ಣಯ.

***<u>ನಿರ್ಣಯ :–</u>*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 07.02.2012ರ ನಿರ್ಣಯವನ್ನು ಒಪ್ಪಿದೆ.**

## ***<u>12]. ವಿಷಯದ ಸಂಖ್ಯೆ :–ತೆಆಸ್ಥಾಸ/538//2011–12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್ಆರ್(4)195/11–12 ದಿನಾಂಕ : 30–03–2012 ರಲ್ಲಿ ವಿವರಿಸಿರುವಂತೆ, ಸಮರ್ಥನ ಟ್ರಸ್ಟ್ ಫಾರ್ ದಿ ಡಿಸಬಲ್ಡ್, ನಂ. 11, ವಿಲ್ಲಾ ಸುಚಿತ್ರ, 1ನೇ ಕ್ರಾಸ್, 17ನೇ 'ಎ' ಮುಖ್ಯರಸ್ತೆ, ಗಿರಿ ಅಪಾರ್ಟ್‌ಮೆಂಟ್ ಹಿಂಭಾಗ, ಜೆ.ಪಿ. ನಗರ 2ನೇ ಹಂತ, ಬೆಂಗಳೂರು – 560 078. ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ಸಮರ್ಥನಂ ಅಂಗವಿಕಲ ಸಂಸ್ಥೆಯು 1992 ರಿಂದ ಭಾರತದಲ್ಲಿನ ದೃಷ್ಟಿ ಹೀನರ, ಅಂಗವಿಕಲರ ಮತ್ತು ಅವಕಾಶ ವಂಚಿತರ ಸಬಲೀಕರಣಕ್ಕಾಗಿ ಕಾರ್ಯನಿರ್ವಹಿಸುತ್ತಲಿದೆ. ಪ್ರಮುಖವಾಗಿ ಈ ಸಂಸ್ಥೆಯು ಗುಣಮಟ್ಟದ ಶಿಕ್ಷಣ, ವಸತಿ ಸೌಲಭ್ಯ, ಪೌಷ್ಟಿಕ ಆಹಾರ ವೃತ್ತಿಪರ ತರಬೇತಿ ಮತ್ತು ಪುನರ್ವಸತೀಕರಣದ ಸೌಲಭ್ಯಗಳನ್ನು ಒದಗಿಸುವ ಮೂಲಕ ಊನಶಕ್ಥರ ವಯಕ್ತಿಕ ಸ್ವಾವಲಂಬನೆಯನ್ನು ಸಾಧಿಸುವದಾಗಿದೆ ಮತ್ತು ಸಮಾಜದಲ್ಲಿ ತಮ್ಮದೇ ಆಗಿರತಕ್ಕಂತಹ ಪ್ರಮುಖ ಹೆಜ್ಜೆಯನ್ನು ಇಡುವಲ್ಲಿ ಸಹಾಯ ಮಾಡುವತ್ತ ಕಾರ್ಯನಿರ್ವಹಿಸುತ್ತಿದೆ. ಸಂಸ್ಥೆಯು ದೃಷ್ಟಿ ಹೀನರ, ಅಂಗವಿಕಲರ ಮತ್ತು ಅವಕಾಶ ವಂಚಿತರ ಅಭಿವೃದ್ಧಿಗಾಗಿ ತಾರತಮ್ಯರಹಿತ ಅವಕಾಶಗಳನ್ನು ಒದಗಿಸುವ ಕ್ರೋಢೀಕೃತ ಸಮಾಜವನ್ನು ಸೃಷ್ಟಿಸುವ ನಿಟ್ಟಿನಲ್ಲಿ ಈ ಸಂಸ್ಥೆ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದೆ ಎಂದು ತಿಳಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2011–12 ನೇ ಸಾಲಿನ ಅಂದಾಜು ಆಯವ್ಯಯದಲ್ಲಿ ಅಂಗವಿಕಲ ಕ್ಷೇತ್ರಕ್ಕೆ ಪಾಲಿಕೆಯಿಂದ ನಿಗಧಿಪಡಿಸಿದ 3.00 ಲಕ್ಷ ಅನುದಾನವನ್ನು ಸಮರ್ಥನಂ ಟ್ರಸ್ಟ್ ಫಾರ್ ದಿ ಡಿಸಬಲ್ಡ್ ಅಂಧ ಮಕ್ಕಳ ಶಿಕ್ಷಣ ತರಬೇತಿ ಮತ್ತು ಉಚಿತ ವಸತು ಸೌಲಭ್ಯಗಳನ್ನು ಒದಗಿಸುತ್ತಿರುವ ತಮ್ಮ ಸಂಸ್ಥೆಗೆ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ಸದರಿಯವರಿಗೆ **2010–11 ನೇ** ಸಾಲಿನಲ್ಲಿ **ರೂ. 3.00 ಲಕ್ಷಗಳ** ಅನುದಾನ ಬಿಡುಗಡೆ ಮಾಡಲಾಗಿರುತ್ತದೆ

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10

ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12ರಂತೆ 185 ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (182) ರಲ್ಲಿ "ಸಮರ್ಥನ ಟ್ರಸ್ಟ್ ಫಾರ್ ದಿ ಡಿಸಬಲ್ಡ್"** ರವರಿಗೆ **ರೂ. 2.00 ಲಕ್ಷಗಳ** ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಯ ಮನವಿಯ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :– ದಿನಾಂಕ : 30–03–2012ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.1,00,000/– (ಒಂದು ಲಕ್ಷ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## *13]. ವಿಷಯದ ಸಂಖ್ಯೆ :–ತೆಆಸ್ಥಾಸ/544/2011–12*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ: 22–03–2012 ರಲ್ಲಿ ವಿವರಿಸಿರುವಂತೆ, Construction of RCC Retianing Wall at Medharahalli SWD Shettihalli ಕಾಮಗಾರಿಗೆ 2009–10ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ1237 ಅಡಿ ವರ್ಕ್‌ಕೋಡ್ ನೀಡಲಾಗಿದ್ದು, ಮರುನವೀಕರಣಕ್ಕೆ ರೂ.52.80 ಲಕ್ಷಗಳ ಅನುದಾನ ಅವಶ್ಯವಿದ್ದು, ಲೆಕ್ಕಶೀರ್ಷಿಕೆ ಪಿ1579 ರ ಮುಂದುವರೆದ ಕಾಮಗಾರಿಗಳಡಿ ಲಭ್ಯವಿರುವ ಅನುದಾನದಲ್ಲಿ ಮರುಹೊಂದಾಣಿಕೆ ಮಾಡಿಕೊಂಡು ಮರು ನವೀಕರಿಸಲು, ಕರ್ನಾಟಕ ಮುನಿಸಿಪಲ್ ಕಾಯಿದೆ 1976 ಸೆಕ್ಷನ್ 172 ರ ಪ್ರಕಾರ ಮರುಹೊಂದಾಣಿಕೆ (Re-appropriation) ಪ್ರಸ್ಥಾವನೆಯನ್ನು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :– ದಿನಾಂಕ : 22–03–2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಿದೆ.***

## *14]. ವಿಷಯದ ಸಂಖ್ಯೆ :–ತೆಆಸ್ಥಾಸ/545/2011–12*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ: 22–03–2012 ರಲ್ಲಿ ವಿವರಿಸಿರುವಂತೆ, Construction of RCC Drains & Culverts of Siddeshwara Layout ಕಾಮಗಾರಿಗೆ 2009–10ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ1237 ಅಡಿ ವರ್ಕ್‌ಕೋಡ್ ನೀಡಲಾಗಿದ್ದು, ಮರುನವೀಕರಣಕ್ಕೆ ರೂ.32.41 ಲಕ್ಷಗಳ ಅನುದಾನ ಅವಶ್ಯವಿದ್ದು, ಲೆಕ್ಕಶೀರ್ಷಿಕೆ ಪಿ1579 ರ ಮುಂದುವರೆದ ಕಾಮಗಾರಿಗಳಡಿ ಲಭ್ಯವಿರುವ ಅನುದಾನದಲ್ಲಿ ಮರುಹೊಂದಾಣಿಕೆ ಮಾಡಿಕೊಂಡು ಮರು ನವೀಕರಿಸಲು, ಕರ್ನಾಟಕ ಮುನಿಸಿಪಲ್ ಕಾಯಿದೆ 1976 ಸೆಕ್ಷನ್ 172 ರ ಪ್ರಕಾರ ಮರುಹೊಂದಾಣಿಕೆ (Re-appropriation) ಪ್ರಸ್ಥಾವನೆಯನ್ನು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :– ದಿನಾಂಕ : 22–03–2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಿದೆ.***

***15]. ವಿಷಯದ ಸಂಖ್ಯೆ :–ತೆಆಸ್ಥಾಸ/546/2011–12***

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ: 22–03–2012 ರಲ್ಲಿ ವಿವರಿಸಿರುವಂತೆ, Improvement to Footpath at 24th Cross BSK 2nd Stage in Ward No.56 ಕಾಮಗಾರಿಗೆ 2008–09ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ0948 ಅಡಿ ವರ್ಕ್‌ಕೋಡ್ ನೀಡಲಾಗಿದ್ದು, ಮರುನವೀಕರಣಕ್ಕೆ ರೂ.41.65 ಲಕ್ಷಗಳ ಅನುದಾನ ಅವಶ್ಯವಿದ್ದು, ಲೆಕ್ಕಶೀರ್ಷಿಕೆ ಪಿ0622 ರ ಮುಂದುವರೆದ ಕಾಮಗಾರಿಗಳಡಿ ಲಭ್ಯವಿರುವ ರೂ.600.00 ಲಕ್ಷಗಳ ಅನುದಾನದಲ್ಲಿ ಮರುಹೊಂದಾಣಿಕೆ ಮಾಡಿಕೊಂಡು ಮರು ನವೀಕರಿಸಲು, ಕರ್ನಾಟಕ ಮುನಿಸಿಪಲ್ ಕಾಯಿದೆ 1976 ಸೆಕ್ಷನ್ 172 ರ ಪ್ರಕಾರ ಮರುಹೊಂದಾಣಿಕೆ (Re-appropriation) ಪ್ರಸ್ಥಾವನೆಯನ್ನು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

***16]. ವಿಷಯದ ಸಂಖ್ಯೆ :–ತೆಆಸ್ಥಾಸ/547/2011–12***

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ: 22–03–2012 ರಲ್ಲಿ ವಿವರಿಸಿರುವಂತೆ, Procurement of RCC Preset Box Segments of 7.0 X 3.5 X 1.0 for Vehicular Underpass from Sheshadri road to Kalidasa Road ಕಾಮಗಾರಿಗೆ 2009–10ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ1973 ಅಡಿ ವರ್ಕ್‌ಕೋಡ್ ನೀಡಲಾಗಿದ್ದು, ಮರುನವೀಕರಣಕ್ಕೆ ರೂ.8.61 ಲಕ್ಷಗಳ ಅನುದಾನ ಅವಶ್ಯವಿದ್ದು, ಲೆಕ್ಕಶೀರ್ಷಿಕೆ ಪಿ2194 ರ ಮುಂದುವರೆದ ಕಾಮಗಾರಿಗಳಡಿ ಲಭ್ಯವಿರುವ ಅನುದಾನದಲ್ಲಿ ಮರುಹೊಂದಾಣಿಕೆ ಮಾಡಿಕೊಂಡು ಮರು ನವೀಕರಿಸಲು, ಕರ್ನಾಟಕ ಮುನಿಸಿಪಲ್ ಕಾಯಿದೆ 1976 ಸೆಕ್ಷನ್ 172 ರ ಪ್ರಕಾರ ಮರುಹೊಂದಾಣಿಕೆ (Re-appropriation) ಪ್ರಸ್ಥಾವನೆಯನ್ನು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :– ದಿನಾಂಕ : 22–03–2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಿದೆ.***

***17]. ವಿಷಯದ ಸಂಖ್ಯೆ :–ತೆಆಸ್ಥಾಸ/548/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 20–03–2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅರಣ್ಯ ಘಟಕಕ್ಕೆ 2011–12ನೇ ಸಾಲಿನ ವಿವಿಧ ಅರಣ್ಯೀಕರಣ ಕಾಮಗಾರಿಗಳಿಗೆ 2011–12ನೇ ಆಯವ್ಯಯದಲ್ಲಿ ಈ ಕೆಳಕಂಡಂತೆ ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ಮೊತ್ತವನ್ನು ನಿಗಧಿಪಡಿಸಲಾಗಿರುತ್ತದೆ ಹಾಗೂ ಅರಣ್ಯೀಕರಣ ಕಾಮಗಾರಿಗಳು ಋತುಮಾನಕ್ಕನುಗುಣವಾಗಿ ನಿರ್ವಹಿಸಬೇಕಾಗಿರುವ ಕಾರಣ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಇ–ಪ್ರೊಕ್ಯೂರ್ಮೆಂಟ್ ಮುಖೇನ ಹಾಗೂ ಇಲಾಖಾ ಮುಖಾಂತರ ಕಾಮಗಾರಿಯನ್ನು ನಿರ್ವಹಿಸಲಾಗಿರುತ್ತದೆ. ಅದರಂತೆ ಅರಣ್ಯ ಘಟಕದ ಉತ್ತರ ಮತ್ತು ದಕ್ಷಿಣ ವಿಭಾಗಗಳಲ್ಲಿ 2011–12ನೇ ಸಾಲಿನ ವಾರ್ಷಿಕ ಕ್ರಿಯಾಯೋಜನೆಯನ್ನು ತಯಾರಿಸಿ ಕೆಲವು ಉಪ ಲೆಕ್ಕಶೀರ್ಷಿಕೆಯಡಿ ಮೊತ್ತವು ಈ ಸಾಲಿನ ಉಪಯೋಗಕ್ಕಿಂತ ಹೆಚ್ಚಿನದಾಗಿದ್ದು, ಹಾಗೂ ಕೆಲವೊಂದು ಉಪ ಲೆಕ್ಕಶೀರ್ಷಿಕೆಯಡಿ ಈ ಸಾಲಿನ ಅಗತ್ಯಕ್ಕಿಂತ ಕಡಿಮೆ ಮೊತ್ತವು ಇರುವುದು ಕಂಡು ಬಂದಿದ್ದು, ಈ ಕೆಳಗಿನಂತೆ ಅರಣ್ಯ ಘಟಕಕ್ಕೆ 2011–12ನೇ ಸಾಲಿಗೆ ಬೇಕಾಗಿರುವ ಅನುದಾನವನ್ನು ವಿವಿಧ ಉಪ ಲೆಕ್ಕಶೀರ್ಷಿಕೆಯಡಿ ಭರಿಸಿಕೊಳ್ಳಲು ಅನುಮತಿಗಾಗಿ ಕೋರಿ ಕಡತದಲ್ಲಿ ಮಂಡಿಸಿದೆ.

## ಉಪ ಲೆಕ್ಕಶೀರ್ಷಿಕೆಯಡಿ ಭರಿಸಿಕೊಳ್ಳಲು ಕೋರಿರುವ ಅನುದಾನ

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಒದಗಿಸಿರುವ ಅನುದಾನ | ಲೆಕ್ಕ ಶೀರ್ಷಿಕೆಯಡಿ ಭರಿಸಿಕೊಳ್ಳಲು ಒದಗಿಸಬೇಕಾಗಿರುವ ಅನುದಾನ | | ಲೆಕ್ಕ ಶೀರ್ಷಿಕೆಯಡಿಯಲ್ಲಿ ಬಾಕಿ ಉಳಿದಿರುವ /ಕಡಿಮೆ ಇರುವ ಅನುದಾನದ ವಿವರ | ಷರಾ |
|---|---|---|---|---|---|---|
| | | | ಉತ್ತರ | ದಕ್ಷಿಣ | | |
| 1 | Avenue Plantation Tree Survey & Numbering -P-0314 | 1484.00 | 75.00 | 144.41 | 158.70 | ಈ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒಟ್ಟು ರೂ. 158.70 ಲಕ್ಷಗಳ ಬಾಕಿ ಉಳಿದಿದ್ದು, ಸದರಿ ಮೊತ್ತವನ್ನು ಉಪ ಲೆಕ್ಕ ಶೀರ್ಷಿಕೆ ಪಿ–1701 ರಲ್ಲಿ ಕೊರತೆ ಇರುವ ಮೊತ್ತಕ್ಕೆ ಮರುಹೊಂದಾಣಿಕೆ ಮಾಡಿಕೊಳ್ಳಲು ಕೋರಿದೆ. |
| 2 | Creation of Bird Conservation in Eight zone -P-1851 | 50.00 | – | – | 50.00 | ಈ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒಟ್ಟು ರೂ. 50.00 ಲಕ್ಷಗಳ ಅನುದಾನವನ್ನು ಉಪ ಲೆಕ್ಕ ಶೀರ್ಷಿಕೆ ಪಿ–1856 ರಲ್ಲಿ ಕೊರತೆ ಇರುವ ಮೊತ್ತಕ್ಕೆ ಮರುಹೊಂದಾಣಿಕೆ ಮಾಡಿಕೊಳ್ಳಲು ಕೋರಿದೆ. |
| 3 | Identification of Tree Wardens/Green Police etc., -P-1852 | 8.00 | – | – | 8.00 | ಈ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒಟ್ಟು ರೂ. 8.00 ಲಕ್ಷಗಳ ಅನುದಾನ ಲಭ್ಯವಿರುತ್ತದೆ. |
| 4 | Maintenance of Old Plantation raised in BBMP areas -P-1855 | 250.00 | 15.11 | 283.13 | – | ಈ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒಟ್ಟು ರೂ. 250.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಿದ್ದು, ಈ ಕಾಮಗಾರಿಗೆ ಒಟ್ಟು ರೂ. 298.24 ಲಕ್ಷಗಳ ಕೊರತೆ ಇದ್ದು, ಉಪ ಲೆಕ್ಕ ಶೀರ್ಷಿಕೆ ಪಿ–2528 ರಡಿ ಬೇಡಿಕೆ ಇಲ್ಲದೇ ಉಳಿದಿರುವ ಒಟ್ಟು ಮೊತ್ತ ರೂ. 346.50 ಲಕ್ಷಗಳನ್ನು ಸದರಿ ಮೊತ್ತಕ್ಕೆ ಮರುಹೊಂದಾಣಿಕೆ ಮಾಡಿಕೊಳ್ಳಲು ಕೋರಿದೆ. |

| | | | | | | |
|---|---|---|---|---|---|---|
| 5 | Maintenance of Seedlings raised in BBMP areas -P-1856 | 54.00 | 20.44 | 37.02 | | ಈ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒಟ್ಟು ರೂ. 54.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಿದ್ದು, ಈ ಕಾಮಗಾರಿಗೆ ಒಟ್ಟು ರೂ. 50.00 ಲಕ್ಷಗಳ ಅನುದಾನ ಕೊರತೆ ಇದ್ದು, ಉಪ ಲೆಕ್ಕ ಶೀರ್ಷಿಕೆ ಪಿ–1851 ರಡಿ ಉಳಿದಿರುವ ಒಟ್ಟು ಮೊತ್ತ ರೂ. 50.00 ಲಕ್ಷಗಳನ್ನು ಸದರಿ ಮೊತ್ತಕ್ಕೆ ಮರುಹೊಂದಾಣಿಕೆ ಮಾಡಿಕೊಳ್ಳಲು ಕೋರಿದೆ. |
| 6 | Production of Seedlings in Nurseries in BBMP areas -P-1846 | 200.00 | – | 50.54 | 3.38 | ಈ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒಟ್ಟು ರೂ. 3.38 ಲಕ್ಷಗಳ ಅನುದಾನ ಲಭ್ಯವಿರುತ್ತದೆ. |
| 7 | Publicity Propoganda, Campaigns, Public Awareness & IEC -P-1848 | 50.00 | – | – | | ಈ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒಟ್ಟು ರೂ. 50.00 ಲಕ್ಷಗಳ ಅನುದಾನ ಲಭ್ಯವಿರುತ್ತದೆ. |
| 8 | Tree Canopy Management P-1701 | 400.00 | – | 203.85 | | ಈ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒಟ್ಟು ರೂ. 400.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಿದ್ದು, ಈ ಕಾಮಗಾರಿಗೆ ಒಟ್ಟು ರೂ. 203.85 ಲಕ್ಷಗಳ ಅನುದಾನ ಕೊರತೆ ಇದ್ದು, ಉಪ ಲೆಕ್ಕ ಶೀರ್ಷಿಕೆ ಪಿ–0314 ರಡಿ ಉಳಿದಿರುವ ಒಟ್ಟು ಮೊತ್ತ ರೂ. 158.70 ಲಕ್ಷಗಳನ್ನು ಸದರಿ ಮೊತ್ತಕ್ಕೆ ಮರುಹೊಂದಾಣಿಕೆ ಮಾಡಿಕೊಳ್ಳಲು ಕೋರಿದೆ. |
| 9 | Tree Mapping (Rs.2.00 lakhs/per ward -P-2528 | 396.00 | 20 | 29.5 | | ಈ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒಟ್ಟು ರೂ. 396.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಿದ್ದು, ಉಪ ಲೆಕ್ಕ ಶೀರ್ಷಿಕೆ ಪಿ–1855 ರಡಿ ಕೊರತೆ ಇರುವ ಒಟ್ಟು ಮೊತ್ತ ರೂ. 298.24 ಲಕ್ಷಗಳನ್ನು ಸದರಿ ಲೆಕ್ಕಶೀರ್ಷಿಕೆಯಡಿ ಮರುಹೊಂದಾಣಿಕೆ ಮಾಡಿಕೊಳ್ಳಲು ಕೋರಿದೆ. |

| | | | | | | |
|---|---|---|---|---|---|---|
| 10 | Tree Transplanting -P-1847 | 5.00 | | | | ಈ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒಟ್ಟು ರೂ. 5.00 ಲಕ್ಷಗಳ ಅನುದಾನ ಲಭ್ಯವಿರುತ್ತದೆ. |

ಮೇಲ್ಕಂಡಂತೆ ಉತ್ತರ ವಿಭಾಗ ಮತ್ತು ದಕ್ಷಿಣ ವಿಭಾಗಗಳಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಡಿ ಲಭ್ಯವಿರುವ ಅನುದಾನವನ್ನು ಕೊರತೆ ಇರುವ ಲೆಕ್ಕಶೀರ್ಷಿಕೆಗಳಿಗೆ ಮರುಹೊಂದಾಣಿಕೆ ಮಾಡಿಕೊಳ್ಳಲು ಮಾನ್ಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಹಾಗೂ ಮಂಜೂರಾತಿಗಾಗಿ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## *18]. ವಿಷಯದ ಸಂಖ್ಯೆ :–ತೆಆಸ್ಥಾಸ/549/2011–12*

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್ಆರ್(4)206/2011–12ದಿನಾಂಕ : 20.03.2012 ರಲ್ಲಿ ವಿವರಿಸಿರುವಂತೆ, ಶ್ರೀ ಕೆ. ರಮೇಶ್ ರಾಜು, ಮಾನ್ಯ ಅಧ್ಯಕ್ಷರು, ಶಿಕ್ಷಣ ಸ್ಥಾಯಿ ಸಮಿತಿ ರವರು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿ, ಮಾನ್ಯ ಅಧ್ಯಕ್ಷರು ಉಚಿತ ಅನಾಥಾಶ್ರಮ ಹಾಗೂ ಶೈಕ್ಷಣಿಕ ಕ್ರೀಡಾ ವಿಕಸನ ಕೇಂದ್ರ (ರಿ) ಇವರು ಸಲ್ಲಿಸಿರುವ ಮನವಿ ಪತ್ರವನ್ನು ಇದರೊಂದಿಗೆ ಲಗತ್ತಿಸುತ್ತಾ, ಶ್ರೀಯುತರು ಮನವಿಯಲ್ಲಿ 6 ದಿನಗಳ **ಅಖಿಲ ಭಾರತ ಪುರುಷರ ಮತ್ತು ಮಹಿಳೆಯರ ಹೆಚ್.ಡಿ. ದೇವೇಗೌಡಕಪ್ ಕಬಡ್ಡಿ** ಪಂದ್ಯಾವಳಿಗಳನ್ನು ನಡೆಸಲು ಉದ್ದೇಶಿಸಲಾಗಿದೆ ಎಂಬುದಾಗಿ ತಿಳಿಸುತ್ತಾ, ಕಬಡ್ಡಿ ಪಂದ್ಯಾವಳಿಗೆ ಅನುದಾನವನ್ನು ನೀಡುವಂತೆ ಕೋರಿದ್ದು, ಈ ಸಂಬಂಧ ಕ್ರೀಡೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಮನವಿಯನ್ನು ಪರಿಗಣಿಸಲು ಕೋರಿರುತ್ತಾರೆ.

ಶ್ರೀ ವೆಂಕಟೇಶ್ ಅಧ್ಯಕ್ಷರು, ಸ್ಪಂದನ–ಉಚಿತ ಅನಾಥಾಶ್ರಮ ಹಾಗೂ ಶೈಕ್ಷಣಿಕ ಕ್ರೀಡಾ ವಿಕಸನ ಕೇಂದ್ರ (ರಿ), ನಂ. 43, ಸಾಯಿ ಛೇಂಬರ್ಸ್, ಎರಡನೇ ಮಹಡಿ, 9ನೇ ಅಡ್ಡರಸ್ತೆ, 50 ಅಡಿ ರಸ್ತೆ, ಹನುಮಂತನಗರ, ಬೆಂಗಳೂರು–560050 ರವರು ಮನವಿ ಸಲ್ಲಿಸಿ, ಅಮೆಚೂರ್ ಕಬಡ್ಡಿ ಫೆಡರೇಷನ್ ಆಫ್ ಇಂಡಿಯಾ ಇವರ ಪೂರ್ವಾನುಮತಿ ಪಡೆದು ನಡೆಸಲಾಗುತ್ತಿರು 6 ದಿನಗಳ ಅಖಿಲ ಭಾರತ ಪುರುಷರ ಮತ್ತು ಮಹಿಳೆಯರ ಹೆಚ್.ಡಿ. ದೇವೇಗೌಡ ಕಪ್ ಕಬ್ಬಡಿ ಪಂದ್ಯಾವಳಿಯನ್ನು ದಿನಾಂಕ 13–03–2012 ರಿಂದ 18–03–2012 ರವರೆಗೆ ನಡಸುತ್ತಿದ್ದು, ಸದರಿ ಪಂದ್ಯಾವಳಿಗಳ ಒಟ್ಟು ಖರ್ಚು ರೂ. 45,90,000/– ಗಳು ವೆಚ್ಚವಾಗುವುದಾಗಿ ತಿಳಿಸಿ, ಪಾಲಿಕೆ ವತಿಯಿಂದ ಸಹಾಯಧನವನ್ನು ಮಂಜೂರುಮಾಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ
ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ಅನುಬಂಧ–2 ರಲ್ಲಿ 185 ವಿವಿಧ ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಲಾಗಿರುತ್ತದೆ. ಉಳಿಕೆ ಮೊತ್ತ ರೂ. 116.50 ಲಕ್ಷಗಳು.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಪ್ರಸ್ತಾವಿತ ಸಂಸ್ಥೆಯ ಮನವಿಯ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :–*** ***ದಿನಾಂಕ : 20–03–2012ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.5.00 (ಐದು) ಲಕ್ಷಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## ***19]. ವಿಷಯದ ಸಂಖ್ಯೆ :–ತೆಆಸ್ಥಾಸ/550/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/41/05–06, ದಿನಾಂಕ: 24–01–2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್–93(77), ವಸಂತನಗರ ಉಪವಿಭಾಗ ವ್ಯಾಪ್ತಿಯ ರೇಸ್‌ಕೋರ್ಸ್ ರಸ್ತೆ, ಮಾಧವನಗರದಲ್ಲಿ ಶ್ರೀಮತಿ.ಮಂಜುಳರವರಿಗೆ 10x10 ಅಡಿಗಳ ಮೀನು ಮಾರಾಟ ಮಳಿಗೆ ಸ್ಥಾಪಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿಸಮಿತಿ ವಿಷಯದ ಸಂಖ್ಯೆ:104/2010–11, ದಿನಾಂಕ:13–12–2010 ರಂದು 3–ವರ್ಷಗಳ ಕಾಲಾವಧಿಗೆ ಮಾಸಿಕ 3000/–ರೂ.ಗಳಂತೆ ಗುತ್ತಿಗೆಗೆ ನೀಡಲಾಗಿತ್ತು.

ವಸಂತನಗರ ವಾರ್ಡಿನ ನಗರಪಾಲಿಕೆ ಸದಸ್ಯರು ಪ್ರಸ್ತುತ ಜಾಗವು ಸಾರ್ವಜನಿಕರು ಓಡಾಡುವ ಜಾಗವಾಗಿದ್ದು, ಸಾರ್ವಜನಿಕರು ವಿರೋಧ ವ್ಯಕ್ತಪಡಿಸುತ್ತಿರುವುದರಿಂದ, ಗುತ್ತಿಗೆ ರದ್ದುಪಡಿಸಲು ಕೋರಿರುತ್ತಾರೆ. ದಿನಾಂಕ:25–05–2011ರಲ್ಲಿ ಸದರಿ ಸದಸ್ಯರು ಮೀನು ಮಾರಾಟದ ಪರವಾನಿಗೆಯ ಬದಲಿಗೆ ಊಟ ಮತ್ತು ಉಪಹಾರ ವ್ಯಾಪಾರಕ್ಕೆ ಮಂಜೂರಾತಿ ನೀಡಲು ಕೋರಿರುತ್ತಾರೆ. ಪಾಲಿಕೆ ವಿರೋಧ ಪಕ್ಷದ ನಾಯಕರು ಸಹಾ ಈ ಕೋರಿಕೆಯನ್ನು ಪರಿಗಣಿಸಲು ಪತ್ರ ಬರೆದು ವಿನಂತಿಸಿರುತ್ತಾರೆ.

ಅರ್ಜಿದಾರರು ದಿನಾಂಕ:23–05–2011 ರಂದು ಅರ್ಜಿ ಸಲ್ಲಿಸಿ, ಅವರು ಸ್ವಂತ ಖರ್ಚಿನಲ್ಲಿ 30x40 ಅಡಿಗಳಷ್ಟು ಹಳ್ಳವನ್ನು ಸಮತಟ್ಟುಮಾಡಿ 10x10 ಅಡಿಗಳ ಬದಲು 10x08 ಅಡಿಗಳ ವಿಸ್ತೀರ್ಣದ ಸ್ಥಳವನ್ನೇ ಉಪಯೋಗಿಸುತ್ತಾ ಒಂದು ಪೆಟ್ಟಿಗೆ ಅಂಗಡಿಯಲ್ಲಿ ವ್ಯಾಪಾರ ಪ್ರಾರಂಭಿಸಲಾಗಿದೆ. ಇದಕ್ಕೆ 3 ಅಡಿ ದೂರ ನಗರಪಾಲಿಕೆ ಶೌಚಾಲಯ ಇದ್ದು, ಇದರಿಂದ, ದುರ್ವಾಸನೆ ಬರುತ್ತಿದ್ದು, 10 ಅಡಿ ಉದ್ದ ಮತ್ತು 8 ಅಡಿ ಎತ್ತರದ ಜಿಂಕ್‌ಶೀಟ್ ಗೋಡೆಯನ್ನು ನಿರ್ಮಿಸಲಾಗಿದೆಯೆಂದು, ಮುಂದುವರೆಸುತ್ತಾ, 10x10 ಅಡಿಗಳನ್ನೇ ಕಾಯಂ ಮಾಡಿಕೊಡಲು ಕೋರಿರುತ್ತಾರೆ.

ಜಂಟಿ ಆಯುಕ್ತರು(ಪೂರ್ವ)ರವರು ಕರಡು ಟಿಪ್ಪಣಿಯನ್ನು ಮಂಡಿಸುತ್ತಾ, ಮೀನು ವ್ಯಾಪಾರದ ಬದಲಾಗಿ ಸ್ವಇಚ್ಛೆಯಂತೆ ಊಟ ಮತ್ತು ಉಪಹಾರದ ವ್ಯಾಪಾರಕ್ಕೆ ಬದಲಾವಣೆ ಮಾಡುತ್ತಾ, ಉಲ್ಲಂಘಿಸಿರುವ ಬಗ್ಗೆ 10x10 ಅಡಿಗಳ ಖಾಲಿ ನಿವೇಶನವನ್ನು ಸಹಾ ಅನಧಿಕೃತವಾಗಿ ಸ್ವಾಧೀನಪಡಿಸಿರುವ ಬಗ್ಗೆ ಅರ್ಜಿದಾರರಿಗೆ ಹಿಂಬರಹ ನೀಡಿದ್ದು, ಮುಂದಿನ ತೀರ್ಮಾನಕ್ಕೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿಸಮಿತಿ ಮುಂದೆ ಟಿಪ್ಪಣಿ ಮಂಡಿಸಿರುತ್ತಾರೆ.

ಸಹಾಯಕ ಕಂದಾಯ ಅಧಿಕಾರಿ(ವಸಂತನಗರ) ಇವರ ವರದಿ ಪ್ರಕಾರ ಅನಧಿಕೃತವಾಗಿ ಜಾಗವನ್ನು ಅತಿಕ್ರಮಿಸಿಕೊಂಡಿರುವುದಿಲ್ಲವೆಂದು ಸಮಜಾಯಿಷಿ ನೀಡಿದ್ದು, ನನಗೂ ಇದು ಮನವರಿಕೆ ಯಾಗಿರುತ್ತದೆಂದು ವರದಿ ನೀಡಿರುತ್ತಾರೆ. ಇವರ ವರದಿಗೆ ಮೇಲಿನ ಎಲ್ಲಾ ವಲಯಮಟ್ಟದ ಅಧಿಕಾರಿಗಳು ಸ್ಪಂದಿಸಿರುತ್ತಾರೆ. ಯಾರು ದಿನನಿತ್ಯ ಓಡಾಡುವ ನಗರದ ಪ್ರಮುಖ ಜಾಗದಲ್ಲಿರುವ ಈ ಸ್ಥಳವನ್ನು ಪರಿಶೀಲನೆ ಮಾಡಿರುವುದಿಲ್ಲ. ದಿನಾಂಕ:13–12–2011 ರಂದು ಸ್ಥಳ ಪರಿಶೀಲಿಸಲಾಗಿ, ಭೂಮಾಪಕರು (ಪೂರ್ವ) ರವರು ತಯಾರಿಸಿರುವ ನಕ್ಷೆ ಯನ್ನು ಲಗತ್ತಿಸಿದೆ.

ಆಸ್ತಿಶಾಖೆಯ ಸ್ಥಳ ಪರಿಶೀಲನಾ ವರದಿಯಂತೆ, ರೇಸ್‌ಕೋರ್ಸ್ ರಸ್ತೆಯ ಮಧ್ಯದಲ್ಲಿರುವ ಪ್ರದೇಶ ಒಂದು ತ್ರಿಕೋನ ಪ್ರದೇಶದಲ್ಲಿ ದಟ್ಟವಾಗಿ ಹುಲ್ಲು ಬೆಳೆಸಿ ಬಂಬೂ ಗಿಡಗಳನ್ನು ನೆಟ್ಟು ಸುತ್ತಲೂ ಗ್ರಿಲ್ ನಿರ್ಮಿಸಿ ಹಸಿರು ಪ್ರದೇಶವನ್ನಾಗಿ ಪಾಲಿಕೆವತಿಯಿಂದ ನಿರ್ವಹಿಸಲಾಗಿತ್ತು. ಆಸ್ತಿಶಾಖೆಯಲ್ಲಿ ಹಳೆಯ ವಹಿಯಲ್ಲಿ ಇದು ಉದ್ಯಾನವನವೆಂದು ನಮೂದಿಸಲಾಗಿರುವುದು ಕಂಡು ಬಂದಿದೆ. ಪಶ್ಚಿಮ ಭಾಗದಲ್ಲಿ ಸಾರ್ವಜನಿಕ ಶೌಚಾಲಯವಿದ್ದು, ಉತ್ತರ ಭಾಗದಲ್ಲಿ ನಂದಿನಿ ಹಾಲಿನ ಬೂತ್‌ಗೆ ನೀಡಲಾಗಿದ್ದು, ಪೂರ್ವ ಭಾಗದಲ್ಲಿ

ಹಾಪ್‌ಕಾಮ್ಸ್ ಮಳಿಗೆ ಮತ್ತು ಕಾಂಡಿಮೆಂಟ್ಸ್‌ಗೆ ನೀಡಲಾಗಿರುತ್ತದೆ. ಮಧ್ಯದಲ್ಲಿ ಉಳಿದಿರುವ ಜಾಗದಲ್ಲಿ ಪ್ರಸಕ್ತ ಗುತ್ತಿಗೆದಾರರಾದ ಮಂಜುಳರವರು 21X23 ಅಡಿ ಅಳತೆಯ ಶೆಡ್‌ನ್ನು ನಿರ್ಮಿಸಿ, ಸುತ್ತಮುತ್ತಲಿನ ಸಂಪೂರ್ಣ ಜಾಗವನ್ನು ಉಪಯೋಗಿಸಿ ಮಾಂಸಹಾರಿ ಹೋಟೆಲ್‌ನ್ನು ನಡೆಸುತ್ತಿದ್ದು, ಶೌಚಾಲಯ ಮತ್ತು ಇವರ ಶೆಡ್ಡಿನ ಮಧ್ಯದಲ್ಲಿ ಹಾಲೋಬ್ಲಾಕ್ಸ್ ಇಟ್ಟಿಗೆಯ ಗೋಡೆಯನ್ನು ನಿರ್ಮಿಸಿರುತ್ತಾರೆ. ಈ ಅಂಗಡಿಗಳ ವಹಿವಾಟಿನಿಂದ ಉದ್ಭವಿಸುವ ಕಸ ಇತ್ಯಾದಿಯನ್ನು ಪೂರ್ವ ದಿಕ್ಕಿನಲ್ಲಿರುವ ಖಾಲಿ ಇರುವ ಪಾಲಿಕೆಯ ತೋಟದಲ್ಲಿ ಎಸೆದಿರುವುದು ಕಂಡು ಬರುತ್ತದೆ.

ಗುತ್ತಿಗೆಯು ನೀಡಿದ ಜಾಗ ಮತ್ತು ಉದ್ದೇಶ ಎರಡೂ ಧಿಕ್ಕರಿಸಿ ಅವರ ಮನಸ್ಸಿಗೆ ಬಂದ ಹಾಗೆ ವಹಿವಾಟು ನಡೆಸುತ್ತಿದ್ದು ಹಾಗೂ ಪ್ರಮುಖ ರಸ್ತೆಯ ಮಧ್ಯದ ಪಾಲಿಕೆ ಜಾಗದಲ್ಲಿ ಯಾವುದೇ ಅನುಮತಿಯಿಲ್ಲದೇ ಗೋಡೆಯನ್ನು ನಿರ್ಮಿಸಿ ಯಾವುದೇ ಕಾನೂನಿಗೆ ಲೆಕ್ಕಿಸದೇ ವ್ಯವಹರಿಸುತ್ತಿರುವುದು ಗೋಚರವಾದ ಸಂಗತಿಯಾಗಿದೆ. ಕರಾರು ಪತ್ರವನ್ನು ಸಹಾ ಮಾಡದೇ ಪಾಲಿಕೆಯ ಅಧಿಕಾರಿಗಳು ಈ ರೀತಿಯ ವ್ಯವಹಾರ ನಡೆಸಲು ಅನುವು ಮಾಡಿಕೊಟ್ಟಿರುವುದು ಆಶ್ಚರ್ಯಕರವಾದ ಸಂಗತಿಯಾಗಿರುತ್ತದೆ. ಸ್ಥಳೀಯ ಸಹ ಕಂದಾಯ ಅಧಿಕಾರಿ ತಪ್ಪು ವರದಿಯನ್ನು ನೀಡಿ ಕರಾರು ಪತ್ರವನ್ನು ನೊಂದಾಯಿಸದೇ ಎಲ್ಲಾ ಕಾನೂನುಬಾಹಿರ ವ್ಯವಹಾರಕ್ಕೆ ಅನುವು ಮಾಡಿಕೊಟ್ಟಿರುತ್ತಾರೆ.

ಈ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಕ್ರಮ ಜರುಗಿಸಲು ಪ್ರಸ್ತಾಪಿಸಲಾಗಿರುವುದನ್ನು ಆಯುಕ್ತರು ಅನುಮೋದಿಸಿರುತ್ತಾರೆ.

1. ಸಹಾಯಕ ಕಂದಾಯ ಅಧಿಕಾರಿ(ವಸಂತನಗರ)ರವರಿಂದ ವಿವರಣೆಯನ್ನು ಪಡೆದು ಜಂಟಿ ಆಯುಕ್ತರು (ಪೂರ್ವ) ರವರು ಇಲಾಖಾ ತನಿಖೆ ಪ್ರಾರಂಭಿಸಲು ಸೂಚಿಸಲಾಗಿದೆ.
2. ಕರಾರು ಪತ್ರವಿಲ್ಲದೇ ಪ್ರಾರಂಭಿಸಿರುವ ಅನಧಿಕೃತ ಸಂಪೂರ್ಣ ಕಟ್ಟಡ ಮತ್ತು ಗೋಡೆಯನ್ನು ತೆರವುಗೊಳಿಸಿ ಕರಾರು ನೊಂದಾಯಿಸಿದ ನಂತರ ಪಾಲಿಕೆಯ ಅನುಮೋದನೆಯಂತೆ ಜಾಗವನ್ನು ಹಸ್ತಾಂತರಿಸಿ ಯಾವ ಉದ್ದೇಶಕ್ಕೆ ಪಾಲಿಕೆ ನೀಡಿದೆಯೇ ಅದೇ ಉದ್ದೇಶಕ್ಕೆ ನಡೆಸುವ ಹಾಗೆ ನೋಡಿಕೊಳ್ಳತಕ್ಕದೆಂದು ಜಂಟಿ ಆಯುಕ್ತರು(ಪೂರ್ವ)ರವರಿಗೆ ಸೂಚಿಸಲಾಗಿದೆ.
3. ಸುತ್ತಮುತ್ತಲೂ ಖಾಲಿ ಉಳಿದಿರುವ ಪ್ರದೇಶವನ್ನು ಸಂಬಂಧಪಟ್ಟ ಅಭಿಯಂತರರು ಗಿಡಗಳನ್ನು ಬೆಳೆಸಲು ಅಗತ್ಯಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಮೇಲಿನಂತೆ ಕ್ರಮ ಜರುಗಿಸಲು ದಿನಾಂಕ 11-01-2012ರಂದು ಜಂಟಿ ಆಯುಕ್ತರು (ಪೂರ್ವ) ಸಹ ಕಂದಾಯ ಅಧಿಕಾರಿ ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಸಂತನಗರ) ರವರಿಗೆ ಆಂತರಿಕ ಕಛೇರಿ ಟಿಪ್ಪಣಿ ಮೂಲಕ ಸೂಚಿಸಲಾಗಿದೆ.

ಮೇಲ್ಕಂಡಂತೆ ಕೂಲಂಕುಷ ವರದಿ ಹಾಗೂ ಕೈಗೊಂಡಿರುವ ಕ್ರಮದ ಬಗ್ಗೆ ಹಾಗೂ ಸ್ಥಳೀಯ ನಗರಪಾಲಿಕೆ ಸದಸ್ಯರು ಗುತ್ತಿಗೆ ಉದ್ದೇಶ ಬದಲಾವಣೆಗೆ ನೀಡಿರುವ ಕೋರಿಕೆಯ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ಮಾನ್ಯ ಆಯುಕ್ತರ ದಿನಾಂಕ: 21-01-2012ರ ಟಿಪ್ಪಣಿಯನ್ನು ಮಾರ್ಪಡಿಸಿ, ಸದರಿ ಅರ್ಜಿದಾರರಿಗೆ ನೀಡಿದ್ದ ಮೀನು ಮಾರಾಟ ಮಳಿಗೆಯನ್ನು ಸ್ಥಳೀಯರ ದೂರಿನ ಮೇರೆಗೆ ರದ್ದುಪಡಿಸಿ, ಇದರ ಬದಲಿಗೆ ಊಟದ ವ್ಯಾಪಾರಕ್ಕಾಗಿ 3 ವರ್ಷಗಳ ಅವಧಿಗೆ ಹಾಗೂ ಈಗಿರುವ ಪ್ರಸ್ತುತ 21 X 23 ಅಡಿ ಅಳತೆಗೆ ಈ ನಿರ್ಣಯದ ದಿನಾಂಕದಿಂದ ಗುತ್ತಿಗೆಗೆ ನೀಡಲು ತಿರ್ಮಾನಿಸಿ, ಸದರಿ ಸ್ಥಳದಲ್ಲಿ ಸ್ವಚ್ಚತೆಯನ್ನು ಕಾಪಾಡಿಕೊಂಡು ಹೋಗಲು ಸೂಚಿಸಲಾಗಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 07-02-2012ರ ನಿರ್ಣಯ.

**-ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ-**

## ***20]. ವಿಷಯದ ಸಂಖ್ಯೆ :–ತೆಆಸ್ಥಾಸ/551/2011–12***

ಆಯುಕ್ತರು ಟಿಪ್ಪಣಿ ಸಂಖ್ಯೆ : ಮುಲೆಅ/ಎ.ಓ(ಪಿ)/ಬ್ಯಾಂಕ್ ಸಾಲ/ಪಿಆರ್/25/2011–12, ದಿನಾಂಕ : 24–03–2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು 2011–12ನೇ ಸಾಲಿನಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳು/ಹಣಕಾಸು ಸಂಸ್ಥೆಗಳಿಂದ ರೂ.1000.00 ಕೋಟಿ ಸಾಲವನ್ನು ಪಡೆಯುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯ ಸಂಖ್ಯೆ ತೆಆಸ್ಥಾಸ/301/2011–12 ದಿನಾಂಕ : 26–09–2011 ರಂದು ಒಪ್ಪಿಗೆ ನೀಡಿದ್ದು ಹಾಗೂ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ವಿಷಯ ಸಂಖ್ಯೆ : 24(200)2011–12ರಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಲಾಗಿರುತ್ತದೆ.

ಪಾಲಿಕೆಯ ದಿನನಿತ್ಯದ ವಹಿವಾಟುಗಳ ನಿರ್ವಹಣಾ ವೆಚ್ಚಗಳನ್ನು ಹಾಗೂ ತುರ್ತು ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸಲು ಹಾಗೂ ಅತೀ ಹೆಚ್ಚಿನ ಬಡ್ಡಿದರದ ಮೇಲೆ ಪಡೆಯಲಾಗಿರುವ ಸಾಲಗಳನ್ನು ಮರುಪಾವತಿ ಮಾಡಿದಲ್ಲಿ ಪಾಲಿಕೆಯ ಆರ್ಥಿಕ ಸ್ಥಿತಿಯನ್ನು ಸ್ವಲ್ಪಮಟ್ಟಿಗೆ ಸುಧಾರಿಸುವ ನಿಟ್ಟಿನಲ್ಲಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಇವರಿಗೆ ದೀರ್ಘಾವಧಿ ರೂಪದಲ್ಲಿ ರೂ.1000.00 ಕೋಟಿಗಳ ಸಾಲವನ್ನು ರಾಷ್ಟ್ರೀಕೃತ ಬ್ಯಾಂಕುಗಳು/ಹಣಕಾಸು ಸಂಸ್ಥೆಗಳಿಂದ ಪಡೆಯಲು ಅನುಮತಿ ನೀಡಲು ದಿನಾಂಕ : 17–01–2012ರಲ್ಲಿ ಪತ್ರವನ್ನು ಬರೆಯಲಾಗಿದೆ. ಈ ಸಂಬಂಧವಾಗಿ ಹುಡ್ಕೊ ಸಂಸ್ಥೆಯಿಂದ 15 ವರ್ಷಗಳ ದೀರ್ಘಾವಧಿ ಸಾಲ ಪಡೆಯಲು ಮಹಾನಗರ ಪಾಲಿಕೆ ವತಿಯಿಂದ ಸಾಲ ಪಡೆಯುವ ಮೊತ್ತದ ಮೇಲೆ ಶೇಕಡ 125%ರ ಮೊತ್ತದ ಸ್ಥಿರಾಸ್ಥಿಗಳ ಅನ್ನು ಅಡಮಾನ ಮಾಡಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪಾಲಿಕೆಯ ಒಡೆತನದ ಪಿ.ಯು.ಬಿ. ಕಟ್ಟಡ ಮತ್ತು ಜಯನಗರ ಶಾಪಿಂಗ್ ಕಾಂಪ್ಲಕ್ಸ್ ಕಟ್ಟಡಗಳು ಅವಶ್ಯ ಬಿದ್ದಲ್ಲಿ ಇತರೆ ಸ್ಥಿರಾಸ್ಥಿಗಳ ಅನ್ನು ಹುಡ್ಕೋ ಹಣಕಾಸು ಸಂಸ್ಥೆಗೆ ಅಡಮಾನ ನೀಡುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ತೀರ್ಮಾನ ಕೋರಿ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :– ದಿನಾಂಕ : 24–03–2012ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## ***21]. ವಿಷಯದ ಸಂಖ್ಯೆ :–ತೆಆಸ್ಥಾಸ/552/2011–12***

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ:ಜಆ(ಜಾ)ಪಿಆರ್/2492/11–12 ದಿನಾಂಕ : 26–03–2012 ರಲ್ಲಿ ವಿವರಿಸಿರುವಂತೆ, ಮೆ॥ ಎಸ್.ಎ.ಎಸ್. ಅಡ್ವರ್‌ಟೈಸರ್ಸ್ ಸಂಸ್ಥೆಯವರಿಗೆ ಸಾರ್ವಜನಿಕ ಶೌಚಾಲಯಗಳನ್ನು ಬಿ.ಓ.ಟಿ. ಆಧಾರದ ಮೇಲೆ ಪಿ.ಪಿ.ಪಿ. ಅಡಿಯಲ್ಲಿ ವಹಿಸಿಕೊಡುವ ಕುರಿತು ದಿನಾಂಕ:08.02.2011ರಂದು ಪೂಜ್ಯ ಮಹಾಪೌರರು ಈ ಕಛೇರಿಗೆ ಪತ್ರವನ್ನು ಸಲ್ಲಿಸಿ, ಮೆ॥ಎಸ್.ಎ.ಎಸ್. ಅಡ್ವರ್‌ಟೈಸರ್ಸ್ ಸಂಸ್ಥೆಯವರು ಪಾಲಿಕೆ ವ್ಯಾಪ್ತಿಯಲ್ಲಿ 50 ಸ್ಥಳಗಳಲ್ಲಿ ಸಾರ್ವಜನಿಕ ಶೌಚಾಲಯವನ್ನು ಬಿ.ಓ.ಟಿ. ಆಧಾರದ ಮೇಲೆ ಪಿ.ಪಿ.ಪಿ. ಅಡಿಯಲ್ಲಿ ನಿರ್ಮಿಸಲು ಇಚ್ಛಿಸಿದ್ದು, ಇದಕ್ಕಾಗಿ ಸದರಿ ಸಂಸ್ಥೆಯವರಿಗೆ 500 ಚದರ ಅಡಿ ಜಾಹೀರಾತನ್ನು ಅಳವಡಿಸಲು ಅನುಮತಿ ನೀಡುವಂತೆ ಕೋರಿರುವುದು ಹಾಗೂ ನಿಯಮಾನುಸಾರ ಕ್ರಮವಹಿಸುವಂತೆ ಆದೇಶಿಸಿರುವುದರಿಂದ ಪೂಜ್ಯ ಮಹಾಪೌರರ ಆದೇಶದಂತೆ ದಿನಾಂಕ:21.03.2011ರಂದು ವಿವರವಾದ ಟಿಪ್ಪಣಿಯನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಹಾಗೂ ಪಾಲಿಕೆ ಸಭೆಯ ಮುಂದೆ ಅನುಮೋದನೆಗಾಗಿ ಸಲ್ಲಿಸಿದ್ದು, ದಿನಾಂಕ:31.03.2011ರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:299/10–11 ರಲ್ಲಿ ನಿರ್ಣಯ:–**“ಆಯುಕ್ತರವರ ದಿನಾಂಕ:25.03.2011ರ ಟಿಪ್ಪಣಿಯನ್ನು ಭಾಗಶಃ ಒಪ್ಪುತ್ತಾ, 10 ವರ್ಷಗಳ ಕಾಲಾವಧಿಗೆ ಪಿ.ಪಿ.ಪಿ. ಆಧಾರದ ಮೇಲೆ ಷರತ್ತುಗಳಿಗೆ ಒಳಪಟ್ಟು ನೀಡುವ ಮಾರ್ಪಾಡಿನೊಂದಿಗೆ, ಹೆಚ್ಚಿನ ಕಾಲಾವಧಿಗೆ ಅನುಮತಿ ನೀಡಲು ಸರ್ಕಾರದ ಅನುಮೋದನೆ ಕೋರಲು ಸಭೆಯು ತೀರ್ಮಾನಿಸುತ್ತಾ, ಪಟ್ಟಿಯಲ್ಲಿರುವ 54 ಸ್ಥಳಗಳಿಗೆ ಬದಲಾಗಿ, 30 ಸ್ಥಳಗಳಿಗೆ ಮಾತ್ರ ನೀಡಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿ ಪರಿಶೀಲಿಸಿ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧವಾಗಿ ಒಪ್ಪುವುದೆಂದು ತೀರ್ಮಾನಿಸಲಾಯಿತು”.**

ಮುಂದುವರೆದಂತೆ, ದಿನಾಂಕ:30.07.2011ರಂದು ಮತ್ತೊಮ್ಮೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮುಂದೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ಸದರಿ ವಿಷಯವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ:110/11–12 ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ: 287/11–12ರಂತೆ ನಿರ್ಣಯವನ್ನು ತೆಗೆದುಕೊಳ್ಳಲಾಗಿರುತ್ತದೆ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ದಿನಾಂಕ:26.06.2011ರಂದು ವಿಷಚುದ ಸಂಖ್ಯೆ:287/2011–12ರಲ್ಲಿ ದಿನಾಂಕ:08.02.2011ರ ಪೂಜ್ಯ ಮಹಾಪೌರರ ಪತ್ರದಲ್ಲಿ ಮೆ॥ಎಸ್.ಎ.ಎಸ್. ಅಡ್ವರ್‌ಟೈಸರ್ಸ್ ಸಂಸ್ಥೆಯವರು ನಗರದ 54 ವಿವಿಧ ಸ್ಥಳಗಳಲ್ಲಿ ಪಿ.ಪಿ.ಪಿ. ಅಡಿಯಲ್ಲಿ ಸಾರ್ವಜನಿಕ

ಶೌಚಾಲಯಗಳನ್ನು ನಿರ್ಮಿಸಲು ಕೋರಿದ್ದು, ಇದರ ಬಗ್ಗೆ ನಿಯಾಮಾನುಸಾರ ಕ್ರಮ ವಹಿಸಲು ತಿಳಿಸಿರುತ್ತಾರೆ. ಅದರಂತೆ, ಸಾರ್ವಜನಿಕ ಶೌಚಾಲಯಗಳನ್ನು ಬಿ.ಓ.ಟಿ. ಆಧಾರದ ಮೇಲೆ ನಿರ್ಮಿಸಲು ಕೆ.ಟಿ.ಪಿ.ಪಿ. ಕಾಯ್ದೆಯಂತೆ ಟೆಂಡರ್ ಕರೆದು ಟೆಂಡರ್‌ನಲ್ಲಿ ಯಶಸ್ವಿಯಾದ ಬಿಡ್‌ದಾರರಿಗೆ ಷರತ್ತುಗಳೊಂದಿಗೆ ಅನುಮೋದನೆ ನೀಡಬಹುದಾಗಿದೆ ಹಾಗೂ ಅದೇ ಟಿಪ್ಪಣಿಯಲ್ಲಿ ದಿನಾಂಕ : 31.03.2011ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನ ವಿಷಯದ ಸಂಖ್ಯೆ: 299/2010–11ರಂತೆ **"ಆಯುಕ್ತರವರ ದಿನಾಂಕ:25.03.2011ರ ಟಿಪ್ಪಣಿಯನ್ನು ಭಾಗಶಃ ಒಪ್ಪುತ್ತಾ, 10 ವರ್ಷಗಳ ಕಾಲಾವಧಿಗೆ ಪಿ.ಪಿ.ಪಿ. ಆಧಾರದ ಮೇಲೆ ಷರತ್ತುಗಳಿಗೆ ಒಳಪಟ್ಟು ನೀಡುವ ಮಾರ್ಪಾಡಿನೊಂದಿಗೆ, ಹೆಚ್ಚಿನ ಕಾಲಾವಧಿಗೆ ಅನುಮತಿ ನೀಡಲು ಸರ್ಕಾರದ ಅನುಮೋದನೆ ಕೋರಲು ಸಭೆಯು ತೀರ್ಮಾನಿಸುತ್ತಾ, ಪಟ್ಟಿಯಲ್ಲಿರುವ 54 ಸ್ಥಳಗಳಿಗೆ ಬದಲಾಗಿ, 30 ಸ್ಥಳಗಳಿಗೆ ಮಾತ್ರ ನೀಡಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿ ಪರಿಶೀಲಿಸಿ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧವಾಗಿ ಒಪ್ಪುವುದೆಂದು" ತೀರ್ಮಾನಿಸಲಾಗಿರುತ್ತದೆ.** ಸದರಿ ನಿರ್ಣಯದಂತೆ ಸಾರ್ವಜನಿಕ ಶೌಚಾಲಯವನ್ನು ನಿರ್ಮಿಸಲು ಪಿ.ಪಿ.ಪಿ. ಅಡಿಯಲ್ಲಿ ಖಾಸಗಿ ಸಂಸ್ಥೆಯವರಿಗೆ ವಹಿಸಿಕೊಡುವ ಕುರಿತು ಸರ್ಕಾರದ ಅನುಮೋದನೆ ಕೋರಿ ಪತ್ರ ಸಂಖ್ಯೆ: ಉಆ(ಜಾ)ಪಿಆರ್/1208/10–11 ದಿ:09.03.2011 ಮತ್ತು 11.07.2011 ರಂದು ಕೋರಲಾಗಿದ್ದು, ಸದರಿ ಪತ್ರಕ್ಕೆ ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ದಿನಾಂಕ:18.08.2011 ರಂದು ಮಾನ್ಯ ಆಯುಕ್ತರವರಿಗೆ ಪತ್ರವನ್ನು ಬರೆದು ಪಾಲಿಕೆಗೆ ಹೆಚ್ಚಿನ ವರಮಾನ ಪಡೆಯುವ ಉದ್ದೇಶದಿಂದ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು ಬಿ.ಓ.ಟಿ. ಆಧಾರದ ಮೇಲೆ ಖಾಸಗಿ ಸಂಸ್ಥೆಯವರಿಗೆ ನೀಡುವ ಬದಲು ಕೆ.ಟಿ.ಪಿ.ಪಿ ಕಾಯ್ದೆ ಪ್ರಕಾರ ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಹೆಚ್ಚು ಪ್ರಸಾರವುಳ್ಳ ಇಂಗ್ಲೀಷ್/ಕನ್ನಡ ದಿನಪತ್ರಿಕೆಗಳಲ್ಲಿ ಪ್ರಕಟಿಸಿ ಟೆಂಡರ್‌ನ್ನು ಕರೆಯಲು ಕ್ರಮ ತೆಗೆದುಕೊಳ್ಳಲು ಆದೇಶಿಸಿರುತ್ತಾರೆ.

ಈ ವಿಷಯವನ್ನು ತಮ್ಮ ಅವಗಾಹನೆಗೆ ತರುತ್ತಾ, ಅಧ್ಯಕ್ಷರು, ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿರವರು ದಿನಾಂಕ:17.03.2012ರಂದು ಈ ಕಛೇರಿಗೆ ಪತ್ರವನ್ನು ಸಲ್ಲಿಸಿ ದಿನಾಂಕ: 31.03.2011 ರಂದು ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ: 299/2010–11 ರಲ್ಲಿ ತೆಗೆದುಕೊಂಡ ತೀರ್ಮಾನದಂತೆ ಪಿ.ಪಿ.ಪಿ. ಆಧಾರದ ಮೇಲೆ ಷರತ್ತುಗಳಿಗೆ ಒಳಪಟ್ಟು ನೀಡುವುದು ಸೂಕ್ತವಾಗಿರುತ್ತದೆಂದು ಶೌಚಾಲಯಗಳನ್ನು ನಿರ್ಮಿಸುವ ಕುರಿತಾದ ಮೂಲ ಕಡತವನ್ನು ಸಮಿತಿಯ ಮುಂದೆ ಕೂಡಲೇ ಮರು ಮಂಡಿಸಲು ಕೋರಿರುವ ಹಿನ್ನೆಲೆಯಲ್ಲಿ ಈ ಮೇಲ್ಕಂಡ ಅಂಶಗಳ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :– ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ :26–03–2012ರಲ್ಲಿನ ಪ್ರಸ್ತಾವನೆ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಮುಂದೆ ಮರು ಪರಿಶೀಲನೆಗಾಗಿ ಕಡತವನ್ನು ಕಳುಹಿಸಿಕೊಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.***

## *221. ವಿಷಯದ ಸಂಖ್ಯೆ :–ತೆಆಸ್ಥಾಸ/553/2011–12*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ: 29–03–2012 ರಲ್ಲಿ ವಿವರಿಸಿರುವಂತೆ, Providing Metalling Construction of CD Works, UGd Work to Main Road to Cross Roads asphalating in Mangamanapalya in Ward No-190 ಕಾಮಗಾರಿಗೆ 2009–10ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ616 ಅಡಿ ವರ್ಕ್‌ಕೋಡ್ ನೀಡಲಾಗಿದ್ದು, ಮರುನವೀಕರಣಕ್ಕೆ ರೂ.55.00 ಲಕ್ಷಗಳ ಅನುದಾನ ಅವಶ್ಯವಿದ್ದು, ಲೆಕ್ಕಶೀರ್ಷಿಕೆ ಪಿ2019ರ ಮುಂದುವರೆದ ಕಾಮಗಾರಿಗಳಡಿ ಲಭ್ಯವಿರುವ ಅನುದಾನದಲ್ಲಿ ಮರುಹೊಂದಾಣಿಕೆ ಮಾಡಿಕೊಂಡು ಮರು ನವೀಕರಿಸಲು, ಕರ್ನಾಟಕ ಮುನಿಸಿಪಲ್ ಕಾಯಿದೆ 1976 ಸೆಕ್ಷನ್ 172 ರ ಪ್ರಕಾರ ಮರುಹೊಂದಾಣಿಕೆ (Re-appropriation) ಪ್ರಸ್ತಾವನೆಯನ್ನು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :– ದಿನಾಂಕ : 29–03–2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಿದೆ.***

## ***23]. ವಿಷಯದ ಸಂಖ್ಯೆ :–ತೆಆಸ್ಥಾಸ/554/2011–12***

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ: 27–03–2012 ರಲ್ಲಿ ವಿವರಿಸಿರುವಂತೆ, Kempegowda Heritage trail dev of Naraharigudda ಅಡಿಯಲ್ಲಿ (Improvement to Kumaraswamy Temple Premises in Ward No-53, New Ward No.164 ಕಾಮಗಾರಿಗೆ 2009–10ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ–1640 ಅಡಿ ವರ್ಕ್‌ಕೋಡ್ ನೀಡಲಾಗಿದ್ದು, ಮರುನವೀಕರಣಕ್ಕೆ ರೂ.126.3/– ಲಕ್ಷಗಳ ಅನುದಾನ ಅವಶ್ಯವಿದ್ದು, ಲೆಕ್ಕಶೀರ್ಷಿಕೆ ಪಿ–1543ರ ಮುಂದುವರೆದ ಕಾಮಗಾರಿಗಳಡಿ ಲಭ್ಯವಿರುವ ಅನುದಾನದಲ್ಲಿ ಮರುಹೊಂದಾಣಿಕೆ ಮಾಡಿಕೊಂಡು ಮರು ನವೀಕರಿಸಲು, ಕರ್ನಾಟಕ ಮುನಿಸಿಪಲ್ ಕಾಯಿದೆ 1976 ಸೆಕ್ಷನ್ 172 ರ ಪ್ರಕಾರ ಮರುಹೊಂದಾಣಿಕೆ (Re-appropriation) ಪ್ರಸ್ಥಾವನೆಯನ್ನು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :– ದಿನಾಂಕ : 27–03–2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಿದೆ.***

## ***24]. ವಿಷಯದ ಸಂಖ್ಯೆ :–ತೆಆಸ್ಥಾಸ/555/2011–12***

ವಿಶೇಷ ಆಯುಕ್ತರು ‘ವರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್‌ಆರ್(4)208/2011–12ದಿನಾಂಕ : 22.03.2012 ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ಟಿಪ್ಪಣಿ ಬರೆದು ಸನ್ಮಾನ್ಯ ಶ್ರೀ ಎಸ್. ಮುನಿರಾಜು, ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ, ಇವರ ಪತ್ರ ಮತ್ತು ರಂಜನಿಕಲಾ ಕೇಂದ್ರ (ರಿ), ನಂ. 25, 1ನೇ ಕ್ರಾಸ್, ಅನ್ನಪೂರ್ಣೇಶ್ವರಿ ಲೇ ಔಟ್, ವೀರಭದ್ರನಗರ, ಬನಶಂಕರಿ 3ನೇ ಹಂತ, ಬೆಂಗಳೂರು – 85 ಇವರು ಸಲ್ಲಿಸಿರುವ ಪತ್ರಗಳನ್ನು ಇದರೊಂದಿಗೆ ಲಗತ್ತಿಸುತ್ತಾ, ಸದರಿಯವರು ಶ್ರೀ ರಂಜನಿ ಕಲಾಕೇಂದ್ರ (ರಿ) ರವರು ಬೆಂಗಳೂರು ಅರಮನೆ ಆವರಣದಲ್ಲಿ ದಿನಾಂಕ 28–03–2012 ರಂದು ಒಂದು ಸಾವಿರ ವೀಣಾವಾದಕರ ವೀಣಾವಾದನದ ಝೇಂಕಾರ ಕಾರ್ಯಕ್ರಮದಲ್ಲಿ ಕಲಾವಿದರನ್ನು ಗೌರವಿಸುವ ಕಾರ್ಯಕ್ರಮವಿದ್ದು ಸುಮಾರು ರೂ. 75.00 ಲಕ್ಷಗಳ ವೆಚ್ಚವಾಗಲಿದ್ದು, ಈ ಕಾರ್ಯಕ್ರಮಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಧನ ಸಹಾಯ ಕೋರಿದ್ದು, ಮಾನ್ಯ ಶಾಸಕರು ನಿಯಮಾನುಸಾರ ಪರಿಶೀಲಿಸಿ ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಮಾನ್ಯ ಶಾಸಕರ ಪತ್ರದ ಕೋರಿಕೆ ಮೇರೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಲು ಕೋರಿರುತ್ತಾರೆ.

ಶ್ರೀ ಎಸ್. ಮುನಿರಾಜು, ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ರವರು ರಂಜನಿಕಲಾ ಕೇಂದ್ರ (ರಿ) ರವರಿಗೆ ಪಾಲಿಕೆ ವತಿಯಿಂದ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ಅನುಬಂಧ–2 ರಲ್ಲಿ 185 ವಿವಿಧ ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಲಾಗಿರುತ್ತದೆ. ಉಳಿಕೆ ಮೊತ್ತ ರೂ. 116.50 ಲಕ್ಷಗಳು.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಪ್ರಸ್ತಾವಿತ ಸಂಸ್ಥೆಯ ಮನವಿಯ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :– ದಿನಾಂಕ : 22–03–2012ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.10.00 (ಹತ್ತು) ಲಕ್ಷಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## *25]. ವಿಷಯದ ಸಂಖ್ಯೆ :–ತೆಆಸ್ಥಾಸ/556/2011–12*

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್‌ಆರ್(4)194/11–12, ದಿನಾಂಕ ಃ 24.02.2012 ರಲ್ಲಿ ವಿವರಿಸಿರುವಂತೆ, ಶ್ರೀಮತಿ ಶಾರದಮ್ಮ, ಪೂಜ್ಯ ಮಹಾಪೌರರು ಟಿಪ್ಪಣಿ ಬರದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರಕಲಾ ಸಂಘದ ಕಾರ್ಯದರ್ಶಿಯವರು ನೀಡಿರುವ ಪತ್ರವನ್ನು ಇದರೊಂದಿಗೆ ಲಗತ್ತಿಸುತ್ತಾ, ಸದರಿಯವರು ಮೇಲ್ಕಂಡ ಸಂಘವು 1953 ರಲ್ಲಿ ಸ್ಥಾಪನೆಗೊಂಡು, ಅಂದಿನಿಂದ ಇಂದಿನವರೆಗೆ ವತಿಯಿಂದ ಸಾಮಾಜಿಕ ಮತ್ತು ಪೌರಾಣಿಕ ನಾಟಕಗಳನ್ನು ಹವ್ಯಾಸ ಮಾಡಿಕೊಂಡು ಸಾರ್ವಜನಿಕ ಪ್ರದರ್ಶನ ಮಾಡುತ್ತಾ ಬರುತ್ತಿದ್ದು, ಪ್ರಮುಖವಾಗಿ ಬೆಂಗಳೂರು ನಗರ ಕರಗ ಮಹೋತ್ಸವ ಸಂದರ್ಭದಲ್ಲಿ ಕರಗ ನೋಡಲು ಬರುವ ಸಾರ್ವಜನಿಕರಿಗೆ ಪೌರಾಣಿಕ ನಾಟಕ ಪ್ರದರ್ಶನವನ್ನು ಮಾಡುತ್ತ ಬರುತ್ತಿರುವುದಲ್ಲದೆ ವಾರ್ಷಿಕೋತ್ಸವದ ಅಂಗವಾಗಿ ಲಘು ಸಂಗೀತ, ನೃತ್ಯ ರಂಗಗೀತೆ ಸ್ಪರ್ಧಾ ಇತ್ಯಾದಿ ರಂಗೋತ್ಸವ ಕಾರ್ಯಕ್ರಮವನ್ನು ಸಹ ಆಚರಿಸುತ್ತಾ ಬರಲಾಗುತ್ತಿದ್ದು, ಈ ಕಾರ್ಯಕ್ರಮಗಳಿಗೆ ಪ್ರೋತ್ಸಾಹಿಸುವ ಸಲುವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಪ್ರತಿ ವರ್ಷ ಆಯವ್ಯಯದಲ್ಲಿ ಹಣ ಕಾದಿರಿಸುತ್ತಾ ಬರುತ್ತಿದೆ. ಈ ನಿಟ್ಟಿನಲ್ಲಿ 2011–12 ನೇ ಸಾಲಿನ ಆಚುವ್ಯಯದಲ್ಲಿ ರೂ. 3.00 ಲಕ್ಷಗಳ ಅನುದಾನವನ್ನು ಕಾದಿರಿಸಲಾಗಿರುತ್ತದೆಂದು ಮೇಲ್ಕಂಡ ಸಂಘವು ದಿನಾಂಕ 19.02.2012 ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ರಂಗೋತ್ಸವ ಕಾರ್ಯಕ್ರಮ ಹಮ್ಮಿಕೊಂಡು ಇದರ ಅಂಗವಾಗಿ ಲಘು ಸಂಗೀತ, ರಂಗ ಗೀತೆಗಳ ಸ್ಪರ್ಧೆ ಮತ್ತು ಪೌರಾಣಿಕ ನಾಟಕವನ್ನು ಏರ್ಪಡಿಸಲಾಗಿರುವುದರಿಂದ ಬೆಂಗಳೂರು ಮಹಾನಗರ ಪಾಲಿಕೆಯ 2011–12ನೇ ಸಾಲಿನ ಆಯವ್ಯಯದಲ್ಲಿ ಕಾದಿರಿಸಿರುವ ರೂ. 3.00 ಲಕ್ಷಗಳ ಅನುದಾನವನ್ನು ಮೇಲ್ಕಂಡ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಸದರಿಯವರ ಕೋರಿಕೆಯನ್ನು ಪರಿಗಣಿಸಿ ಹಣ ಬಿಡುಗಡೆ ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಲು ಕೋರಿರುತ್ತಾರೆ.

ಸದರಿಯವರಿಗೆ 2010–11 ನೇ ಸಾಲಿನಲ್ಲಿ ರೂ. 2.00 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ

ನಿರ್ಣಯದ ವಿಷಯದ ಸಂಖ್ಯೆ 165/2011–12ರಂತೆ 185 ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (98) ರಲ್ಲಿ "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಕಲಾ ಸಂಘ" ರವರಿಗೆ ರೂ. 3.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ **ಪ್ರಸ್ತಾವಿತ ಸಂಸ್ಥೆಗೆ ರೂ. 1.00 ಲಕ್ಷ** ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :– ದಿನಾಂಕ : 24–03–2012ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಿದೆ.***

## *26]. ವಿಷಯದ ಸಂಖ್ಯೆ :–ತೆಆಸ್ಥಾಸ/557/2011–12*

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ ಃ 30–03–2012 ರಲ್ಲಿ ವಿವರಿಸಿರುವಂತೆ, ದಿನಾಂಕ : 10–04–2011 ರಂದು ಹಿಂದಿನ ಮಾನ್ಯ ಆಯುಕ್ತರು ವಾ.ನಂ.41ರ ಪರಿವೀಕ್ಷಣಾ ಸಮಯದಲ್ಲಿ ತುರ್ತಾಗಿ ಕೈಗೊಳ್ಳಬೇಕಾಗಿರುವ ವಿವಿಧ ಕಾಮಗಾರಿಗಳ ಒಟ್ಟು 15 ಕಾಮಗಾರಿಗಳ 1130 ಲಕ್ಷಗಳ ವೆಚ್ಚದಲ್ಲಿ ಕಾಮಗಾರಿಗಳನ್ನು 2011–12ರ ಆಯವ್ಯಯದಲ್ಲಿ ಸೇರಿಸಿಕೊಳ್ಳುವಂತೆ ಹಾಗೂ ಸೂಕ್ತ ಲೆಕ್ಕಶೀರ್ಷಿಕೆ ಅಡಿ ಜಾಬ್‌ಕೋಡ್ ನೀಡುವ ಬಗ್ಗೆ ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ದಿನಾಂಕ : 12–08–2011 ರಂದು ಟಿಪ್ಪಣಿಯಲ್ಲಿ ಮಂಡಿಸಿರುತ್ತಾರೆ. ಆದರೆ ದಿನಾಂಕ : 26–09–2011 ರಂದು ಆರ್ಥಿಕ ಮತ್ತು

ಸ್ಥಾಯಿ ಸಮಿತಿಯ ಸಭೆಯ ನಡವಳಿಯಲ್ಲಿ ವಿಷಯದ ಸಂಖ್ಯೆ:ತೆ.ಆ.ಸ್ಥಾ.ಸ/268/2011–12ನೇ ಸಾಲಿನ ಆಯವ್ಯಯವು ಈಗಾಗಲೇ ಮಂಡನೆ ಆಗಿರುವುದರಿಂದ ಕಡವನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿರುತ್ತಾರೆ.

ಮುಂದುವರೆದಂತೆ ಮತ್ತೊಮ್ಮೆ ಸದರಿ ವಾರ್ಡ್ 41 ರ ಮಾನ್ಯ ಸದಸ್ಯರಾದ ಶ್ರೀ.ಕೆ.ಎಲ್.ತಿಮ್ಮನಂಜಯ್ಯ ಪೀಣ್ಯ ಕೈಗಾರಿಕಾ ಪ್ರದೇಶ ರವರು ದಿನಾಂಕ : 19–03–2012 ರಂದು ತಮ್ಮ ಪತ್ರದಲ್ಲಿ ಸಾರ್ವಜನಿಕ ಮತ್ತು ಜನ ಸಾಮಾನ್ಯರ ಹಿತದೃಷ್ಟಿಯಿಂದ ಈ 15 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅತ್ಯಾವಶ್ಯಕತೆ ಇರುವುದರಿಂದ ಕಡತವನ್ನು ಪುನರ್ ಪರಿಶೀಲಿಸಿ ಕಾಮಗಾರಿಗಳಿಗೆ ಅನುಮೋದನೆ ಹಾಗೂ ಜಾಬ್ ಕೋಡ್ ನೀಡಬೇಕೆಂದು ಕೋರಿ ಮಾನ್ಯ ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿರವರಿಗೆ ಪತ್ರ ಬರೆದಿರುತ್ತಾರೆ. ಮಾನ್ಯ ಅಧ್ಯಕ್ಷರು ಸದರಿ ಪತ್ರದಲ್ಲಿ ಕಡತವನ್ನು ಮರುಮಂಡಿಸಲು ಆದೇಶಿಸಿರುತ್ತಾರೆ. ಅದರಂತೆ ಮಾನ್ಯ ಪಾಲಿಕೆ ಸದಸ್ಯರ ಕೋರಿಕೆಯಂತೆ 15 ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅನುಮೋದನೆ ನೀಡಲು ಹಾಗೂ ಲೆಕ್ಕಶೀರ್ಷಿಕೆ ಪಿ–1771 ವಲಯ ಕಾಮಗಾರಿಗಳು ಹಾಗೂ ವಿಶೇಷ ಅನುದಾನದಡಿಯಲ್ಲಿ ಜಾಬ್ ಕೊಡ್ ನೀಡಲು ಅನುಮೋದನೆ ಕೋರಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ. ಒಟ್ಟು 2.30 (ರೂ.ಎರಡು ಕೋಟಿ ಮುವ್ವತ್ತು ಲಕ್ಷಗಳ) ಕಾಮಗಾರಿಗೆ ಅನುಮೋದನೆ ಕೋರಲಾಗಿದೆ.

***ನಿರ್ಣಯ :–*** ***ದಿನಾಂಕ : 30–03–2012ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಿದೆ.***

## ***27]. ವಿಷಯದ ಸಂಖ್ಯೆ :–ತೆಆಸ್ಥಾಸ/558/2011–12***

ವಿಶೇಷ ಆಯುಕ್ತರು (ಯೊಜನೆ) ರವರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/302/11–12, ದಿನಾಂಕ : 17–02–2012 ರಲ್ಲಿ ವಿವರಿಸಿರುವಂತೆ, ವಾರ್ಡ್ ನಂ:172, ಅತ್ತಿಗುಪ್ಪೆ ವ್ಯಾಪ್ತಿಯ ಇಂದಿರಾ ಕಾಲೋನಿ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ಫಲಾನುಭವಿಗಳು ಸುಮಾರು ವರ್ಷಗಳಿಂದ ವಾಸ ಮಾಡುತ್ತಿದ್ದು, ನಾಗರೀಕ ಸೌಲಭ್ಯಗಳನ್ನು ಹೊಂದಿದ್ದು ಪಾಲಿಕೆ ವತಿಯಿಂದ ಹಕ್ಕುಪತ್ರ ನೀಡುವ ವಿಷಯವಾಗಿರುತ್ತದೆ.

ವಲಯಾಧಿಕಾರಿಗಳು ಪರಿಶೀಲನೆ ನಡೆಸಿ, ಇಂದಿರಾ ಕಾಲೋನಿ ಘೋಷಿತ ಕೊಳಚೆ ಪ್ರದೇಶವಾಗಿದ್ದು, ಇದರಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಹುಡ್ಕೋ ಯೋಜನೆಯಡಿ 40 ಮನೆ ನಿರ್ಮಿಸಿ ಹಂಚಿಕೆ ಮಾಡಿದ್ದು, ಇದನ್ನು ಹೊರತುಪಡಿಸಿ, ಇಲ್ಲಿ ಒಟ್ಟು 141 ಫಲಾನುಭವಿಗಳು ವಾಸಮಾಡುತ್ತಿರುತ್ತಾರೆ. ಇದರಲ್ಲಿನ 28 ಮಂದಿ ಫಲಾನುಭವಿಗಳ ಪೈಕಿ 12 ಮಂದಿ ಜಿ.ಪಿ.ಎ. ಮೂಲಕ ಕ್ರಯಕ್ಕೆ ನೀಡಿದ್ದು, 5 ಮಂದಿ ಮರಣ ಹೊಂದಿದ್ದು ಮತ್ತು 11 ಮಂದಿ ಭಾವಚಿತ್ರ, ಸೂಕ್ತ ದಾಖಲೆ ಒದಗಿಸಿರುವುದಿಲ್ಲವಾದುದರಿಂದ, ಇದರಲ್ಲಿನ 113 ಜನ ಫಲಾನುಭವಿಗಳಿಗೆ ಹಕ್ಕುಪತ್ರ ನೀಡುವ ಪ್ರಸ್ತಾವನೆಯನ್ನು ಆದೇಶಕ್ಕಾಗಿ ಸಲ್ಲಿಸಿರುತ್ತಾರೆ ಹಾಗೂ ಸ್ಥಳೀಯ ಪಾಲಿಕೆ ಸದಸ್ಯರು, ಇಲ್ಲಿ ಸಂಪೂರ್ಣ ಮನೆಗಳು ನಿರ್ಮಾಣವಾಗಿದ್ದು, ಬಹುಮಹಡಿ ಕಟ್ಟಲು ಸ್ಥಳ ಇರುವುದಿಲ್ಲ. ಈ ಮನೆಗಳಿಗೆ ಹಕ್ಕುಪತ್ರ ನೀಡಿ ಆಸ್ತಿ ತೆರಿಗೆ ಕ್ರೋಢಿಕರಿಸಬಹುದಾಗಿರುವುದರಿಂದ ಹಕ್ಕುಪತ್ರ ನೀಡಲು ಕೋರಿರುತ್ತಾರೆ.

ಈ ಹಿಂದೆ ಕೊಳಚೆ ಪ್ರದೇಶಗಳಲ್ಲಿ ಹಕ್ಕುಪತ್ರ ನೀಡುವ ಸಂಬಂಧ ಇದ್ದ ಸರ್ಕಾರಿ ಆದೇಶದಲ್ಲಿ ಪ್ರತಿ ಚದರ ಗಜ 1ಕ್ಕೆ 200/–ರೂ.ನಂತೆ ವಸೂಲಿ ಮಾಡಿ ನೀಡಬೇಕೆಂದಿತ್ತು. ಕೇಂದ್ರ ಸರ್ಕಾರದ ಆದೇಶದಂತೆ ಬಹುಮಹಡಿ ಕಟ್ಟಡಗಳನ್ನು ಕಟ್ಟಿ ನಿರ್ಮಿತ ಮನೆಗಳಿಗೆ ಹಕ್ಕುಪತ್ರ ನೀಡಬೇಕೆಂದು ಇರುವ ಆದೇಶದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಹಕ್ಕುಪತ್ರ ನೀಡಲು ಇದ್ದ ಆದೇಶವನ್ನು ಹಿಂಪಡೆದಿರುತ್ತದೆ. ಈ ಬಗ್ಗೆ ವಸತಿ ಸಚಿವರು ಹಕ್ಕುಪತ್ರ ನೀಡುವ ಸಂಬಂಧ ಈ ಹಿಂದೆ ಇದ್ದ ಆದೇಶವನ್ನು ಪುನರ್ ಜಾರಿ ಮಾಡುವ ಸಂಬಂಧ ಪ್ರಧಾನ ಕಾರ್ಯದರ್ಶಿಗಳು, ವಸತಿ ಇಲಾಖೆರವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ವರದಿ ನೀಡಲು ಕೋರಿರುತ್ತಾರೆ. ಕೊಳಚೆ ಪ್ರದೇಶಗಳಲ್ಲಿ ಹಕ್ಕುಪತ್ರ ನೀಡುವ ಬಗ್ಗೆ ಸರ್ಕಾರಿ ಆದೇಶ ಬಂದಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಈ ಪ್ರದೇಶದಲ್ಲಿನ 113 ಜನ ನಿವಾಸಿಗಳಿಗೆ ಹಕ್ಕುಪತ್ರ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ವಿಶೇಷ ಆಯುಕ್ತರ ದಿನಾಂಕ 17–02–2012ರ ಟಿಪ್ಪಣಿಯ ಮೇರೆಗೆ, **ವಿಶೇಷ ಆಯುಕ್ತರು ಯೋಜನೆ ಅವರ ದಿನಾಂಕ 17–02–2012ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06–03–2012ರ ನಿರ್ಣಯ.**

***ನಿರ್ಣಯ :–*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06.03.2012ರ ನಿರ್ಣಯವನ್ನು ಒಪ್ಪಿದೆ.**

## ***28]. ವಿಷಯದ ಸಂಖ್ಯೆ :–ತೆಆಸ್ಥಾಸ/559/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/85/10–11, ದಿನಾಂಕ : 20–09–2011 ರಲ್ಲಿ ವಿವರಿಸಿರುವಂತೆ, ಸರ್ಕಾರಿ ಆದೇಶ ಸಂಖ್ಯೆ:ಹೆಚ್‌ಎಂಎ 295 ಎಂಎನ್‌ಜಿ 77, ದಿನಾಂಕ:24–02–1978 ರಲ್ಲಿ ಮಿಲ್ಲರ್ ಟ್ಯಾಂಕ್ ಬೆಡ್ ಪ್ರದೇಶದ ಪ್ಲಾಟ್ ನಂ.16 ಹೆಚ್ ರಲ್ಲಿ 125X125+130/2 ಅಂದರೆ 15937.5 ಚದರ ಅಡಿ ವಿಸ್ತೀರ್ಣದ ಪ್ರದೇಶವನ್ನು ವಾರ್ಷಿಕ ಗುತ್ತಿಗೆ ರೂ.100/– ಕ್ಕೆ 30 ವರ್ಷಗಳ ಅವಧಿಗೆ ಕರ್ನಾಟಕ ಮೆಡಿಕಲ್ ಕೌನ್ಸಿಲ್‌ಗೆ ನೀಡಲಾಗಿರುತ್ತದೆ. ಗುತ್ತಿಗೆ ಕರಾರನ್ನು ದಿನಾಂಕ:23–11–1979 ರಲ್ಲಿ ಮಾಡಿ ಇದರಲ್ಲಿ ಗುತ್ತಿಗೆ ಮೊತ್ತವನ್ನು ಆಡಳಿತಗಾರರ ಆದೇಶದಂತೆ ಪರಿಷ್ಕರಿಸಿ ವಾರ್ಷಿಕ ರೂ.500/– ರಂತೆ ಪರಿಷ್ಕರಿಸಲಾಗಿರುತ್ತದೆ. ಈ ಗುತ್ತಿಗೆ ಅವಧಿ ದಿನಾಂಕ:22–11–2009ಕ್ಕೆ ಮುಕ್ತಾಯಗೊಂಡಿರುತ್ತದೆ. ಈ ಸಂಸ್ಥೆಯು 1961ರ ಕರ್ನಾಟಕ ಕಾಯ್ದೆ ಸಂಖ್ಯೆ:34 ರಂತೆ ಸ್ಥಾಪಿತಗೊಂಡ ಶಾಸನ ಬದ್ಧ ಪ್ರಾಧಿಕಾರವಾಗಿರುತ್ತದೆ.

ಮೇಲ್ಕಂಡ ನಿವೇಶನದಲ್ಲಿ ಸಂಸ್ಥೆಯವರು 2 ಅಂತಸ್ತಿನ ಕಟ್ಟಡ ನಿರ್ಮಾಣ ಮಾಡಿದ್ದು, ಸಂಸ್ಥೆಯ ಕಾರ್ಯಕಲಾಪಗಳಿಗಾಗಿ ಶಾಶ್ವತವಾಗಿ ಇದರ ಅವಶ್ಯಕತೆ ಇರುವುದಿರಂದ ಇದು ಕರ್ನಾಟಕದ ಒಂದು ಶಾಸನಬದ್ಧ ಸಂಸ್ಥೆಯಾಗಿರುವುದರಿಂದ ಸದ್ಯಕ್ಕೆ ಕನಿಷ್ಟ ಅವಧಿಗೆ ನವೀಕರಿಸಿ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಕ್ರಯಕ್ಕೆ ನೀಡಲು ಕೋರಿರುತ್ತಾರೆ.

ಸರ್ಕಾರದ ಮಾರ್ಗಸೂಚಿ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಸಿವಿಸಿ/ಬಿಯುಡಿ/05/2006–07, ಬೆಂಗಳೂರು ದಿನಾಂಕ:17–04–2007 ರಂತೆ ಪ್ರಸ್ತುತ ಜಾಗದ ಮಾರುಕಟ್ಟೆ ದರ ಚದರ ಅಡಿ ಒಂದಕ್ಕೆ ರೂ.3400/–ಗಳಾಗಿದ್ದು, 15937.5 ಚದರ ಅಡಿಗಳಿಗೆ ಆಸ್ತಿಯ ಒಟ್ಟು ಮೌಲ್ಯ ರೂ 5,41,87,500/– ಗಳಾಗುತ್ತದೆ. ಮಾರುಕಟ್ಟೆ ಮೌಲ್ಯದ ಶೇ 10% ರಂತೆ ಪರಿಗಣಿಸಿದಾಗ ವಾರ್ಷಿಕ ರೂ 54,18,750/– ಗಳು  ಮಾಸಿಕ ರೂ 4,51,563/– ಗಳಾಗುತ್ತದೆ.

ಪಾಲಿಕೆಯ ಸುತ್ತೋಲೆ ದಿನಾಂಕ:01–03–2002ರ ಆಯುಕ್ತರ ಸುತ್ತೋಲೆ ಕ್ರಮಸಂಖ್ಯೆ 7/5ರನ್ವಯ ಅಂಗವಿಕಲರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು ಸಮಾಜಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿ ನೀಡಲು ಅವಕಾಶವಿರುತ್ತದೆ. ಈ ಸಂಸ್ಥೆಗೂ ಮೇಲ್ಕಂಡ ದರದಲ್ಲಿ ರಿಯಾಯಿತಿಯೊಂದಿಗೆ ಮುಂದಿನ 3 ವರ್ಷಗಳಿಗೆ ಗುತ್ತಿಗೆ ನವೀಕರಿಸಿ ಮೇಲ್ಕಂಡ ಮಾರುಕಟ್ಟೆ ದರದಂತೆ ಕ್ರಯಕ್ಕೆ ನೀಡಲು ಸರ್ಕಾರದ ಮಟ್ಟದಲ್ಲಿರುವ ಸಲಹಾ ಸಮಿತಿಯ ಅನುಮೋದನೆಯೊಂದಿಗೆ ಕ್ರಯಕ್ಕೆ ನೀಡಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, **ಆಯುಕ್ತರ ಟಿಪ್ಪಣಿ ದಿನಾಂಕ 20–09–2011ನ್ನು ಮಾರ್ಪಡಿಸಿ ಅರ್ಜಿದಾರರಿಗೆ 3 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುವಂತೆ ನಿರ್ಣಯಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06.03.2012ರ ನಿರ್ಣಯ**

*ನಿರ್ಣಯ :–* **ವಾರ್ಷಿಕ ರೂ.25,000/– (ಇಪ್ಪತ್ತೈದು ಸಾವಿರ) ಗುತ್ತಿಗೆ ಮೊತ್ತವನ್ನು ನಿಗದಿಪಡಿಸುತ್ತಾ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06.03.2012ರ ನಿರ್ಣಯವನ್ನು ಒಪ್ಪಿದೆ.**

## *291. ವಿಷಯದ ಸಂಖ್ಯೆ :–ತೆಆಸ್ಥಾಸ/560/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/291/11–12, ದಿನಾಂಕ : 08–02–2012 ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ: 119ರ ಕುಂಬಾರಗುಂಡಿ ಬಡಾವಣೆಯ ಪಾದಚಾರಿ ರಸ್ತೆಯ 1ನೇ ಕ್ರಾಸ್, ಶಿವಾಜಿ ಲೇನ್‌ನ ಹಿಂಬಾಗದಲ್ಲಿ ಶ್ರೀಲ ಜಿ.ಸೀನಾ ಎಂಬುವವರಿಗೆ ದೂರವಾಣಿ ಬೂತ್ ನಡೆಸಲು 4X5=20 ಚದರಡಿಗಳ ಜಾಗವನ್ನು 5 ವರ್ಷಗಳ ಅವಧಿಗೆ ಮಾಸಿಕ ರೂ. 500/–ಗಳಿಗೆ ಗುತ್ತಿಗೆಗೆ ನೀಡಿದ್ದು, ಗುತ್ತಿಗೆ ಅವಧಿಯು ದಿ:24–04–2010ಕ್ಕೆ ಮುಕ್ತಾಯಗೊಂಡಿರುತ್ತದೆ.

ಅರ್ಜಿದಾರರಾದ ಶ್ರೀ. ಜಿ. ಸೀನಾರವರು ದಿನಾಂಕ: 15–09–2011ರಂದು ಅರ್ಜಿ ಸಲ್ಲಿಸಿ ಸುಮಾರು 11 ವರ್ಷಗಳಿಂದ ಎಸ್.ಟಿ.ಡಿ ಬೂತ್ ನಡೆಸಲು ಮಹಾನಗರ ಪಾಲಿಕೆ ವತಿಯಿಂದ ಅನುಮತಿ ಪಡೆದು ನಡೆಸಿಕೊಂಡು ಬರುತ್ತಿದ್ದು, 2005 ರಿಂದ 5 ವರ್ಷಗಳ ಗುತ್ತಿಗೆಯನ್ನು ನವೀಕರಿಸಿಕೊಂಡು ಬಾಡಿಗೆಯನ್ನು ಮಹಾನಗರ ಪಾಲಿಕೆಗೆ ಪಾವತಿಸುತ್ತಾ ಸಾರ್ವಜನಿಕರಿಗೆ ಯಾವುದೇ ತೊಂದರೆ ಇಲ್ಲದಂತೆ ಬರುತ್ತಿದ್ದೇನೆ ಹಾಗೂ ಬಡ ಕುಟುಂಬಕ್ಕೆ ಸೇರಿದವನಾಗಿದ್ದು, ಜೀವನೋಪಾಯಕ್ಕಾಗಿ ಕುಂಬಾರಗುಂಡಿ ಬಡಾವಣೆ ಪಾದಚಾರಿ ರಸ್ತೆ ಪಕ್ಕದಲ್ಲಿರುವ 4X5=20 ಚದರ ಅಡಿ ಜಾಗವನ್ನು ಟೆಲಿಪೋನ್ ಬೂತ್ ನಡೆಸಲು ಗುತ್ತಿಗೆ ಅವಧಿಯನ್ನು ನವೀಕರಿಸಲು ಕೋರಿ ಕೊಂಡಿರುತ್ತಾರೆ. ಹಾಗೂ ಸ್ಥಳೀಯರಿಂದ ಎಸ್.ಟಿ.ಡಿ ಬೂತ್ ನಡೆಸುವ ಬಗ್ಗೆ ನಾಗರೀಕರಿಗೆ

ತುಂಬಾ ಅನುಕೂಲವಾಗಿದ್ದು ಕುಂಬಾರಗುಂಡಿ ಬಡಾವಣೆಯ ನಿವಾಸಿಗಳಿಗೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲವೆಂದು ಅಲ್ಲಿನ ನಿವಾಸಿಗಳ ಸಹಿ ಪಡೆದು ಅರ್ಜಿಯ ಜೊತೆಯಲ್ಲಿ ನೀಡಿರುತ್ತಾರೆ.

ವಲಯಾಧಿಕಾರಿಗಳು ವರದಿಯಲ್ಲಿ ಕುಂಬಾರಗುಂಡಿ ಬಡಾವಣೆಯ ಪಾದಚಾರಿ ರಸ್ತೆಯ 1ನೇ ಕ್ರಾಸ್, ಶಿವಾಜಿ ಟಾಕೀಸ್ ಹಿಂಭಾಗದಲ್ಲಿ ದೂರವಾಣಿ ಬೂತ್ ನಡೆಸಲು 4X5=20 ಚದರ ಅಡಿಗಳ ಜಾಗವನ್ನು ಸಾರ್ವಜನಿಕರಿಗೆ ತೊಂದರೆ ಆಗದಂತೆ ಗುತ್ತಿಗೆಯ ಅವಧಿಯನ್ನು 5–ವರ್ಷಗಳ ಅವಧಿಗೆ ನವೀಕರಿಸಲು ಅಭಿಪ್ರಾಯಪಟ್ಟಿರುತ್ತಾರೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ: 21–09–2011ರ ಸರ್ಕಾರದ ಮಾರ್ಗಸೂಚಿಯಂತೆ ವಸತಿಯೇತರ ಚದರ ಅಡಿ ಒಂದಕ್ಕೆ ರೂ. 2800/– ಗಳಿದ್ದು, ಅರ್ಜಿದಾರರುಗಳು ಕೋರಿರುವ ಜಾಗವು 20 ಚ.ಅಡಿಗಳಾಗುತ್ತದೆ. ಇದರಂತೆ 2800*20=56,000/– ರೂ. ಗಳಾಗುತ್ತದೆ. ಶೇ:10% ರಷ್ಟು ವಾರ್ಷಿಕ ಗುತ್ತಿಗೆ ಹಣ 5,600/– ರೂ. ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 467/– ರೂ. ಗಳಾಗುತ್ತದೆ. ಈಗಾಗಲೇ 500/– ರೂ. ಗಳು ನಿಗಧಿಪಡಿಸಿ ಗುತ್ತಿಗೆ ನೀಡಿರುವುದರಿಂದ ಮಾಸಿಕ 500/– ರೂ. ಗಳನ್ನು ನಿಗಧಿಪಡಿಸಬಹುದಾಗಿರುತ್ತದೆ.

ಮೇಲ್ಕಂಡಂತೆ ಗುತ್ತಿಗೆಯ ಅವಧಿಯು ಮುಗಿದು ಹೋಗಿರುವ ಹಿನ್ನೇಲೆಯಲ್ಲಿ ಗುತ್ತಿಗೆಯ ಅವಧಿ ನವೀಕರಣ ಹಾಗೂ ಗುತ್ತಿಗೆಯ ಹಣ ನಿರ್ಧರಿಸುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, **ಆಯುಕ್ತರ ದಿನಾಂಕ 08–02–2012ರ ಟಿಪ್ಪಣಿಯನ್ನು ಮಾರ್ಪಡಿಸಿ ಪಾದಚಾರಿಗಳಿಗೆ ತೊಂದರೆ ಆಗದ ರೀತಿ ಗುತ್ತಿಗೆಯನ್ನು 3 ವರ್ಷಗಳ ಅವಧಿಗೆ ಮುಂದುವರೆಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06.03.2012ರ ನಿರ್ಣಯ.**

***<u>ನಿರ್ಣಯ :–</u>*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 06.03.2012ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.550/– (ಐದು ನೂರ ಐವತ್ತು) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ***<u>301. ವಿಷಯದ ಸಂಖ್ಯೆ :–ತೆಆಸ್ಥಾಸ/561/2011–12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/138/11–12, ದಿನಾಂಕ : 09–02–2012 ರಲ್ಲಿ ವಿವರಿಸಿರುವಂತೆ, ಬೆಂಗಳೂರು ಸಿಟಿ ಹುರಿಯೋಪೇಟೆಯಲ್ಲಿರುವ ಸ್ವಕುಳಸಾಳಿ ಸಂಘದ ಸಾಮಾಜಿಕ ಕಾರ್ಯಕ್ರಮಗಳನ್ನು ನಡೆಸಲು ಹಾಗೂ ಸಂಘಕ್ಕೆ ಲಗತ್ತಾಗಿರುವ ನಗರ ಪಾಲಿಕೆ 20X40 ಅಡಿಗಳ ಜಾಗವನ್ನು ಸಂಘಕ್ಕೆ ಗುತ್ತಿಗೆ ಆಧಾರದ ಮೇಲೆ ನೀಡುವಂತೆ ಮನವಿ ಸಲ್ಲಿಸಿರುವ ಮೇರೆಗೆ ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ಸದರೀ ಸ್ಥಳವು ಸಂಘದ ಕಾರ್ಯ ಚಟುವಟಿಕೆಗಳಿಗೆ ಅವಶ್ಯವಾಗಿರುವುದರಿಂದ ನೇಕಾರರ ಸಮುದಾಯದ ಹಿತದೃಷ್ಟಿಯಿಂದ ಸಂಘಕ್ಕೆ ನೀಡುವುದು ಸೂಕ್ತವೆಂಬ ಅಭಿಪ್ರಾಯದೊಂದಿಗೆ ಮಾನ್ಯ ಕರ್ನಾಟಕದ ವಿಶೇಷ ಪ್ರತಿನಿಧಿ ನವದೆಹಲಿ ರವರು ಹಾಗೂ (ಮಾಜಿ ಕೇಂದ್ರ ಸಚಿವರು) ಮಾನ್ಯ ಆಯುಕ್ತರಿಗೆ ಬರೆದಿರುವ ಪತ್ರದಲ್ಲಿ ಪುನರ್ ಪರಿಶೀಲಿಸಿ ಸದರಿ ಸಂಘಕ್ಕೆ ಗುತ್ತಿಗೆಗೆ ಮಂಜೂರು ಮಾಡಲು ಕೋರಿರುತ್ತಾರೆ.

ಸದರಿ ಜಾಗವು ನಗರ ಪಾಲಿಕೆಯ ಸ್ವತ್ತಾಗಿದ್ದು, ಈಗ ನಗರ ಪಾಲಿಕೆಯ ಸ್ವಾಧೀನದಲ್ಲಿರುತ್ತದೆ. ಈ ಜಾಗಕ್ಕೆ ಹೊಂದಿಕೊಂಡಂತೆ ಸ್ವಕುಳಸಾಳಿ ಸಂಘದ ಸ್ವತ್ತು ಇರುತ್ತದೆ. ಈ ಸ್ವತ್ತು ನಗರ ಪಾಲಿಕೆಯ ಚಟುವಟಿಕೆಗಳಿಗೆ ಅವಶ್ಯಕತೆ ಇರುವುದಿಲ್ಲವೆಂದು ವಲಯಾಧಿಕಾರಿಗಳು ವರದಿಯನ್ನು ನೀಡಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 20X40=800 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿ:21–09–2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.3300/– ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 3300X800=26,40000/–ರೂ. ಒಟ್ಟು ಮೊತ್ತಗಳಾಗುತ್ತದೆ. ಶೇ:10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.2,64,000/– ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.22000/– ಗಳಾಗುತ್ತದೆ.

ದಿನಾಂಕ:01–03–2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು, ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿ ಸ್ವಕುಳಸಾಳಿ ಸಂಘದ ಸಾಮಾಜಿಕ ಕಾರ್ಯಕ್ರಮಗಳನ್ನು ನಡೆಸಲು ಸಂಘಕ್ಕೆ ನೀಡಲಿರುವ ಸ್ಥಳದ ಗುತ್ತಿಗೆ ನೀಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, **ಆಯುಕ್ತರ ದಿನಾಂಕ: 09–02–2012ರ ಟಿಪ್ಪಣಿಯನ್ನು ಒಪ್ಪಿರುವ** ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06–03–2012ರ ನಿರ್ಣಯ.

***ನಿರ್ಣಯ :–*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 06.03.2012ರ ನಿರ್ಣಯವನ್ನು ಒಪ್ಪುತ್ತಾ, ಸದರಿ ಸಂಘದವರು ಯಾವುದೇ ಆದಾಯವಿಲ್ಲದೆ ತಮ್ಮ ಜನಾಂಗದ ದಾರ್ಮಿಕ ಕಾರ್ಯಕ್ರಮಗಳಿಗಾಗಿ ಉಪಯೋಗಿಸುತ್ತಿರುವುದಾಗಿ ತಿಳಿದು ಬಂದಿದ್ದು, ವಾರ್ಷಿಕ ರೂ.24,000/– (ಇಪ್ಪತ್ನಾಲ್ಕು ಸಾವಿರ) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ***31]. ವಿಷಯದ ಸಂಖ್ಯೆ :–ತೆಆಸ್ಥಾಸ/562/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/89/2000–01, ದಿನಾಂಕ : 28–02–2012 ರಲ್ಲಿ ವಿವರಿಸಿರುವಂತೆ ವಾರ್ಡ್ ಸಂಖ್ಯೆ:93, ವಸಂತನಗರ ಮಿಲ್ಲರ್ ಕೆರೆ ಅಂಗಳದಲ್ಲಿ 100X50 ಅಡಿಗಳ ನಿವೇಶನದಲ್ಲಿರುವ 80X40 ಅಡಿಗಳ ಗೋಡೌನ್ ಕಟ್ಟಡವನ್ನು ಕರ್ನಾಟಕ ಚರ್ಮ ಕೈಗಾರಿಕ ಅಭಿವೃದ್ಧಿ ನಿಗಮ ನಿಯಮಿತ ರವರಿಗೆ ಮಾಸಿಕ ಬಾಡಿಗೆ ರೂ.925/– ನಂತೆ ದಿನಾಂಕ:09–06–1980 ರಿಂದ 11 ತಿಂಗಳ ಅವಧಿಗೆ ಗುತ್ತಿಗೆ ನೀಡಲಾಗಿರುತ್ತದೆ. ತದನಂತರ ದಿನಾಂಕ:01–05–1981 ರಿಂದ 31–07–1999 ರವರೆಗೆ 219 ತಿಂಗಳ ಅವಧಿಗೆ ಅಂದಿನ ಮಾರುಕಟ್ಟೆ ದರದಂತೆ ಮಾಸಿಕ ಗುತ್ತಿಗೆ ರೂ.99,454.50/–ಗಳು ನಿಗದಿಪಡಿಸಿ ದಿನಾಂಕ:14–07–2003 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ನಿಗದಿಪಡಿಸಿರುವ ಗುತ್ತಿಗೆ ಮೊತ್ತವನ್ನು ಪಾವತಿಸಿದೇ ಸಂಸ್ಥೆಯು ನಷ್ಟದಲ್ಲಿರುವುದಾಗಿ ನಿಗದಿಪಡಿಸಿರುವ ಮೊತ್ತವನ್ನು ಪಾವತಿಸಲು ಶಕ್ತನಾಗಿಲ್ಲವೆಂದು ಗುತ್ತಿಗೆ ಮೊತ್ತವನ್ನು ಈ ತಹಲ್‌ವರೆವಿಗೂ ಪಾವತಿಸಿರುವುದಿಲ್ಲ.

ಈ ಮಧ್ಯ ಅಧ್ಯಕ್ಷ ಡಾ॥ ಜಗಜೀವನ್ ರಾಮ್ ಚರ್ಮ ಕೈಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ ರವರು ದಿನಾಂಕ:24–01–2012 ರಂದು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿ 99 ವರ್ಷಗಳ ಧೀರ್ಘಾವದಿ ಗುತ್ತಿಗೆ ಅಥವಾ ಮಾರುಕಟ್ಟೆ ಬೆಲೆಗೆ ಕ್ರಯಕ್ಕೆ ನೀಡುವಂತೆ ಕೋರಿದ್ದು, ದಿ:25–01–2012 ರಂದು ಆಸ್ತಿ ಶಾಖೆಯಿಂದ ಅಂತರಿಕ ಕಛೇರಿ ಟಿಪ್ಪಣಿ ನೀಡಲಾಗಿದ್ದು. ಸಹ ಕಂದಾಯ ಅಧಿಕಾರಿ(ವಸಂತನಗರ) ರವರು ವರದಿ ಮಾಡಿರುವಂತೆ 100X50 ಅಡಿಗಳ ನಿವೇಶನದಲ್ಲಿ 80X40 ಅಡಿ ಅಳತೆ ಗೋಡೌನ್ ಕಟ್ಟಡ ಹಾಗೂ ಈ ನಿವೇಶನಕ್ಕೆ ಹೊಂದಿಕೊಂಡಂತೆ ಹೆಚ್ಚುವರಿಯಾಗಿ 2 ಭದ್ರತಾ ಕೊಠಡಿ ಶೆಡ್‌ಗಳು ಇದ್ದು, ವಿಸ್ತೀರ್ಣ 25X30 ಚದರ ಅಡಿಗಳಾಗಿದ್ದು, ಒಟ್ಟಾರೆ 5750 ಚದರ ಅಡಿ ಆಗಿರುತ್ತದೆಂದು ಸದರಿ ಜಾಗವನ್ನು ಗುತ್ತಿಗೆ ಅಥವಾ ಕ್ರಯಕ್ಕೆ ಮಾರುಕಟ್ಟೆ ಬೆಲೆಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನ ಕೋರಿ ಆಸ್ತಿ ಶಾಖೆಗೆ ಕಡತ ಮಂಡಿಸಿರುತ್ತಾರೆ.

ಪ್ರಸಕ್ತ ಮಾರುಕಟ್ಟೆ ದರ ಚದರ ಅಡಿ 1ಕ್ಕೆ ರೂ.4,500/– ವಾಣಿಜ್ಯಕ್ಕೆ ಶೇ.40% ರಷ್ಟು ಸೇರಿಸಿದಾಗ ಚದರ ಅಡಿ 1ಕ್ಕೆ ರೂ. 6,300/–ಗಳು 5750 ಚದರ ಅಡಿಗಳಿಗೆ (5750X6300=3,62,25,000/–) 3,62,25,000/– ರೂಗಳಾಗುತ್ತದೆ. ಸ್ವತ್ತಿನ ಮೌಲ್ಯದ ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ ಗುತ್ತಿಗೆ ಮೊತ್ತ ರೂ. 36,22,500/–ರೂಗಳು ಮಾಸಿಕ ರೂ. 3,01,875/–ಗಳಾಗುತ್ತದೆ.

ಇದು ರಾಜ್ಯ ಸರ್ಕಾರದ ಸಂಸ್ಥೆಯಾಗಿದ್ದು, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ಜನಾಂಗದವರ ಏಳಿಗೆಗಾಗಿ ನಡೆಸಲಾಗುತ್ತಿರುವ ಸಂಸ್ಥೆಯಾಗಿದ್ದು. ಇದಕ್ಕೆ ಮಾಸಿಕ ಗುತ್ತಿಗೆ ರೂ.99,454.50/– ಪೈಸೆ ನಿಗದಿಪಡಿಸಿರುವುದು ಅವೈಜ್ಞಾನಿಕವಾಗಿರುತ್ತದೆ. ಇಂತಹ ಸಂಸ್ಥೆಗಳಿಗೆ ರಿಯಾಯಿತಿ ದರದಲ್ಲಿ ಗುತ್ತಿಗೆ ನಿಗದಿಪಡಿಸುವ ಅವಕಾಶ ಇರುವ ಹಿನ್ನೆಲೆಯಲ್ಲಿ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಕರಾರು ಪತ್ರ ನೊಂದಾಯಿಸುವ ಹಿಂದಿನ ದಿನಾಂಕದವರೆಗೆ ಮತ್ತು ಕರಾರು ಪತ್ರ ನೊಂದಾಯಿಸುವ ದಿನಾಂಕದಿಂದ ಮುಂದಿನ 30 ವರ್ಷಗಳ ಅವಧಿಗೆ ಪ್ರತ್ಯೇಕ ಪ್ರತ್ಯೇಕವಾಗಿ ದರ ನಿಗದಿಪಡಿಸಿ ಗುತ್ತಿಗೆ

ನವೀಕರಿಸಲು ಸ್ಥಾಯಿ ಸಮಿತಿಗಳು ಪಾಲಿಕೆ ಸಭೆ ಮುಖಾಂತರ ಸರ್ಕಾರಕ್ಕೆ ಪ್ರಸ್ತಾಪಿಸಬಹುದಾಗಿದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ಮಾನ್ಯ ಆಯುಕ್ತರ ದಿನಾಂಕ: 28–02–2012ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06–03–2012ರ ನಿರ್ಣಯ.

**–ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ–**

## *32]. ವಿಷಯದ ಸಂಖ್ಯೆ :–ತೆಆಸ್ಥಾಸ/563/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 23–02–2012 ರಲ್ಲಿ ವಿವರಿಸಿರುವಂತೆ, ಶ್ರೀ ಜಯಚಾಮರಾಜೇಂದ್ರ ಒಡೆಯರ್ ರಸ್ತೆಯಲ್ಲಿ ಶ್ರೀ. ಜಯಚಾಮರಾಜೇಂದ್ರ ಒಡೆಯರ್ ರವರ ಪ್ರತಿಮೆಯನ್ನು ಮತ್ತು ಶ್ರೀ ಕೆಂಗಲ್‌ಹನುಮಂತಯ್ಯ ರಸ್ತೆ (ಡಬಲ್ ರೋಡ್) ಯಲ್ಲಿ ಶ್ರೀ ಕೆಂಗಲ್‌ಹುನುಮಂತಯ್ಯರವರ ಪ್ರತಿಮೆಯನ್ನು ಸ್ಥಾಪಿಸುವ ಕಾಮಗಾರಿಗೆ ರೂ. 10.00 ಲಕ್ಷಗಳಿಗೆ ಪಿ–0190 ಲೆಕ್ಕ ಶೀರ್ಷಿಕೆಯಡಿಯಲ್ಲಿ ಸದರಿ ಕಾಮಗಾರಿಗೆ 118–000067 ಜಾಬ್ ಸಂಖ್ಯೆ ನೀಡಲಾಗಿರುತ್ತದೆ. ವಾರ್ಡ್ ಸಂಖ್ಯೆ: 118ರ ನಗರ ಸಭಾ ಸದಸ್ಯರಾದ ಶ್ರೀಮತಿ. ಎ. ಅವ್ವಯ್, ರವರು ಶ್ರೀ ಜಯಚಾಮರಾಜೇಂದ್ರ ಒಡೆಯರ್ ಮತ್ತು ಶ್ರೀ. ಕೆಂಗಲ್‌ಹನುಮಂತಯ್ಯ ರವರ ಪ್ರತಿಮೆಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸ್ಥಾಪಿಸಲು ಸೂಚಿಸಿ, ಪ್ರಸ್ತಾವನೆಗಳಿಗೆ ಅಂಗೀಕಾರ ಪಡೆಯಲು ಪಾಲಿಕೆ ಅನುಮತಿಯನ್ನು ಪಡೆಯಲು ಸೂಚಿಸಿರುತ್ತಾರೆ.

| ಪ್ರತಿಮೆ | ಸ್ಥಾಪಿಸಬೇಕಾಗಿರುವ ರಸ್ತೆ ಹೆಸರು | ಗುರುತಿಸಲಾಗಿರುವ ಸ್ಥಳದ ವಿವರ |
|---|---|---|
| ಶ್ರೀ.ಜಯಚಾಮರಾಜೇಂದ್ರ ಒಡೆಯರ್ | ಜಯಚಾಮರಾಜೇಂದ್ರ ಒಡೆಯರ್ ರಸ್ತೆ | 1. ಟೌನ್ ಹಾಲ್ ಮುಂಭಾಗದ ಪಾರ್ಕ್ ಅಥವಾ<br>2. ಟೌನ್ ಹಾಲ್ ಉತ್ತರ ಭಾಗದ ಪಾರ್ಕ್ |
| ಶ್ರೀ. ಕೆಂಗಲ್‌ಹನುಮಂತಯ್ಯ | ಶ್ರೀ.ಕೆಂಗಲ್‌ಹನುಮಂತಯ್ಯ ರಸ್ತೆ | ಕೆ.ಹೆಚ್. ರಸ್ತೆ ಮತ್ತು ಮಿಷನ್ ರಸ್ತೆಗಳು ಕೂಡುವ ಸ್ಥಳದಲ್ಲಿ ಪೆಟ್ರೋಲ್ ಬಂಕ್ ಮುಂಭಾಗದಲ್ಲಿ ಫ್ಲೈಓವರ್ ಕೆಳಭಾಗದಲ್ಲಿ. |

ಸೂಚಿತ ಸ್ಥಳಗಳಲ್ಲಿ ಪ್ರತಿಮೆಗಳನ್ನು ಸ್ಥಾಪಿಸಲು ಕೈಗೊಳ್ಳಬೇಕಾಗಿರುವ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ ಮೇರೆಗೆ, ಮಾನ್ಯ ಆಯುಕ್ತರ ದಿನಾಂಕ: 23–02–2012ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06.03.2012ರ ನಿರ್ಣಯ.

**–ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ–**

## *33]. ವಿಷಯದ ಸಂಖ್ಯೆ :–ತೆಆಸ್ಥಾಸ/564/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/129/11–12, ದಿನಾಂಕ : 03–01–2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:119 ಮೇದರ್ ಪೇಟೆ, ಕುಂಬಾರಪೇಟೆ ಅಡ್ಡರಸ್ತೆಯಲ್ಲಿನ 374.5 ಚದರ ಅಡಿ ವಿಸ್ತೀರ್ಣದ ಪಾಲಿಕೆ ಜಮೀನನ್ನು ಉದ್ಯಾನವನ ನಿರ್ಮಿಸಲು ದಿನಾಂಕ: 03–01–1957 ರಿಂದ 20–ವರ್ಷಗಳ ಅವಧಿಗೆ ವಾರ್ಷಿಕ ಗುತ್ತಿಗೆ ಹಣ ರೂ.2/– ರಂತೆ ಶ್ರೀ ದರ್ಬಾರ್ ಸಾಹೇಬ್ ಸಂಘ ರವರಿಗೆ ಗುತ್ತಿಗೆ ನೀಡಿದ್ದು, ಸದರಿ ಗುತ್ತಿಗೆ ಅವಧಿ 02–01–1977ಕ್ಕೆ ಮುಗಿದಿರುತ್ತದೆ. ಗುತ್ತಿಗೆದಾರರು ಗುತ್ತಿಗೆಯನ್ನು ನವೀಕರಿಸಿಕೊಂಡಿರುವುದಿಲ್ಲ. ಗುತ್ತಿಗೆದಾರರು ಹಿಂದಿನ ದರದಂತೆ, 2006–07ರ ವರೆಗೆ ಗುತ್ತಿಗೆ ಹಣ ಪಾವತಿಸಿರುತ್ತಾರೆ.

ಸದರಿ ಸಂಘದವರು ಮನವಿ ಸಲ್ಲಿಸಿ, ಈ ಸ್ಥಳದಲ್ಲಿ ಗುರುನಾನಕ್ ಭವನ ಸ್ಥಾಪಿಸಿದ್ದು, ಪ್ರತಿನಿತ್ಯ ವಿಧಿವಿಧಾನಗಳೊಂದಿಗೆ ಪೂಜಾ ಕಾರ್ಯಗಳನ್ನು ನಡೆಸುತ್ತಿದ್ದು, ಯಾವುದೇ ರೀತಿಯ ಸ್ವಾರ್ಥ ಹಾಗೂ ಲಾಭಕ್ಕಾಗಿ ಉಪಯೋಗಿಸುತ್ತಿಲ್ಲವೆಂದು, ನೂರಾರು ಭಕ್ತಾಧಿಗಳ ಧಾರ್ಮಿಕ ಭಾವನೆಗಳನ್ನು ಗಣನೆಗೆ ತೆಗೆದುಕೊಂಡು ಗುತ್ತಿಗೆ ನವೀಕರಿಸಲು ಕೋರಿರುತ್ತಾರೆ.

ವಲಯಾಧಿಕಾರಿಗಳು ಸ್ಥಳ ಪರಿಶೀಲಿಸಿ, ವರದಿಯಲ್ಲಿ ಈ ಸ್ಥಳವನ್ನು ಉದ್ಯಾನವನಕ್ಕಾಗಿ ಸಂಘದವರು ಗುತ್ತಿಗೆಗೆ ಪಡೆದಿದ್ದು, ಸದರಿ ಸ್ಥಳದಲ್ಲಿ ನೆಲ ಅಂತಸ್ತು, 1ನೇ ಅಂತಸ್ತು ಮತ್ತು 2ನೇ ಅಂತಸ್ತಿನ ಕಟ್ಟಡ ನಿರ್ಮಿಸಿ, ನೆಲ ಅಂತಸ್ತನ್ನು ವಾಣಿಜ್ಯ ಉದ್ದೇಶಕ್ಕೆ ಹಾಗೂ 1ನೇ ಹಾಗೂ 2ನೇ ಅಂತಸ್ತನ್ನು ಧಾರ್ಮಿಕ ಕಾರ್ಯಗಳಿಗೆ ಉಪಯೋಗಿಸುತ್ತಿದ್ದು, ಅರ್ಜಿದಾರರು ಕೋರಿರುವಂತೆ ಗುತ್ತಿಗೆ ನವೀಕರಿಸಲು ಪ್ರಸ್ತಾಪಿಸಿರುತ್ತಾರೆ. ಅರ್ಜಿದಾರರು ಪತ್ರ ಬರೆದು ಈಗ ನೆಲ ಅಂತಸ್ತನ್ನು ಭಜನಾ ಮಂದಿರವಾಗಿ ಮಾರ್ಪಡಿಸಿರುವುದಾಗಿ ತಿಳಿಸಿರುತ್ತಾರೆ. ಆದುದರಿಂದ, ಸ್ವತ್ತನ್ನು ವಾಪಸ್ಸು ಪಡೆಯದೆ ಗುತ್ತಿಗೆಯನ್ನು ಮುಂದಿನ 30 ವರ್ಷಗಳಿಗೆ ನವೀಕರಿಸುವುದು ಸೂಕ್ತವೆಂದು ಅಭಿಪ್ರಾಯಿಸಲಾಗಿದ್ದು, ಈ ಬಗ್ಗೆ ಸೂಕ್ತ ತಿರ್ಮಾನಕ್ಕಾಗಿ ದಿ; 02–05–2011ರಂದು ನಗರ

ಯೋಜನೆ ಅಭಿವೃದ್ದಿ ಸ್ಥಾಯಿ ಸಮಿತಿಗೆ ಟಿಪ್ಪಣಿ ಮಂಡಿಸಲಾಗಿದ್ದು, ಸದರಿ ಸಮಿತಿಯು ಗುತ್ತಿಗೆದಾರರು ಗುತ್ತಿಗೆ ಷರತ್ತು ಉಲ್ಲಂಘನೆ ಮಾಡಿರುವುದರಿಂದ ಗುತ್ತಿಗೆ ನವೀಕರಿಸುವ ಪ್ರಸ್ತಾವನೆ ತಿರಸ್ಕರಿಸಿರುತ್ತದೆ.

ನಂತರ ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ದಿ ಸ್ಥಾಯಿ ಸಮಿತಿರವರು ಪತ್ರಬರೆದು ಈ ಅಲ್ಪಸಂಖ್ಯಾತ ಸಮುದಾಯದವರು ಧಾರ್ಮಿಕ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿರುವುದರಿಂದ ಇವರಿಗೆ ಗುತ್ತಿಗೆ ಅವಧಿ ಮುಂದಿವರಿಸಲು ಸ್ಥಳಿಯ ವಿಧಾನ ಸಭಾ ಸದಸ್ಯರು (ಚಿಕ್ಕಪೇಟೆ) ರವರು ಶಿಫಾರಸ್ಸು ಮಾಡಿರುವುದರಿಂದ ಮತ್ತೊಮ್ಮೆ ಮುಂದೆ ಮರು ಮಂಡಿಸಲು ಕೋರಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾಯ್ದೆನ್ವಯ–1976 ಕಲಂ–176ರ (6) ಹಾಗೂ (ಬಿ)IIರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಕ್ಕೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ ಪಿ.ಆರ್/115/01–02, ದಿ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ. ಶೇ:100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಅಭಿಪ್ರಾಯಿಸಲಾಗಿದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:21–09–2011ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ರೂ.2,900/–ಗಳಿದ್ದು, ಅರ್ಜಿದಾರರುಗಳು ಕೋರಿರುವ 374.5 ಚದರ.ಅಡಿಗಳಾಗಿದ್ದು, ಇದರಂತೆ 2900x374.5= 10,86,050/– ರೂ.ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ 1,08,605/– ರೂ.ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 9,060/– ರೂ.ಗಳಾಗುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಗುತ್ತಿಗೆಯನ್ನು ಮುಂದಿನ 30 ವರ್ಷಗಳಿಗೆ ನವೀಕರಿಸುವ ಬಗ್ಗೆ ಹಾಗೂ ದಿನಾಂಕ:03–01–1977 ರಿಂದ ನವೀಕರಿಸುವ ದಿನಾಂಕದವರೆಗೆ ಗುತ್ತಿಗೆ ಹಣ ನಿಗದಿಪಡಿಸುವ ಬಗ್ಗೆ ಮತ್ತು ನವೀಕರಿಸುವ ದಿನಾಂಕದಿಂದ ಗುತ್ತಿಗೆ ಹಣ ನಿಗಧಿಪಡಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, **ಮಾನ್ಯ ಆಯುಕ್ತರ ಟಿಪ್ಪಣಿ ದಿನಾಂಕ: 03–01–2012ರ ಟಿಪ್ಪಣಿಯಂತೆ ಒಪ್ಪಿದೆ. ಗುತ್ತಿಗೆ ಹಣ ನಿಗದಿಪಡಿಸಲು ಟಿ & ಎಫ್ ಸಮಿತಿಗೆ ಕಡತ ಸಲ್ಲಿಸುವಂತೆ ತೀರ್ಮಾನಿಸಿರುವ** ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06–03–2012ರ ನಿರ್ಣಯ.

***ನಿರ್ಣಯ :–*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 06.03.2012ರ ನಿರ್ಣಯವನ್ನು ಮಾರ್ಪಡಿಸುತ್ತಾ, ದಿನಾಂಕ : 03–07–1977 ರಿಂದ ನವೀಕರಿಸುವ ದಿನಾಂಕದವರೆಗೆ ಹಳೆಯ ದರವನ್ನು ಮುಂದುವರೆಸಿ ನವೀಕರಣದ ದಿನಾಂಕ ದಿಂದ ಮಾಸಿಕ ರೂ.5,000/– (ಐದು ಸಾವಿರ) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ***34]. ವಿಷಯದ ಸಂಖ್ಯೆ :–ತೆಆಸ್ಥಾಸ/565/2011–12***

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ ಎ3(1)ಪಿಆರ್/190/11–12, ದಿನಾಂಕ : 27–02–2012 ರಲ್ಲಿ ವಿವರಿಸಿರುವಂತೆ, ಶ್ರೀ.ನೆ.ಲ ನರೇಂದ್ರಬಾಬು, ವಿಧಾನಸಭಾ ಸದಸ್ಯರು ಮತ್ತು ಶ್ರೀಮತಿ.ಪದ್ಮಾವತಿ ಶ್ರೀನಿವಾಸ್, ನಗರ ಪಾಲಿಕೆ ಸದಸ್ಯರು ರವರುಗಳು ಮನವಿ ಸಲ್ಲಿಸಿ ವಾರ್ಡ್ ನಂ.74 ರಲ್ಲಿ ಇರುವ **"ಶಂಕರ್‌ನಾಗ್ ಬಸ್ ನಿಲ್ದಾಣ"** ವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಸುಸಜ್ಜಿತವಾಗಿ ನಿರ್ಮಿಸಲು ಪ್ರಸ್ತುತ ಜಾಗವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ (ಬಿಎಂಟಿಸಿ) ಹಸ್ತಾಂತರಿಸುವಂತೆ ಕೋರಿರುತ್ತಾರೆ.

ಸದರಿ ಜಾಗವು ಬೆಂಗಳೂರು ಉತ್ತರ ತಾಲ್ಲೂಕು ಯಶಂವತಪುರ ಹೋಬಳಿ ಸಾಣೆಗುರುವನಹಳ್ಳಿ ಗ್ರಾಮದ ಸರ್ವೆ ನಂ.30ರಲ್ಲಿನ ಸರ್ಕಾರಿ ಗೋಮಾಳ 09 ಎಕರೆ 28 ಗುಂಟೆ ಪ್ರದೇಶದ ಜಮೀನನ್ನು ದಿ:23–06–2010ರ ಬೆಂಗಳೂರು ಉತ್ತರ ತಾಲ್ಲೂಕು ತಹಶೀಲ್ದಾರ್ ಪತ್ರದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರವಾಗಿರುತ್ತದೆ. ಇದರಲ್ಲಿ ಹಾಲಿ ಬಸ್

ನಿಲ್ದಾಣಕ್ಕಾಗಿ ಉಪಯೋಗಿಸುತ್ತಿರುವ (19.51 ಗುಂಟೆ) ಆದರೆ 1974.33 ಚದರ ಮೀಟರ್ (21251..51) ಚದರ ಅಡಿಗಳ ಜಾಗವನ್ನು ಬಸ್ ನಿಲ್ದಾಣದ ಅಭಿವೃದ್ಧಿಗಾಗಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ (BMTC) ಹಸ್ತಾಂತರಿಸುವ ಬಗ್ಗೆ ಅಪರ ಆಯುಕ್ತರು (ಪಶ್ಚಿಮ) ರವರು ಪ್ರಸ್ತುತ ಜಾಗವನ್ನು ಅಳತೆ ಮಾಡಿ ನಕ್ಷೆ ತಯಾರಿಸಿದ್ದು, ಸದರಿ ಜಾಗವನ್ನು ಬಸ್ ನಿಲ್ದಾಣದ ನಿರ್ಮಾಣಕ್ಕಾಗಿ ಮಹಾನಗರ ಸಾರಿಗೆ ಸಂಸ್ಥೆಗೆ (ಬಿಎಂಟಿಸಿ) ಹಸ್ತಾಂತರಿಸಬಹುದೆಂದು ತಮ್ಮ ವರದಿ ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 21251.51 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿ:21–09–2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.1800/– ಗಳಾಗಿರುತ್ತದೆ. ವಾಣಿಜ್ಯ ಉದ್ದೇಶಕ್ಕಾಗಿ ಶೇ 40% ರಷ್ಟು ಹೆಚ್ಚಿಸಿದಾಗ 2520/– ಗಳಾಗುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 2520X21251.51 =53,55,38,52/– ರೂ. ಒಟ್ಟು ಮೊತ್ತಗಳಾಗುತ್ತದೆ.

<u>ಸರ್ಕಾರದ ಆದೇಶ ಸಂ:ನಅಇ 129 ಟಿಎಂಡಿ 2002, ಬೆಂಗಳೂರು, ದಿನಾಂಕ:02–06–2003 (ಇ) ರಲ್ಲಿ</u>

iii) ಈ ಕೆಳಕಂಡ ಸಂಸ್ಥೆಗಳಿಗೆ ಜಮೀನು ಮಂಜೂರಾತಿಯ ಮಾರುಕಟ್ಟೆ ದರದಲ್ಲಿ ಶೇ 50% ರಿಯಾಯಿತಿ ಇರುತ್ತದೆ.

ಇ) ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ಮಂಡಳಿಗಳಿಗೆ/ಪಾಲಿಕೆಗಳಿಗೆ ಕಛೇರಿಗಳ/ಮಾರುಕಟ್ಟೆಗಳ/ಬಸ್ ನಿಲ್ದಾಣಗಳ/ವಿದ್ಯುತ್ ಮಂಡಳಿಗಳ, ಮತ್ತಿತರ ಸಾರ್ವಜನಿಕ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ ಎಂಬುದಾಗಿರುತ್ತದೆ.

ಮೇಲೆ ತಿಳಿಸಿರುವ ಸ್ಥಳವನ್ನು ಶಂಕರ್‌ನಾಗ್ ಬಸ್ ನಿಲ್ದಾಣವನ್ನು ಸುಸಜ್ಜಿತವಾದ ಬಸ್ ನಿಲ್ದಾಣವನ್ನಾಗಿ ಮಾಡಲು ಬಿಎಂಟಿಸಿ ರವರಿಗೆ ಹಸ್ತಾಂತರಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ವಿಶೇಷ ಆಯುಕ್ತರ ಟಿಪ್ಪಣಿ ದಿನಾಂಕ: 27–02–2012 ನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06–03–2012ರ ನಿರ್ಣಯ.

***<u>ನಿರ್ಣಯ :–</u>*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 06.03.2012ರ ನಿರ್ಣಯವನ್ನು ಒಪ್ಪಿದೆ.**

## ***<u>351. ವಿಷಯದ ಸಂಖ್ಯೆ :–ತೆಆಸ್ಥಾಸ/566/2011–12</u>***

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್‌ಆರ್(4)211/2011–12, ದಿನಾಂಕ : 30.03.2012 ರಲ್ಲಿ ವಿವರಿಸಿರುವಂತೆ, ಶ್ರೀ ಎಂ. ಉದಯಶಂಕರ್, ಮಾನ್ಯ ವಿರೋಧ ಪಕ್ಷದ ನಾಯಕರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ಶ್ರೀಮತಿ ನಳಿನಿ ಮಹಾದೇವಸ್ವಾಮಿ, ಅಧ್ಯಕ್ಷರು, ಮಹಿಳಾ ಜಾಗೃತ ಸೇವಾ ಪರಿಷತ್ (ರಿ), ನಂ. 1/3, 1ನೇ ಕ್ರಾಸ್, 5ನೇ ಮುಖ್ಯರಸ್ತೆ, ಸಂಪಂಗಿ ರಾಮನಗರ, ಬೆಂಗಳೂರು – 560 027 ರವರು ನೀಡಿರುವ ಮನವಿ ಪತ್ರವನ್ನು ಲಗತ್ತಿಸುತ್ತಾ, ಸದರಿಯವರ ಮನವಿ ಪತ್ರದಲ್ಲಿ ಸಂಘದ ವತಿಯಿಂದ ದಿನಾಂಕ 12.03.2012 ರಂದು ನಯನ ರಂಗಮಂದಿರ, ಬೆಂಗಳೂರು ಇಲ್ಲಿ ವಿಶ್ವ ಮಹಿಳಾ ದಿನಾಚರಣೆ ಹಾಗೂ ಮಹಿಳಾ ರಾಜ್ಯ ಸಮ್ಮೇಳನ ಸಮಾರಂಭ/ಕಾರ್ಯಕ್ರಮಕ್ಕೆ ನಡೆಸಲು ಏರ್ಪಡಿಸಿದ್ದು, ಆ ಸಮಾರಂಭ ಸಮಾಜಕ್ಕೆ ಸೇವೆ ಸಲ್ಲಿಸಿರುವ ವ್ಯಕ್ತಿಗಳನ್ನು ಅಭಿನಂದಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸದರಿ ಕಾರ್ಯಕ್ರಮದಲ್ಲಿ ಸಾವಿರಾರು ಮಹಿಳೆಯರು ಭಾಗವಹಿಸುತ್ತಿದ್ದು, ಈ ಸಮಾರಂಭಕ್ಕೆ ಹೆಚ್ಚಿನ ವೆಚ್ಚವಾಗುತ್ತಿರುವುದರಿಂದ ಪೂಜ್ಯ ಮಹಾಪೌರರ ನಿಧಿಯಿಂದ ರೂ. 25,000/– ಸಹಾಯಧನ ನೀಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ಅನುಬಂಧ–2 ರಲ್ಲಿ 185 ವಿವಿಧ ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಲಾಗಿರುತ್ತದೆ. ಉಳಿಕೆ ಮೊತ್ತ ರೂ. 116.50 ಲಕ್ಷಗಳು.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಪ್ರಸ್ತಾವಿತ ಸಂಸ್ಥೆಯ ಮನವಿಯ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***<u>ನಿರ್ಣಯ :–</u>*** ***<u>ದಿನಾಂಕ : 30–03–2012ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.25,000/– (ಇಪ್ಪತ್ತೈದು ಸಾವಿರ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.</u>***

## ***<u>36]. ವಿಷಯದ ಸಂಖ್ಯೆ :–ತೆಆಸ್ಥಾಸ/567/2011–12</u>***

ಅಪರ ಆಯುಕ್ತರು (ಯೊಜನೆ) ರವರ ಟಿಪ್ಪಣಿ ದಿನಾಂಕ : 30–03–2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ – 129ರ ಜ್ಞಾನಭಾರತಿ ವ್ಯಾಪ್ತಿಯಲ್ಲಿನ ಅನ್ನಪೂರ್ಣೇಶ್ವರಿ ನಗರ ಡಿ–ಗ್ರೂಪ್ ಬಡಾವಣೆ, ರಾಜೀವ್‌ಗಾಂಧಿ ಗೃಹ ನಿರ್ಮಾಣ ಸಂಘ ಬಡಾವಣೆಗಳಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿ ಕೈಗೊಳ್ಳಲು ಸ್ಥಳಿಯ ಪಾಲಿಕೆ ಸದಸ್ಯರು ಕೋರಿರುವ ಮೇರೆಗೆ ರಸ್ತೆ ಕತ್ತರಿಸಿರುವ ಭಾಗಗಳನ್ನು ಸೇರಿಸಿಕೊಂಡು ಹೆಚ್ಚಿನ ವಾಹನ ಸಾಂದ್ರತೆಗೆ ಅನುಗುಣವಾಗಿ ಡಾಂಬರೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಒಟ್ಟು ರೂ.303.76 ಲಕ್ಷಗಳ ಮೊತ್ತದಲ್ಲಿ (16) ಕಾಮಗಾರಿಗಳ ಅಂದಾಜು ತಯಾರಿಸಿದ್ದು 2011–12ನೇ ಸಾಲಿನ ಅನುದಾನದಲ್ಲಿ ಜಾಬ್ ಕೋಡ್ ನೀಡಲು ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ

***<u>ನಿರ್ಣಯ :–</u>*** ***<u>ದಿನಾಂಕ : 30–03–2012ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪುತ್ತಾ, 2011–12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–2415ರ ಅಡಿಯಲ್ಲಿ ಮೀಸಲಿರಿಸಿರುವ ಅನುದಾನದಲ್ಲಿ ಜಾಬ್ ಕೋಡ್ ನೀಡುವುದೆಂದು ಸಮಿತಿಯು ತೀರ್ಮಾನಿಸಿತು.</u>***

## ***<u>37]. ವಿಷಯದ ಸಂಖ್ಯೆ :–ತೆಆಸ್ಥಾಸ/01/2012–13</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಅಆ(ಕ)ಪಿಎಸ್‌ಆರ್(4)08/11–12, ದಿನಾಂಕ : 30–03–2012 ರಲ್ಲಿ ವಿವರಿಸಿರುವಂತೆ, ಶ್ರೀ.ಹೆಚ್.ರಾಮು, ಕಾರ್ಯನಿರ್ವಾಹಕ ನಿರ್ದೇಶಕರು, ನೆಮ್ಮದಿ (ರಿ) ಸ್ವಯಂ ಸೇವಾ ಸಂಸ್ಥೆ, ನಂ. 36/ಎ, 12ನೇ ಮುಖ್ಯರಸ್ತೆ, 8ನೇ ಕ್ರಾಸ್, ಗೋಕುಲ 1ನೇ ಹಂತ, 1ನೇ ಘಟ್ಟ, ಮತ್ತಿಕೆರೆ, ಬೆಂಗಳೂರು – 560 054 ರವರು ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ನೆಲಮಂಗಲ ತಾಲ್ಲೂಕಿನಲ್ಲಿರುವ ನೆಮ್ಮದಿ (ರಿ) ಸ್ವಯಂ ಸೇವಾ ಸಂಸ್ಥೆಯು ಕಳೆದ ಐದು ವರ್ಷಗಳಿಂದ ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ರಿಜಿಸ್ಟರ್ಡ್ ಕಛೇರಿಯು ಯಶವಂತಪುರದಲ್ಲಿರುತ್ತದೆಂದು, ಲಗ್ಗೆರೆ (ಬೆಂಗಳೂರು) ಹಾಗೂ ನೆಲಮಂಗಲ ತಾಲ್ಲೂಕಿನಲ್ಲಿ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದು, ಈಗಾಗಲೇ ಕಳೆದ ನಾಲ್ಕು ವರ್ಷಗಳಿಂದ ವಿವಿಧ ಇಲಾಖೆಯ (ಸರ್ವಶಿಕ್ಷಣ ಅಭಿಯಾನ, ಸಾಕ್ಷರತಾ ಸಮಿತಿ, ಆರೋಗ್ಯ, ಇಲಾಖೆ ( ಹೆಚ್.ಐ.ವಿ) ಎನ್.ವೈ.ಕೆ) ಹಲವಾರು ಕಾರ್ಯಕ್ರಮಗಳನ್ನು ಅತ್ಯುತ್ತಮವಾಗಿ ನಡೆಸಿಕೊಟ್ಟಿರುವುದಾಗಿ ತಿಳಿಸಿ, ಕಳೆದ 2008–09 ನೇ ಸಾಲಿನಲ್ಲಿ ಆಲ್ಟರ್ನೇಟೀವ್ ಡೆವಲಪ್‌ಮೆಂಟ್ ಇನಿಷಿಯೇಟೀವ್ ಸಂಸ್ಥೆಯ ಸಹಯೋಗದಲ್ಲಿ ನೆಲಮಂಗಲದ ಐದು ಕೆರೆಗಳಲ್ಲಿ ಸಾರ್ವಕಾಲಿಕ ನೀರಿನ ಕೃಷಿ ಹೊಂಡಗಳನ್ನು ನಿರ್ಮಿಸಿ ಸಮುದಾಯ ಸಂಘಟನೆಯನ್ನು ಹುಟ್ಟು ಹಾಕಿ ಕೆರೆಯ ಉಸ್ತುವಾರಿ ಸಮಿತಿ ರಚನೆ ಮಾಡಿ ಕೆರೆಯ ಸಂಪೂರ್ಣ ಜವಾಬ್ದಾರಿಯನ್ನು ಕೊಡಿಸಿರುವುದಾಗಿ ತಿಳಿಸಿ, ಪ್ರಸ್ತುತ ಪಾಲಿಕೆಯಿಂದ ಸ್ವಯಂ ಸೇವಾ ಸಂಸ್ಥೆಗಳ ಪಾಲ್ಗೊಳ್ಳುವಿಕೆಗಾಗಿ ಅರ್ಜಿ ಅಹ್ವಾನಿಸಿರುತ್ತೀರಾ ಅದರ ಅನ್ವಯ ನಿಯಮಾನುಸಾರಗಳಿಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ತಮ್ಮ ಸಂಸ್ಥೆಯು ಇಚ್ಛಿಸ್ಸುತ್ತದೆಂದು, ಪಾಲಿಕೆಯಿಂದ ಈ ಜವಾಬ್ದಾರಿಯನ್ನು ತಮಗೆ ನೀಡಿದಲ್ಲಿ ಬೆಂಗಳೂರು ಜಿಲ್ಲೆ ಹಾಗೂ ರಾಜ್ಯದಾದ್ಯಂತ ಯಾವುದೇ ಭಾಗದಲ್ಲಾದರು ಕಾರ್ಯಕ್ರಮಗಳನ್ನು ನಡೆಸಿಕೊಡಲು ಒಪ್ಪಿರುತ್ತೇವೆ ಮತ್ತು ತಮ್ಮ ಆಶೋತ್ತರಗಳಿಗನುಗುಣವಾಗಿ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತೇವೆ ಎಂದು ದೃಢಪಡಿಸುತ್ತೇವೆಂದು

ತಿಳಿಸಿರುತ್ತಾರೆ. ಈ ಎಲ್ಲಾ ಕಾರ್ಯಕ್ರಮಗಳ ಅನುಷ್ಠಾನದ ಖರ್ಚು ವೆಚ್ಚಕ್ಕಾಗಿ ಆರ್ಥಿಕ ಸಹಾಯಧನವಾಗಿ ಪಾಲಿಕೆಯಿಂದ ರೂ. 15.00 ಲಕ್ಷಗಳನ್ನು ಮಂಜೂರು ಮಾಡಬೇಕಾಗಿ ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ**,** ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12 ರಂತೆ 185 ಸಂಘ ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ಮೊತ್ತ ರೂ. 116.50 ಲಕ್ಷಗಳು. ಆದರೆ, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಗೆ ಅನುದಾನ ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :–*** **ದಿನಾಂಕ : 30–03–2012ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಘಸಂಸ್ಥೆಗೆ ರೂ.1.00 ಲಕ್ಷ (ಒಂದು ಲಕ್ಷ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *38]. ವಿಷಯದ ಸಂಖ್ಯೆ :–ತೆಆಸ್ಥಾಸ/02/2012–13*

ಅಪರ ಆಯುಕ್ತರು (ಯೊಜನೆ) ರವರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್‌ಆರ್(4)216/11–12, ದಿನಾಂಕ ಃ 31–03–2012 ರಲ್ಲಿ ವಿವರಿಸಿರುವಂತೆ, ಶ್ರೀ ಎಂ. ಉದಯಶಂಕರ್, ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿ, ಗ್ರಾಮಸೇವಾ ಸಂಘ ಟ್ರಸ್ಟ್. ನಂ.25/ಎ, ಸುಶೀಲ ರಸ್ತೆ, (ಮಾರಮ್ಮ ಟೆಂಪಲ್ ರಸ್ತೆ) ಮಾವಳ್ಳಿ ಬೆಂಗಳೂರು–04 ಇಲ್ಲಿ ಸಂಘವು ಅಸ್ತಿತ್ವದಲ್ಲಿದ್ದು, ಸಂಘದ ವತಿಯಿಂದ ಸಾರ್ವಜನಿಕರು ಗುರುತಿಸುವಂತಹ ಸಾರ್ವಜನಿಕ–ಸಮಾಜ ಸೇವೆ ಮಾಡುತ್ತಿದ್ದು. ಇದರಿಂದ ನಾಗರೀಕರಿಗೂ ಅನುಕೂಲವಾಗಿರುತ್ತದೆ, ಆದರೆ ಟ್ರಸ್ಟ್ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲ ದಿರುವುದಿರುದರಿಂದ ಆರ್ಥಿಕ ಸಹಾಯಕ ಅವಶ್ಯಕತೆ ಇರುತ್ತದೆಂದು ಹಾಗೂ ಟ್ರಸ್ಟ್ ವತಿಯಿಂದ ಇತರ ಅಭಿವೃದ್ಧಿ ಕಾರ್ಯಕೈಗೊಳ್ಳುವ ಅವಶ್ಯಕತೆ ಇದ್ದು, ಪ್ರಸ್ತುತ ಬಿಬಿಎಂಪಿ 2011–12 ನೇ ಸಾಲಿನಲ್ಲಿ ರೂ5.00 ಲಕ್ಷ ಅನುಧಾನ ಮಂಜೂರಾಗಿದ್ದು ಅನುಧಾನ ಬಿಡುಗಡೆ ಮಾಡಿದಲ್ಲಿ ಸಾರ್ವಜನಿಕ–ಸಮಾಜ ಸೇವೆ ತೊಡಗಿಸಿಕೊಳ್ಳಲು ಅನುಕೂಲವಾಗಿರುತ್ತದೆ ಆದುದರಿಂದ ಸದರಿ ಟ್ರಸ್ಟ್ ವತಿಯಿಂದ ಸಾರ್ವಜನಿಕ–ಸಮಾಜ ಸೇವೆ ಹಾಗೂ ಅಭಿವೃದ್ಧಿ ಕಾರ್ಯಕೈಗೊಳ್ಳುವ ಸಂಸ್ಥೆಯ ಕೋರಿಕೆಯನ್ನು ಪರಿಗಣಿಸಿ, ಬಿಬಿಎಂಪಿ 2011–12ನೇ ಸಾಲಿನಲ್ಲಿ ಮಂಜೂರಾಗಿರುವ ರೂ. 5.00 ಲಕ್ಷ ಅನುಧಾನವನ್ನು ಬಿಡುಗಡೆ ಮಾಡಲು ಮುಂದಿನ ಕ್ರಮಕೈಗೊಳ್ಳಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12ರಂತೆ 185 ಸಂಘ/ಸಂಸ್ಥೆಗಳಿಗೆರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (138) ರಲ್ಲಿ "ಗ್ರಾಮ ಸೇವಾ ಸಂಘ(ರಿ), ದೊಡ್ಡಮಾವಳ್ಳಿ, ಬೆಂ"** ರವರಿಗೆ **ರೂ. 5.00 ಲಕ್ಷಗಳ** ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಯ ಮನವಿಯ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :– ದಿನಾಂಕ : 31–03–2012ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.5,00,000/– (ಐದು ಲಕ್ಷ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## ***39]. ವಿಷಯದ ಸಂಖ್ಯೆ :–ತೆಆಸ್ಥಾಸ/03/2012–13***

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್‌ಆರ್(4)217/11–12, ದಿನಾಂಕ : 31–03–2012 ರಲ್ಲಿ ವಿವರಿಸಿರುವಂತೆ, ಶ್ರೀ ಎಂ. ಉದಯಶಂಕರ್, ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿ, ಮಾನ್ಯ ಅಧ್ಯಕ್ಷರು. ಅತಿಕ್ ಎಜುಕೇಷನ್ ಟ್ರಸ್ಟ್, 1ನೇ ಮುಖ್ಯರಸ್ತೆ, ಟ್ಯಾಂಕ್ ಗಾರ್ಡನ್, ಸೋಮೇಶ್ವರ ನಗರ, ಜಯನಗರ 1ನೇ ಬ್ಲಾಕ್, ಬೆಂಗಳೂರು – 560 011 ತಮ್ಮ ಸಂಸ್ಥೆ ವತಿಯಿಂದ ಸರ್ಕಾರಿ ಉರ್ದು ಶಾಲೆ ನಡೆಸುತ್ತಿದ್ದು, ಸದರಿ ಶಾಲೆಯಲ್ಲಿ ಸೋಮೇಶ್ವರನಗರ, ದಯಾನಂದ ನಗರ 1ನೇ ಬ್ಲಾಕ್, ತೀರ ಬಡಕುಟುಂಬದ ಅಲ್ಪ ಸಂಖ್ಯಾತ ಮಕ್ಕಳುಗಳು ಸದರಿ ಸರ್ಕಾರಿ ಉರ್ದು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವುದರಿಂದ, ಬಡ ಮಕ್ಕಳ ಭವಿಷ್ಯ/ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಅಭಿವೃದ್ಧಿ ಕಾರ್ಯಕ್ರಮಗಳ ಅವಶ್ಯಕತೆ ಇರುತ್ತದೆ, ಪ್ರಸ್ತುತ ಬಿಬಿಎಂಪಿ 2011–12ನೇ ಸಾಲಿನಲ್ಲಿ ರೂ 2.00 ಲಕ್ಷ ಅನುಧಾನ ಮಂಜೂರಾಗಿದ್ದು. ಮಂಜೂರಾಗಿರುವ ಧನ ಸಹಾಚುವನ್ನು ಬಿಡುಗಡೆ ಮಾಡಲು ಕೋರಿತ್ತಾರೆ. ಈ ವಿಷಯದಲ್ಲಿ ಮೇಲ್ಕಂಡ ವಿವರಗಳನ್ನು ತಮ್ಮ ಗಮನಕ್ಕೆ ತಂದು ಕೋರುವುದೇನೆಂದರೆ. ಸಂಸ್ಥೆಯ ವತಿಯಿಂದ ಸರ್ಕಾರಿ ಉರ್ದು ಶಾಲೆ ನಡೆಸತ್ತಿದ್ದು. ಸದರಿ ಶಾಲೆಯಲ್ಲಿ 1 ರಿಂದ 10ನೇ ತರಗತಿಯವರೆಗೆ (ಕೋ–ಎಜುಕೇಷನ್) ಸುಮಾರು 900 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಸಂಬಂಧಸಿದಂತೆ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಿದಲ್ಲಿ ಅನುಕೂಲ ಕಲ್ಪಿಸಿದಂತಾಗುವುದರಿಂದ, ಸಂಸ್ಥೆಯ ಕೋರಿಕೆಯನ್ನು ಪರಿಗಣಿಸಿ, ಬಿಬಿಎಂಪಿ 2011–12ನೇ ಸಾಲಿನಲ್ಲಿ ಮಂಜೂರಾಗಿರುವ ರೂ. 2.00 ಲಕ್ಷ ಅನುಧಾನವನ್ನು ಬಿಡುಗಡೆ ಮಾಡವ ಬಗ್ಗೆ ಮುಂದಿನ ಕ್ರಮಕೈಗೊಳ್ಳಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12ರಂತೆ 185 ಸಂಘ/ಸಂಸ್ಥೆಗಳಿಗೆರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (140) ರಲ್ಲಿ "ಅತೀಕ್ ಮಸೀದಿ ಉರ್ದು ಸಂಘ (ರಿ) ಸೋಮೇಶ್ವರ** ನಗರ" ರವರಿಗೆ **ರೂ. 2.00 ಲಕ್ಷಗಳ** ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಯ ಮನವಿಯ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :– ದಿನಾಂಕ : 31–03–2012ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.2,00,000/– (ಎರಡು ಲಕ್ಷ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## *40]. ವಿಷಯದ ಸಂಖ್ಯೆ :–ತೆಆಸ್ಥಾಸ/04/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ: 30–03–2012 ರಲ್ಲಿ ವಿವರಿಸಿರುವಂತೆ, Formating of 4 Laying of Hesarughatta Main Road "(CH:0 to 800, 800 to 1550, 1550 to 2300, 2300 to 3090 & 3090 to 3500)" ಕಾಮಗಾರಿಗೆ 2009–10ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ–2271 ಅಡಿ ವರ್ಕ್‌ಕೋಡ್ ನೀಡಲಾಗಿದ್ದು, ಮರುನವೀಕರಣಕ್ಕೆ ರೂ.700.00 ಲಕ್ಷಗಳ ಅನುದಾನ ಅವಶ್ಯವಿದ್ದು, ಲೆಕ್ಕಶೀರ್ಷಿಕೆ ಪಿ–2271ರ ಮುಂದುವರೆದ ಕಾಮಗಾರಿಗಳಡಿ ಲಭ್ಯವಿರುವ ಅನುದಾನದಲ್ಲಿ ಮರುಹೊಂದಾಣಿಕೆ ಮಾಡಿಕೊಂಡು ಮರು ನವೀಕರಿಸಲು, ಕರ್ನಾಟಕ ಮುನಿಸಿಪಲ್ ಕಾಯಿದೆ 1976 ಸೆಕ್ಷನ್ 172 ರ ಪ್ರಕಾರ ಮರುಹೊಂದಾಣಿಕೆ (Re-appropriation) ಪ್ರಸ್ಥಾವನೆಯನ್ನು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :– ದಿನಾಂಕ : 30–03–2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಿದೆ.***

## *ಹೆಚ್ಚುವರಿ ವಿಷಯಗಳು :–*

## *41]. ವಿಷಯದ ಸಂಖ್ಯೆ :–ತೆಆಸ್ಥಾಸ/05/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ: 02–04–2012 ರಲ್ಲಿ ವಿವರಿಸಿರುವಂತೆ, "Comprehensive Improvements to Attur Lake (Stage-2)" ಕಾಮಗಾರಿಗೆ 2009–10ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ–2091 ಅಡಿ ವರ್ಕ್‌ಕೋಡ್ ನೀಡಲಾಗಿದ್ದು, ಮರುನವೀಕರಣಕ್ಕೆ ರೂ.65.00 ಲಕ್ಷಗಳ ಅನುದಾನ ಅವಶ್ಯವಿದ್ದು, ಲೆಕ್ಕಶೀರ್ಷಿಕೆ ಪಿ–2175ರ ಹೊಸ ಕೆರೆಗಳ ಅಭಿವೃದ್ಧಿ ಲೆಕ್ಕಶೀರ್ಷಿಕೆಗಳಡಿ ಲಭ್ಯವಿರುವ ಅನುದಾನದಲ್ಲಿ ಮರುಹೊಂದಾಣಿಕೆ ಮಾಡಿಕೊಂಡು ಮರು ನವೀಕರಿಸಲು, ಕರ್ನಾಟಕ ಮುನಿಸಿಪಲ್ ಕಾಯಿದೆ 1976 ಸೆಕ್ಷನ್ 172 ರ ಪ್ರಕಾರ ಮರುಹೊಂದಾಣಿಕೆ (Re-appropriation) ಪ್ರಸ್ಥಾವನೆಯನ್ನು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :– ದಿನಾಂಕ : 02–04–2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಿದೆ.***

## *42]. ವಿಷಯದ ಸಂಖ್ಯೆ :–ತೆಆಸ್ಥಾಸ/06/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/432/11–12, ದಿನಾಂಕ:23–02–2012 ರಲ್ಲಿ ವಿವರಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ:110 (ಹಳೇ ವಾರ್ಡ್–77) ರ ವ್ಯಾಪ್ತಿಯ ಕಸ್ತೂರಿಬಾ ರಸ್ತೆ, ಹಾಗೂ ಕಬ್ಬನ್ ಪಾರ್ಕ್ ಬಳಿ ಇರುವ ದ್ವಿಚಕ್ರ ವಾಹನ ನಿಲ್ದಾಣದ ಬಳಿ ಇರುವ ನಗರಪಾಲಿಕೆಯ 5X5 ಅಡಿಗಳ ನಿವೇಶನವನ್ನು ಅಂಗವಿಕಲರಾದ ಶ್ರೀ ಆರ್.ನಾಗರಾಜ್(ಅಂಗವಿಕಲರು) ರವರಿಗೆ ಸಾರ್ವಜನಿಕ ದೂರವಾಣಿ ಬೂತ್ ಒಂದನ್ನು ಗುತ್ತಿಗೆ ಆಧಾರದ ಮೇಲೆ ನಡೆಸುವ ಸಲುವಾಗಿ ಈ ಹಿಂದೆ 4 ಬಾರಿ ಪ್ರತಿಬಾರಿ 3 ವರ್ಷಗಳಂತೆ ನೀಡಲಾಗಿದ್ದು ಸರಿಯಷ್ಟೆ. ಆದಾಗ್ಯೂ ಪ್ರಥಮ ದಿನಾಂಕ: 19–06–1997 ರಿಂದ (ಮಾಸಿಕ ಹಣ ರೂ.250/– ಗಳಂತೆ) ನಂತರ, ನವೀಕರಿಸುತ್ತಾ ದಿನಾಂಕ:18–10–2000 ದಿಂದ (ಮಾಸಿಕ ಹಣ ರೂ.400/– ಗಳಂತೆ) ನಂತರ, ಪುನರ್ ನವೀಕರಣದ ಮೂಲಕ ದಿ:12–10–2003 ರಿಂದ ಮಾಸಿಕ ಗುತ್ತಿಗೆ ಹಣ ರೂ.800/–ಗಳಂತೆ ಪ್ರಸ್ತಾಪಿಸಲಾಗಿದ್ದು, ಅದನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿಸಮಿತಿಯು ಹಾಗೂ ನಗರಪಾಲಿಕೆ ಸಭೆಯು ಸದರಿ ಗುತ್ತಿಗೆದಾರರು ಅಂಗವಿಕಲರಾದ ಪ್ರಯುಕ್ತ ಪರಿಗಣಿಸುತ್ತಾ, ಗುತ್ತಿಗೆ ದರವನ್ನು ರೂ.400/–ಗಳಾಗಿ ನಿಗಧಿಪಡಿಸಿದ್ದು, ತದನಂತರ, ದಿ:17–11–2000 ರಿಂದ (ಮಾಸಿಕ ರೂ.400/–)ರಂತೆ ನೀಡಲಾಗಿದ್ದು, ಸದರಿ ಗುತ್ತಿಗೆ ಅವಧಿ ದಿನಾಂಕ:16–11–2009 ರಲ್ಲಿ ಮುಕ್ತಾಯಗೊಂಡಿದ್ದು, ಸದರಿ ಗುತ್ತಿಗೆದಾರರು ಅರ್ಜಿಗಳನ್ನು ದಿನಾಂಕ:07–11–2009 ಮತ್ತು 20–03–2010 ರಲ್ಲಿ ಪುನರ್ ನವೀಕರಣವನ್ನು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಗುತ್ತಿಗೆ ಜಾಗದ ಕಸ್ತೂರಿಬಾ ರಸ್ತೆ ಪ್ರದೇಶ ಅಗಲೀಕರಣದ ಕಾಮಗಾರಿ ಪ್ರಯುಕ್ತ ಹಾಗೂ ಮಾನ್ಯ ಆಯುಕ್ತರುರವರ ಸುತ್ತೋಲೆ ಮೇರೆಗೆ ಗುತ್ತಿಗೆ ದರದ ವ್ಯವಹಾರಗಳನ್ನು ಹರಾಜಿನ ಮೂಲಕವೇ ವಿಲೇವಾರಿ ಮಾಡಲು ಆದೇಶಿಸಿರುವ ಪ್ರಯುಕ್ತ ಸದರಿ ಗುತ್ತಿಗೆದಾರರವರ ಮನವಿಗಳನ್ನು ಪರಿಗಣಿಸಲು ಸಾಧ್ಯವಿಲ್ಲದೆ, ಸದರಿಯವರಿಗೆ ಅದರಂತೆ ಸೂಕ್ತ ಹಿಂಬರಹ ದಿ:01-02-2010 ಮತ್ತು 19-08-2010 ರಲ್ಲಿ ಅನುಕ್ರಮವಾಗಿ ತಿಳಿಯಪಡಿಸಲಾಗಿರುತ್ತದೆ.

ಸದರಿ ಗುತ್ತಿಗೆದಾರರು ಈಗಾಗಲೇ ಅರ್ಜಿಯೊಂದನ್ನು ದಿನಾಂಕ:25-02-2011 ರಂದು ಮಾನ್ಯ ಅಧ್ಯಕ್ಷರು, ಅಪೀಲುಗಳ ಸ್ಥಾಯಿಸಮಿತಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಲ್ಲಿಸಿದ್ದು, ಸದರಿ ಸಮಿತಿಯು ಸದರಿ ಗುತ್ತಿಗೆದಾರರನ್ನು ದಿನಾಂಕ:26-02-2011 ರಂದು ವಿಚಾರಣೆ ನಡೆಸಿ ಹಾಗೂ ಅವರ ಹೇಳಿಕೆಯನ್ನು ಸಹ ಪಡೆದು ಇದರೊಂದಿಗೆ ಸದರಿ ಸಮಿತಿಯು ಸದರಿ ಗುತ್ತಿಗೆದಾರರ ಅಂಗವಿಕಲತೆ ಮತ್ತು ಪೊಲೀಸ್ ಹಾಗೂ ವಾರ್ಡಿನ ನಗರಸಭಾ ಸದಸ್ಯರ ನಿರಾಪೇಕ್ಷಣಾ ಮತ್ತು ಯಾರಿಂದಲೂ ಆಕ್ಷೇಪಣೆ ಇಲ್ಲದಿರುವ ಕಾರಣ, ಸದರಿ ಬೂತ್ ನಡೆಸಲು ಗುತ್ತಿಗೆ ಅವಧಿ ಮುಂದುವರೆಸಲು ಮತ್ತೊಂದು ವರ್ಷದ ಅವಧಿಗೆ ತೀರ್ಮಾನ ನೀಡಿರುತ್ತದೆ. ಆದರೆ, ಗುತ್ತಿಗೆ ದರದ ಬಗ್ಗೆ ಯಾವ ಸೂಚನೆಯು ಇರುವುದಿಲ್ಲ.

ಮಾನ್ಯ ಉಪ ಆಯುಕ್ತರು(ಆಸ್ತಿಗಳು) ಕಂಡಿಕೆ(11)ರಲ್ಲಿ ಸದರಿ ವಿಷಯದ ಬಗ್ಗೆ ಪರಿಶೀಲಿಸುತ್ತಾ, ಮೂಲ ಕಡತದೊಂದಿಗೆ ಮಾರುಕಟ್ಟೆ ದರದೊಂದಿಗೆ ಟಿಪ್ಪಣಿ ಪ್ರಸ್ತಾವನೆ ಸಲ್ಲಿಸಲು ಆದೇಶ ನೀಡಿರುತ್ತಾರೆ. ಅರ್ಜಿದಾರರು ಕೋರಿರುವ ನಕ್ಷೆಯಂತೆ ಸದರಿ ಸ್ಥಳವು ಕಬ್ಬನ್ ಪಾರ್ಕ್‌ಗೆ ಹೋಗುವ ದ್ವಿಚಕ್ರ ವಾಹನದ ನಿಲುಗಡೆಯ ಪಕ್ಕದಲ್ಲಿ ನವೀಕರಣಕ್ಕಾಗಿ ಕೋರಿದ್ದು, ಈ ಸ್ವತ್ತಿನ ಮಾರುಕಟ್ಟೆ ಮೌಲ್ಯ ಚದರಡಿ 1ಕ್ಕೆ 6000/-ರೂ.ಗಳಿದ್ದು, ಸ್ವತ್ತಿನ ಮೌಲ್ಯ 1,50,000/-ರೂ.ಗಳಾಗುತ್ತದೆ. ವಾಣಿಜ್ಯಕ್ಕೆ ಶೇ:40%ರಷ್ಟು ಸೇರಿಸಿದಾಗ 60,000/-ರೂ.ಗಳು, ಸ್ವತ್ತಿನ ಒಟ್ಟು ಮೌಲ್ಯ 2,10,000/-ರೂ.ಗಳಾಗುತ್ತದೆ. ಶೇ:10%ರಂತೆ ಪರಿಗಣಿಸಿದಲ್ಲಿ ವಾರ್ಷಿಕ 21,000/-ರೂ.ಗಳು ಹಾಗೂ ಮಾಸಿಕ 1750/ರೂ.ಗಳಾಗುತ್ತದೆ.

ಈ ಬಗ್ಗೆ ಮುಂದಿನ ಸೂಕ್ತ ತೀರ್ಮಾಣಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ದಿನಾಂಕ: 23-02-2012ರ ಆಯುಕ್ತರ ಟಿಪ್ಪಣಿ ಒಪ್ಪಲಾಗಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ : 20-03-2012ರ ನಿರ್ಣಯ.

***ನಿರ್ಣಯ :-*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 20.03.2012ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.800/- (ಎಂಟು ನೂರು) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ***43]. ವಿಷಯದ ಸಂಖ್ಯೆ :-ತೆಆಸ್ಥಾಸ/07/2012-13***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/120/11-12, ದಿನಾಂಕ:03-01-2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ಸಂಖ್ಯೆ:155, ಹನುಮಂತನಗರದ ಲಕ್ಷ್ಮಿಪುರ ಪಾಲಿಕೆ ನೌಕರರ ವಸತಿಗೃಹಗಳ ನಿವೇಶನ ಸಂಖ್ಯೆ:33ರ ಪಕ್ಕದ ನಿವೇಶನವನ್ನು ಮಂಜೂರು ಮಾಡಲು ಪಾಲಿಕೆಯ ನಾಲ್ಕನೇ ದರ್ಜೆ ನೌಕರರಾದ ಶ್ರೀಮತಿ.ಕೆ.ಎಸ್.ಪದ್ಮಾವತಿರವರು ಕೋರಿದ್ದು, ಸ್ಥಾಯಿಸಮಿತಿ ಮುಂದೆ ತರಲು ಅಭಿಪ್ರಾಯಿಸಲಾಗಿರುತ್ತದೆ.

ಈ ಬಗ್ಗೆ ವಲಯಾಧಿಕಾರಿಗಳು ಸ್ಥಳ ಪರಿಶೀಲಿಸಿ ಸ್ಥಳದಲ್ಲಿ 15X15 ಅಡಿಗಳ ಖಾಲಿ ನಿವೇಶನವಿರುತ್ತದೆ. ಮತ್ತು ಈ ಸ್ಥಳವನ್ನು ಹಿಂದೆ ಪಾಲಿಕೆ ನೌಕರರು ಮಂಜೂರು ಮಾಡಲು ಕೋರಿದ್ದು, ತಿರಸ್ಕರಿಸಿ ಹಿಂಬರಹ ನೀಡಲಾಗಿರುತ್ತದೆಂದು ವರದಿ ನೀಡಿದ್ದು, ಆದೇಶಕ್ಕಾಗಿ ಪ್ರಸ್ತಾಪಿಸಿರುತ್ತಾರೆ. ಸ್ಥಳೀಯ ಪಾಲಿಕೆ ಸದಸ್ಯರ ಕೋರಿಕೆ ಮೇರೆಗೆ ಈ ಪ್ರಸ್ತಾವನೆ ಸ್ಥಾಯಿಸಮಿತಿ ಮುಂದೆ ತರಲು ಅಭಿಪ್ರಾಯಿಸಲಾಗಿದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:21-09-2011ರ ಸರ್ಕಾರದ ಮಾರ್ಗಸೂಚಿಯಂತೆ ವಸತಿಗೆ ಚದರ ಅಡಿ ಒಂದಕ್ಕೆ ರೂ.2,000-/-ಗಳಿದ್ದು, ಅರ್ಜಿದಾರರುಗಳು ಕೋರಿರುವ ಜಾಗವು 225 ಚ.ಅಡಿಗಳಾಗುತ್ತದೆ. ಇದರಂತೆ 2000X225 = 4,50,000/- ರೂ.ಗಳಾಗುತ್ತದೆ. ಸರ್ಕಾರಿ ಆದೇಶದಂತೆ ಶೇ:20%ರಷ್ಟು ಹೆಚ್ಚಿಸಲಾದರೆ 5,40,000/-ರೂ.ಗಳಾಗುತ್ತದೆ.

ಈ ಪ್ರದೇಶದಲ್ಲಿ ಹಿಂದೆ ಸರ್ಕಾರದ ದಿನಾಂಕ:17–02–2004ರ ಆದೇಶದ ಸಂಖ್ಯೆ:ನಅಇ/20/ಎಂಎನ್‌ಜಿ/99 ರ ಮಾರ್ಗಸೂಚಿಯಂತೆ 600 ಚದರಡಿ ಮೀರಿದ ನಿವೇಶನಗಳಿಗೆ ಚದರಡಿ 1ಕ್ಕೆ 25/–ರೂ.ನಿಗಧಿಪಡಿಸಿ ಕ್ರಯಪತ್ರ ನೀಡಲಾಗಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ಕಲಂ–176ರ ಪ್ರಕಾರ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ನಅಇ/129/ಡಿ.ಎಂ.ಡಿ./2002, ದಿನಾಂಕ:02–06–2003ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದಲ್ಲಿ, ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜಿನ ಮೂಲಕವೇ ನೀಡುವುದೆಂದಿದೆ.

ಸರ್ಕಾರಿ ಆದೇಶ ಸಂಖ್ಯೆ:ನಅಇ/222/ಎಂ.ಎನ್.ವೈ/2008, ದಿನಾಂಕ:03–09–2009ರ ಅನುಸಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸರಹದ್ದಿನಲ್ಲಿ ಬರುವ ಸಾರ್ವಜನಿಕ ಸ್ವತ್ತುಗಳನ್ನು ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವುದಾಗಲಿ ಅಥವಾ ಮಾರಾಟ ಮಾಡುವ ಬದಲಾಗಿ ಸರ್ಕಾರವೇ ಸೂಕ್ತವಾಗಿ ಅಭಿವೃದ್ಧಿಪಡಿಸುವ ಬಗ್ಗೆ ಸಲಹೆ ನೀಡಲು ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಲಹಾ ಸಮಿತಿಯ ಅನುಮೋದನೆ ಪಡೆಯಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀಮತಿ.ಕೆ.ಎಸ್.ಪದ್ಮಾವತಿ ರವರಿಗೆ ಈ ನಿವೇಶನವನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರದ ಅನುಮೋದನೆ ಪಡೆಯಲು ಈ ಪ್ರಕರಣವನ್ನು ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ಮಾನ್ಯ ಆಯುಕ್ತರ ಟಿಪ್ಪಣಿ ಒಪ್ಪಲಾಗಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ : 20–03–2012ರ ನಿರ್ಣಯ.

***ನಿರ್ಣಯ :–*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 20.03.2012ರ ನಿರ್ಣಯವನ್ನು ಒಪ್ಪಿದೆ.**

## ***44]. ವಿಷಯದ ಸಂಖ್ಯೆ :–ತೆಆಸ್ಥಾಸ/08/2012–13***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/529/11–12, ದಿನಾಂಕ:12–03–2012 ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ: 78, ಕ್ವೀನ್ಸ್‌ರಸ್ತೆ, ರಾಜೀವಗಾಂಧಿ ಕಾಲೋನಿ (ಪೂರ್ವ ಮತ್ತು ಪಶ್ಚಿಮ), ಶಿವಾಜಿನಗರ, ಬೆಂಗಳೂರು ಇಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಾಗದಲ್ಲಿ ವಿವಿಧ ಅಳತೆಗಳಲ್ಲಿ 49 ಜನ ಪೌರಕಾರ್ಮಿಕರು ಮನೆ ನಿರ್ಮಿಸಿಕೊಂಡು ವಾಸಮಾಡುತ್ತಿದ್ದು ಹಕ್ಕುಪತ್ರ ನೀಡುವಂತೆ ಕೋರಿರುತ್ತಾರೆ.

ಗುರುತಿನ ಚೀಟಿ, ಪಡಿತರ ಚೀಟಿ, ಮತದಾರರ ಪಟ್ಟಿಯನ್ನು ಲಗತ್ತಿಸಿದ್ದು, ಫಲಾನುಭವಿಗಳ ಹೆಸರುಗಳನ್ನು ಮತದಾರರ ಪಟ್ಟಿಯಲ್ಲಿ ಕೆಲವು ಲಭ್ಯವಿರುವ ಹೆಸರುಗಳನ್ನು ಗುರ್ತಿಸಿದ್ದು, ಮಹಜರ್ ವರಧಿಯೊಂದಿಗೆ ಕಳೆದ 15 ವರ್ಷಗಳಿಂದ ವಾಸವಾಗಿರುವುದಾಗಿ ದೃಢೀಕರಿಸಲ್ಪಟ್ಟಿರುವುದಾಗಿ ವರಧಿ ಮಾಡಿರುತ್ತಾರೆ.

ಫಲಾನುಭವಿಗಳು ವಾಸಿಸುತ್ತಿರುವ ಸ್ಥಳವನ್ನು ಚಕ್ಕು ಬಂದಿಯೊಂದಿಗೆ ನಿವೇಶನದ ಅಳತೆ ಮತ್ತು ನಕ್ಷೆಯನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಂದ ತಯಾರಿಸಿ 49 ಫಲಾನುಭವಿಗಳ ಹೆಸರು, ವಾಸಿಸುತ್ತಿರುವ ನಿವೇಶನದ ಅಳತೆಯ ವಿವರಗಳನ್ನು ಪೌರಕಾರ್ಮಿಕರ ಪಟ್ಟಿಯೊಂದಿಗೆ ಲಗತ್ತಿಸಿ 49 ಪೌರಕಾರ್ಮಿಕರಿಗೆ ಹಕ್ಕುಪತ್ರಗಳನ್ನು ನೀಡುವ ಬಗ್ಗೆ ಕಡತ ಮಂಡಿಸಿರುತ್ತಾರೆ.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಯಾರಿಸಿರುವ ನಕ್ಷೆಯಂತೆ ಕ್ವೀನ್ಸ್‌ರಸ್ತೆಯಲ್ಲಿ 5 ಮನೆಗಳು ರಾಜೀವ್‌ಗಂಧಿ ಕಾಲೋನಿ ರಸ್ತೆಯಲ್ಲಿ (ತಿಮ್ಮಯ್ಯ ರಸ್ತೆ ಕ್ರಾಸ್)44 ಮನೆಗಳು ಇದ್ದು, ಕ್ರಮವಾಗಿ ಮಾರುಕಟ್ಟೆ ದರ ಚದರ ಅಡಿ 1ಕ್ಕೆ ರೂ. 6,000/– ಗಳು ಮತ್ತು ರೂ. 3,500/–ಗಳಾಗುತ್ತದೆ. ಆದುದರಿಂದ ಮೇಲ್ಕಂಡ ಫಲಾನುಭವಿಗಳಿಗೆ ಹಕ್ಕು ಪತ್ರ ನೀಡುವ ಬಗ್ಗೆ ಸ್ಥಾಯಿ ಸಮಿತಿಗಳು, ಪಾಲಿಕೆ ಸಭೆ ಮುಖಾಂತರ ಸರ್ಕಾರಕ್ಕೆ ಪ್ರಸ್ತಾಪಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ ಮಾನ್ಯ ಆಯುಕ್ತರ ಟಿಪ್ಪಣಿಯ ಅಂಶಗಳನ್ನು ಒಪ್ಪಲಾಗಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 20.03.2012ರ ನಿರ್ಣಯ.

***ನಿರ್ಣಯ :–*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 20.03.2012ರ ನಿರ್ಣಯವನ್ನು ಒಪ್ಪಿದೆ.**

## *45]. ವಿಷಯದ ಸಂಖ್ಯೆ :–ತೆಆಸ್ಥಾಸ/09/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ ಎ3(2)ಪಿಆರ್/454/10–11, ದಿನಾಂಕ:28–02–2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಯಲಹಂಕ ವಲಯ, ವಿದ್ಯಾರಣ್ಯಪುರ ಉಪ ವಿಭಾಗ, ವಾರ್ಡ್ ನಂ.09, ಹೆಚ್.ಎಂ.ಟಿ ಬಡಾವಣೆಯಲ್ಲಿರುವ ಹಾಪ್‌ಕಾಮ್ಸ್ ಪಕ್ಕದಲ್ಲಿ ಪಾಲಿಕೆ ವತಿಯಿಂದ ನಿರ್ಮಿಸಿರುವ 195.75 ಚದರ ಅಡಿಗಳ 2 ಮಳಿಗೆಗಳನ್ನು ಬಾಡಿಗೆಗಾಗಿ ಹಿರಿಯ ನಾಗರೀಕರ ವೇದಿಕೆ ವಿದ್ಯಾರಣ್ಯಪುರ ಮತ್ತು ಲಯನ್ಸ್ ಸಂಸ್ಥೆ ವಿದ್ಯಾರಣ್ಯಪುರ ಇವರುಗಳು ಬಾಡಿಗೆ ಆಧಾರದ ನೀಡಲು ಅನುಮತಿಯನ್ನು ಕೋರಿರುತ್ತಾರೆ.

ಸದರಿ ಜಾಗದ ಬಗ್ಗೆ ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ) ನಕ್ಷೆಯಲ್ಲಿ ಜಾಗವನ್ನು ಗುರುತಿಸಿ ವರದಿ ಮಂಡಿಸಿರುತ್ತಾರೆ.

ಸದರಿ ಮಳಿಗೆಗೆ ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ ನಿಯಮಗಳಂತೆ ಪ್ರತಿ ತಿಂಗಳಿಗೆ ರೂ.1874/–ಗಳ ಬಾಡಿಗೆಯನ್ನು ನಿಗಧಿಪಡಿಸಿರುತ್ತಾರೆ. ಸದರಿ ಮಳಿಗೆಗಳನ್ನು ಒಂದನ್ನು ಹಿರಿಯ ನಾಗರೀಕರ ವೇದಿಕೆ ಹಾಗೂ ಮತ್ತೊಂದನ್ನು ಲಯನ್ಸ್ ಕ್ಲಬ್ ಆಫ್ ವಿದ್ಯಾರಣ್ಯಪುರ ಬೆಂಗಳೂರು ಇವರಿಗೆ ಬಾಡಿಗೆಗೆ ನೀಡಲು ಪಾಲಿಕೆ ಹಾಗೂ ಸಾರ್ವಜನಿಕ ಉದ್ದೇಶಕ್ಕೆ ಅವಶ್ಯವೆನಿಸುವ ಅವಧಿಯಲ್ಲಿ ಪಾಲಿಕೆ ವಾಪಸ್ಸು ಪಡೆಯುವ ಷರತ್ತಿನೊಂದಿಗೆ ಇನ್ನಿತರೇ ಷರತ್ತುಗಳನ್ನು ವಿಧಿಸಿ ಕರಾರು ನೊಂದಾಯಿಸುವ ದಿನಾಂಕದಿಂದ 3 ವರ್ಷಗಳ ಅವಧಿಗೆ ಅನುಮತಿ ನೀಡಲು ಸ್ಥಾಯಿ ಸಮಿತಿಗಳ ಅನುಮೋದನೆ ಪಡೆಯಬೇಕಾಗಿದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ಹರಾಜು ಮೂಲಕ ಬಡಿಗೆಗೆ ನೀಡಲು ಒಪ್ಪಲಾಗಿರುವ  ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 20–03–2012ರ ನಿರ್ಣಯ.

***ನಿರ್ಣಯ :–*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 20.03.2012ರ ನಿರ್ಣಯವನ್ನು ಒಪ್ಪಿದೆ.**

## *46]. ವಿಷಯದ ಸಂಖ್ಯೆ :–ತೆಆಸ್ಥಾಸ/10/2012–13*

ಮೇಲಿನಂತೆ ಸಲ್ಲಿಸಲಾಗಿರುವ ಪ್ರಸ್ತಾವನೆಯು ಸಮಂಜಸವಾಗಿರುವ ಹಿನ್ನೆಲೆಯಲ್ಲಿ ಫಲಾನುಭವಿಗಳು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿರುವವರನ್ನು ರಿಯಾಯಿತಿ ದರದಲ್ಲಿ ಕುಟುಂಬದ ಹಿರಿಯ ಮಹಿಳೆಯರ ಹೆಸರಿನಲ್ಲಿ ಹಂಚಿಕೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಕುರಿತು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಸಲ್ಲಿಸಲಾಗಿರುವ ಟಿಪ್ಪಣಿ ಮೇರೆಗೆ, ಮಾನ್ಯ ಆಯುಕ್ತರ ಟಿಪ್ಪಣಿ ಒಪ್ಪಲಾಗಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 20–03–2012ರ ನಿರ್ಣಯ.

*ನಿರ್ಣಯ :–* **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 20–03–2012ರ ನಿರ್ಣಯವನ್ನು ಒಪ್ಪಿದೆ.**

## *05]. ವಿಷಯದ ಸಂಖ್ಯೆ :–ತೆಆಸ್ಥಾಸ/29/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/184/11–12, ದಿನಾಂಕ: 24–02–2012 ರಲ್ಲಿ ವಿವರಿಸಿರುವಂತೆ, ಸರ್ಕಾರಿ ಆದೇಶ ಸಂಖ್ಯೆ : ಹೆಚ್‌ಯುಡಿ 161 ಕೆಹೆಚ್‌ಬಿ 94 ದಿನಾಂಕ : 02–09–1994 ರ ಸರ್ಕಾರಿ ಆದೇಶ ಉಲ್ಲೇಖಿಸಿ ಬೆಂಗಳೂರು ಜಿಲ್ಲಾಧಿಕಾರಿಗಳು ಜಿಲ್ಲಾಧಿಕಾರಿ ಬೆಂಗಳೂರು ಇವರ ಪತ್ರ ಸಂಖ್ಯೆ ಎಲ್‌ಎನ್‌ಡಿ(ಎನ್)/ಪಿಆರ್/350/2005–06 ದಿನಾಂಕ : 13–01–2006ರ ಪತ್ರದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಕೋರಮಂಗಲ. ಸರ್ವೆ ನಂ.36ರಲ್ಲಿ ಸಮತನಗರವನ್ನು ಬೆಂಗಳೂರು ನಗರದ ಬಡ ಜನ ಸುಧಾರಣಾ ಕಾರ್ಯಕ್ರಮ ಅಡಿಯಲ್ಲಿ 110 ಮನೆಗಳನ್ನು ನಿರ್ಮಿಸಿದ್ದು. ಅದರಲ್ಲಿ ವಾಸಿಸುವವರಿಗೆ ಹಕ್ಕುಪತ್ರ ವಿತರಿಸುವ ಸಂಬಂಧ ಪ್ರಸ್ತಾಪವಿದ್ದು. ಈ ಪ್ರದೇಶ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ್ದು, ಕೋರಮಂಗಲ ಗ್ರಾಮದ ಸರ್ವೆ ನಂ.36ರಲ್ಲಿ 1 ಎಕರೆ 4 ಗುಂಟೆ ಜಮೀನಿನ್ನು ಮೇಲೆ ವಿವರಿಸಿದ ಕಾರ್ಯ ಕ್ರಮ ಅಡಿಯಲ್ಲಿ 110 ಮನೆಗಳನ್ನು ನಿರ್ಮಿಸಲು ಜಮೀನನ್ನು ವರ್ಗಾಯಿಸಿರುತ್ತಾರೆ. ಪಾಲಿಕೆ ವತಿಯಿಂದ ಕುಡಿಯುವ ನೀರಿನ ಸೌಲಭ್ಯ, ಒಳ ಚರಂಡಿ, ರಸ್ತೆ ಸಂಪರ್ಕ ಮತ್ತು ರಸ್ತೆಗಳಿಗೆ ವಿದ್ಯುತ್ ಸೌಲಭ್ಯವನ್ನು ಒದಗಿಸಿರುತ್ತದೆ. ದಿನಾಂಕ:22–09–1996ರಲ್ಲಿ ದೃಡೀಕರಿಸಿರುವ ಪಟ್ಟಿಯಂತೆ ಮಹಾನಗರ ಪಾಲಿಕೆಯಿಂದ ಹಕ್ಕುಪತ್ರ ವಿತರಿಸಿ ಖಾತೆ ನೊಂದಾವಣೆಗೆ ಕ್ರಮಕೈಗೊಳ್ಳಲು ಪ್ರಸ್ತಾಪಿಸಿರುತ್ತಾರೆ.

ಬೆಂಗಳೂರು ಜಿಲ್ಲಾಧಿಕಾರಿಗಳು ಸಲ್ಲಿಸಿರುವ 111 ಪೈಕಿ, 41 ಫಲಾನುಭವಿಗಳ ಮಾತ್ರ ಸ್ಥಳದಲ್ಲಿ ವಾಸವಿದ್ದು 70 ಬೇರೆ ಫಲಾನುಭವಿಗಳು ಸುಮಾರು 10 ವರ್ಷಗಳಿಂದ ವಾಸವಿರುವುದಾಗಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದು ಪಡಿತರ ಚೀಟಿ, ಗುರುತಿನ ಚೀಟಿ ಇತ್ಯಾದಿ ದಾಖಲಾತಿಗಳು ಹೊಂದಿರುತ್ತಾರೆ. ಅತೀ ಬಡವರಾಗಿರುವುದರಿಂದ ಮೇಲಿನ ಸರ್ಕಾರಿ ಆದೇಶದಂತೆಯೇ ಇವರಿಗೂ ಸಹ ಮಂಜೂರಾತಿ ನೀಡಲು ಸ್ಥಳೀಯ ಅಧಿಕಾರಿಗಳು ಪ್ರಸ್ತಾಪಿಸಿರುತ್ತಾರೆ.

ಮೇಲಿನಂತೆ ಸಲ್ಲಿಸಲಾಗಿರುವ ಪ್ರಸ್ತಾವನೆಯು ಸಮಂಜಸವಾಗಿರುವ ಹಿನ್ನೆಲೆಯಲ್ಲಿ ಫಲಾನುಭವಿಗಳು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿರುವವರನ್ನು ರಿಯಾಯಿತಿ ದರದಲ್ಲಿ ಕುಟುಂಬದ ಹಿರಿಯ ಮಹಿಳೆಯರ ಹೆಸರಿನಲ್ಲಿ ಹಂಚಿಕೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಕುರಿತು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಸಲ್ಲಿಸಲಾಗಿರುವ ಟಿಪ್ಪಣಿ ಮೇರೆಗೆ, ದಿನಾಂಕ: 24–02–2012ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಲಾಗಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 20.03.2012ರ ನಿರ್ಣಯ.

***<u>ನಿರ್ಣಯ :–</u>*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 20–03–2012ರ ನಿರ್ಣಯವನ್ನು ಒಪ್ಪಿದೆ.**

### ***<u>061. ವಿಷಯದ ಸಂಖ್ಯೆ :–ತೆಆಸ್ಥಾಸ/30/2012–13</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/116/11–12, ದಿನಾಂಕ: 05–04–2012 ರಲ್ಲಿ ವಿವರಿಸಿರುವಂತೆ, ವಾರ್ಡ್–146, ಮಹಾಲಿಂಗೇಶ್ವರ ಬಡಾವಣೆ, ಸಂಪಂಗಿರಾಮನಗರ ಮತ್ತು ಚಂದ್ರಪ್ಪನಗರ ಕೊಳಚೆ ಪ್ರದೇಶಗಳಲ್ಲಿ ಈ ಹಿಂದೆ ಹಕ್ಕುಪತ್ರ ವಿತರಿಸಲು ಸಿದ್ದಪಡಿಸಿರುವ ಫಲಾನುಭವಿಗಳ ಪಟ್ಟಿಯಲ್ಲಿರುವವರು ವಾಸಿಸದೇ ಈ ಸ್ವತ್ತುಗಳಲ್ಲಿ ಬೇರೆಯವರು ಸುಮಾರು 15 ವರ್ಷಗಳಿಗಂದ ವಾಸಿಸುತ್ತಿದ್ದು, ಇವರುಗಳಿಗೆ ಹಕ್ಕುಪತ್ರಗಳ ಶುಲ್ಕವನ್ನು 22.75% ರ ಅನುದಾನದಡಿಯಲ್ಲಿ ಭರಿಸಿ, ಹಕ್ಕುಪತ್ರ ನೀಡುವಂತೆ ಶ್ರೀ ಕೆ. ಮಹೇಶ್‌ಬಾಬು, ಅಧ್ಯಕ್ಷರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸದಸ್ಯರು–146 ರವರು ಕೋರಿರುತ್ತಾರೆ.

ವಲಯಾಧಿಕಾರಿಗಳು ವರದಿಯಲ್ಲಿ ಹಾಲೀ ವಾಸಿಸುತ್ತಿರುವವರ ಪಟ್ಟಿ ತಯಾರಿಸಿ ಮಹಾಲಿಂಗೇಶ್ವರ ಬಡಾವಣೆಯ 50, ಬಡಾವಣೆಯ ಸಂಪಂಗಿರಾಮನಗರದ 61 ಮತ್ತು ಚಂದ್ರಪ್ಪನಗರದ 4 ಜನ ಫಲಾನುಭವಿಗಳು ಸುಮಾರು 15 ವರ್ಷಗಳಿಂದ ವಾಸಿಸುತ್ತಿದ್ದು, ಇವರುಗಳು ವಾಸ್ತವಾಂಶ ಮರೆಮಾಚಿ ಸುಳ್ಳು ದಾಖಲೆಗಳನ್ನು ನೀಡಿ ಹಕ್ಕುಪತ್ರವನ್ನು ಕೋರಿದ್ದಲ್ಲಿ, ಹಾಗೂ ನ್ಯಾಯಾಲಯದಿಂದ ವ್ಯತಿರಿಕ್ತ ಆದೇಶ ಬಂದಲ್ಲಿ ಹಕ್ಕುಪತ್ರ ಹಿಂಪಡೆಯುವ ಷರತ್ತುಗೊಳಪಡಿಸಿ ಹಕ್ಕುಪತ್ರ ನೀಡಲು ಆದೇಶಕ್ಕಾಗಿ ಮಂಡಿಸಿರುತ್ತಾರೆ.

ಸದರಿ ಪ್ರದೇಶಗಳಲ್ಲಿ ಹಕ್ಕುಪತ್ರ ನೀಡುವ ಸಂಬಂಧ ಸರ್ಕಾರಿ ಆದೇಶ ಸಂಖ್ಯೆ: ನಅಇ79 ಎಂಎನ್‌ಜಿ 2005, ದಿನಾಂಕ: 27–12–2005 ರಲ್ಲಿ ಸರ್ಕಾರಿ ಆದೇಶವಾಗಿರುತ್ತದೆ.

ಕೊಳಚೆ ಪ್ರದೇಶಗಳಲ್ಲಿ ದರ ನಿಗದಿಪಡಿಸಿ ಹಕ್ಕುಪತ್ರ ನೀಡಲು ಸರ್ಕಾರವು ತನ್ನ ಆದೇಶ ಸಂಖ್ಯೆ: ಯು.ಡಿ.ಡಿ/122/ಎಂಎನ್‌ಜಿ/2009 (ಭಾಗ)ರಲ್ಲಿ ಆದೇಶ ಹೊರಡಿಸಲಾಗಿದ್ದು, ನಂತರದಲ್ಲಿ ಸರ್ಕಾರವು ತನ್ನ ಆದೇಶ ಸಂಖ್ಯೆ: 176/ಸಿ.ಎಸ್‌ಎಸ್/2010, ದಿ: 24–01–2011 ರಲ್ಲಿ ಈ ಆದೇಶ ಹಿಂಪಡೆದಿರುತ್ತದೆ.

ಈ ಹಿನ್ನೆಲೆಯಲ್ಲಿ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಬೇಕಾಗಿರುವ ಪ್ರದೇಶ ಕೊಳಚೆ ಪ್ರದೇಶವೆಂದು ಘೋಷಣೆಯಾಗಿರುವುದಿಲ್ಲ. ಪ್ರಸಕ್ತ ಮಾರುಕಟ್ಟೆ ಆಧಾರದ ಮೇಲೆ ದರ ನಿಗಧಿಪಡಿಸಿ, ಸರ್ಕಾರದ ಅನುಮೋದನೆ ಪಡೆದು ಹಕ್ಕುಪತ್ರ ನೀಡಲು ಸರ್ಕಾರಕ್ಕೆ ಪ್ರಸ್ತಾಪಿಸಬಹುದಾಗಿರುತ್ತದೆ. ಈ ಪಟ್ಟಿಯಲ್ಲಿರುವ ಪರಿಶೀಷ್ಟ

ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಅನಧಿಕೃತದಾರರಿಗೆ ಪಾಲಿಕೆಯ ಶೇ: 22.75%ರ ಅನುದಾನದಡಿಯಲ್ಲಿ ಭರಿಸಲು ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆ ಅನುಮೋದನೆ ನಂತರ ಸರ್ಕಾರಕ್ಕೆ ಪ್ರಸ್ತಾಪಿಸಲು ಮಂಡಿಸಲಾದ ಟಿಪ್ಪಣಿ ಮೇರೆಗೆ, ತಾ.05-04-2012ರ

ಆಯುಕ್ತರ ಟಿಪ್ಪಣಿಯನ್ನು ಮಾರ್ಪಾಡಿಸಿ ಸದರೀ ಪ್ರದೇಶ ಈಗಾಗಲೇ ಕೊಳಚೆ ಪ್ರದೇಶವೆಮದು ಸರ್ಕಾರದ ಅದೇಶ ಸಂಖ್ಯೆ/ನಇ/79/ಎಂ.ಎನ್.ಜಿ/2005, ದಿ॥27-12-2005ರಲ್ಲಿ ಘೋಷಣೆ ಆಗಿರುವುದರಿಂದ ಸದರಿ ಹಾಲಿ ವಾಸಿಸುತ್ತಿರುವ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲು ಪಾಲಿಕೆಯ ಸಭೆಯಲ್ಲಿ ಅಂತಿಮ ನಿರ್ಣಯ ತೆಗೆದುಕೊಳ್ಳಬಹುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 12-04-2012ರ ನಿರ್ಣಯ.

***<u>ನಿರ್ಣಯ :-</u>*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 12-04-2012ರ ನಿರ್ಣಯವನ್ನು ಒಪ್ಪಿದೆ.**

## ***<u>ಹೆಚ್ಚುವರಿ ವಿಷಯಗಳು :-</u>***

### ***<u>01]. ವಿಷಯದ ಸಂಖ್ಯೆ :-ತೆಆಸ್ಥಾಸ/31/2012-13</u>***

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ:ಜಆ(ಜಾ)ಪಿಆರ್/2492/11-12 ದಿನಾಂಕ ಃ 26-03-2012 ರಲ್ಲಿ ವಿವರಿಸಿರುವಂತೆ, ಮೆ॥ ಎಸ್.ಎ.ಎಸ್. ಅಡ್ವರ್‌ಟೈಸರ್ಸ್ ಸಂಸ್ಥೆಯವರಿಗೆ ಸಾರ್ವಜನಿಕ ಶೌಚಾಲಯಗಳನ್ನು ಬಿ.ಓ.ಟಿ. ಆಧಾರದ ಮೇಲೆ ಪಿ.ಪಿ.ಪಿ. ಅಡಿಯಲ್ಲಿ ವಹಿಸಿಕೊಡುವ ಕುರಿತು ದಿನಾಂಕ:08.02.2011ರಂದು ಪೂಜ್ಯ ಮಹಾಪೌರರು ಈ ಕಛೇರಿಗೆ ಪತ್ರವನ್ನು ಸಲ್ಲಿಸಿ, ಮೆ॥ಎಸ್.ಎ.ಎಸ್. ಅಡ್ವರ್‌ಟೈಸರ್ಸ್ ಸಂಸ್ಥೆಯವರು ಪಾಲಿಕೆ ವ್ಯಾಪ್ತಿಯಲ್ಲಿ 50 ಸ್ಥಳಗಳಲ್ಲಿ ಸಾರ್ವಜನಿಕ ಶೌಚಾಲಯವನ್ನು ಬಿ.ಓ.ಟಿ. ಆಧಾರದ ಮೇಲೆ ಪಿ.ಪಿ.ಪಿ. ಅಡಿಯಲ್ಲಿ ನಿರ್ಮಿಸಲು ಇಚ್ಛಿಸಿದ್ದು, ಇದಕ್ಕಾಗಿ ಸದರಿ ಸಂಸ್ಥೆಯವರಿಗೆ 500 ಚದರ ಅಡಿ ಜಾಹೀರಾತನ್ನು ಅಳವಡಿಸಲು ಅನುಮತಿ ನೀಡುವಂತೆ ಕೋರಿರುವುದು ಹಾಗೂ ನಿಯಮಾನುಸಾರ ಕ್ರಮವಹಿಸುವಂತೆ ಆದೇಶಿಸಿರುವುದರಿಂದ ಪೂಜ್ಯ ಮಹಾಪೌರರ ಆದೇಶದಂತೆ ದಿನಾಂಕ:21.03.2011ರಂದು ವಿವರವಾದ ಟಿಪ್ಪಣಿಯನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಹಾಗೂ ಪಾಲಿಕೆ ಸಭೆಯ ಮುಂದೆ ಅನುಮೋದನೆಗಾಗಿ ಸಲ್ಲಿಸಿದ್ದು, ದಿನಾಂಕ:31.03.2011ರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:299/10-11 ರಲ್ಲಿ ನಿರ್ಣಯ:-"ಆಯುಕ್ತರವರ ದಿನಾಂಕ:25.03.2011ರ ಟಿಪ್ಪಣಿಯನ್ನು ಭಾಗಶಃ ಒಪ್ಪುತ್ತಾ, 10 ವರ್ಷಗಳ ಕಾಲಾವಧಿಗೆ ಪಿ.ಪಿ.ಪಿ. ಆಧಾರದ ಮೇಲೆ ಷರತ್ತುಗಳಿಗೆ ಒಳಪಟ್ಟು ನೀಡುವ ಮಾರ್ಪಾಡಿನೊಂದಿಗೆ, ಹೆಚ್ಚಿನ ಕಾಲಾವಧಿಗೆ ಅನುಮತಿ ನೀಡಲು ಸರ್ಕಾರದ ಅನುಮೋದನೆ ಕೋರಲು ಸಭೆಯು ತೀರ್ಮಾನಿಸುತ್ತಾ, ಪಟ್ಟಿಯಲ್ಲಿರುವ 54 ಸ್ಥಳಗಳಿಗೆ ಬದಲಾಗಿ, 30 ಸ್ಥಳಗಳಿಗೆ ಮಾತ್ರ ನೀಡಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿ ಪರಿಶೀಲಿಸಿ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧವಾಗಿ ಒಪ್ಪುವುದೆಂದು ತೀರ್ಮಾನಿಸಲಾಯಿತು".

ಮುಂದುವರೆದಂತೆ, ದಿನಾಂಕ:30.07.2011ರಂದು ಮತ್ತೊಮ್ಮೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮುಂದೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ಸದರಿ ವಿಷಯವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ:110/11-12 ಮತ್ತು

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ: 287/11–12ರಂತೆ ನಿರ್ಣಯವನ್ನು ತೆಗೆದುಕೊಳ್ಳಲಾಗಿರುತ್ತದೆ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ದಿನಾಂಕ:26.06.2011ರಂದು ವಿಷಯದ ಸಂಖ್ಯೆ:287/2011–12ರಲ್ಲಿ ದಿನಾಂಕ:08.02.2011ರ ಪೂಜ್ಯ ಮಹಾಪೌರರ ಪತ್ರದಲ್ಲಿ ಮೆ॥ಎಸ್.ಎ.ಎಸ್. ಅಡ್ವರ್‌ಟೈಸರ್ಸ್ ಸಂಸ್ಥೆಯವರು ನಗರದ 54 ವಿವಿಧ ಸ್ಥಳಗಳಲ್ಲಿ ಪಿ.ಪಿ.ಪಿ. ಅಡಿಯಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು ಕೋರಿದ್ದು, ಇದರ ಬಗ್ಗೆ ನಿಯಾಮಾನುಸಾರ ಕ್ರಮ ವಹಿಸಲು ತಿಳಿಸಿರುತ್ತಾರೆ. ಅದರಂತೆ, ಸಾರ್ವಜನಿಕ ಶೌಚಾಲಯಗಳನ್ನು ಬಿ.ಓ.ಟಿ. ಆಧಾರದ ಮೇಲೆ ನಿರ್ಮಿಸಲು ಕೆ.ಟಿ.ಪಿ.ಪಿ. ಕಾಯ್ದೆಯಂತೆ ಟೆಂಡರ್ ಕರೆದು ಟೆಂಡರ್‌ನಲ್ಲಿ ಯಶಸ್ವಿಯಾದ ಬಿಡ್‌ದಾರರಿಗೆ ಷರತ್ತುಗಳೊಂದಿಗೆ ಅನುಮೋದನೆ ನೀಡಬಹುದಾಗಿದೆ ಹಾಗೂ ಅದೇ ಟಿಪ್ಪಣಿಯಲ್ಲಿ ದಿನಾಂಕ : 31.03.2011ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನ ವಿಷಯದ ಸಂಖ್ಯೆ: 299/2010–11ರಂತೆ "ಆಯುಕ್ತರವರ ದಿನಾಂಕ:25.03.2011ರ ಟಿಪ್ಪಣಿಯನ್ನು ಭಾಗಶಃ ಒಪ್ಪುತ್ತಾ, 10 ವರ್ಷಗಳ ಕಾಲಾವಧಿಗೆ ಪಿ.ಪಿ.ಪಿ. ಆಧಾರದ ಮೇಲೆ ಷರತ್ತುಗಳಿಗೆ ಒಳಪಟ್ಟು ನೀಡುವ ಮಾರ್ಪಾಡಿನೊಂದಿಗೆ, ಹೆಚ್ಚಿನ ಕಾಲಾವಧಿಗೆ ಅನುಮತಿ ನೀಡಲು ಸರ್ಕಾರದ ಅನುಮೋದನೆ ಕೋರಲು ಸಭೆಯು ತೀರ್ಮಾನಿಸುತ್ತಾ, ಪಟ್ಟಿಯಲ್ಲಿರುವ 54 ಸ್ಥಳಗಳಿಗೆ ಬದಲಾಗಿ, 30 ಸ್ಥಳಗಳಿಗೆ ಮಾತ್ರ ನೀಡಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿ ಪರಿಶೀಲಿಸಿ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧವಾಗಿ ಒಪ್ಪುವುದೆಂದು" ತೀರ್ಮಾನಿಸಲಾಗಿರುತ್ತದೆ. ಸದರಿ ನಿರ್ಣಯದಂತೆ ಸಾರ್ವಜನಿಕ ಶೌಚಾಲಯವನ್ನು ನಿರ್ಮಿಸಲು ಪಿ.ಪಿ.ಪಿ. ಅಡಿಯಲ್ಲಿ ಖಾಸಗಿ ಸಂಸ್ಥೆಯವರಿಗೆ ವಹಿಸಿಕೊಡುವ ಕುರಿತು ಸರ್ಕಾರದ ಅನುಮೋದನೆ ಕೋರಿ ಪತ್ರ ಸಂಖ್ಯೆ : ಉಆ(ಜಾ)ಪಿಆರ್/1208/10–11 ದಿ : 09.03.2011 ಮತ್ತು 11.07.2011 ರಂದು

ಕೋರಲಾಗಿದ್ದು, ಸದರಿ ಪತ್ರಕ್ಕೆ ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ದಿನಾಂಕ:18.08.2011 ರಂದು ಮಾನ್ಯ ಆಯುಕ್ತರವರಿಗೆ ಪತ್ರವನ್ನು ಬರೆದು ಪಾಲಿಕೆಗೆ ಹೆಚ್ಚಿನ ವರಮಾನ ಪಡೆಯುವ ಉದ್ದೇಶದಿಂದ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು ಬಿ.ಓ.ಟಿ. ಆಧಾರದ ಮೇಲೆ ಖಾಸಗಿ ಸಂಸ್ಥೆಯವರಿಗೆ ನೀಡುವ ಬದಲು ಕೆ.ಟಿ.ಪಿ.ಪಿ ಕಾಯ್ದೆ ಪ್ರಕಾರ ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಹೆಚ್ಚು ಪ್ರಸಾರವುಳ್ಳ ಇಂಗ್ಲೀಷ್/ಕನ್ನಡ ದಿನಪತ್ರಿಕೆಗಳಲ್ಲಿ ಪ್ರಕಟಿಸಿ ಟೆಂಡರ್‌ನ್ನು ಕರೆಯಲು ಕ್ರಮ ತೆಗೆದುಕೊಳ್ಳಲು ಆದೇಶಿಸಿರುತ್ತಾರೆ.

ಈ ವಿಷಯವನ್ನು ತಮ್ಮ ಅವಗಾಹನೆಗೆ ತರುತ್ತಾ, ಅಧ್ಯಕ್ಷರು, ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿರವರು ದಿನಾಂಕ:17.03.2012ರಂದು ಈ ಕಛೇರಿಗೆ ಪತ್ರವನ್ನು ಸಲ್ಲಿಸಿ ದಿನಾಂಕ: 31.03.2011 ರಂದು ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ: 299/2010–11 ರಲ್ಲಿ ತೆಗೆದುಕೊಂಡ ತೀರ್ಮಾನದಂತೆ ಪಿ.ಪಿ.ಪಿ. ಆಧಾರದ ಮೇಲೆ ಷರತ್ತುಗಳಿಗೆ ಒಳಪಟ್ಟು ನೀಡುವುದು ಸೂಕ್ತವಾಗಿರುತ್ತದೆಂದು ಶೌಚಾಲಯಗಳನ್ನು ನಿರ್ಮಿಸುವ ಕುರಿತಾದ ಮೂಲ ಕಡತವನ್ನು ಸಮಿತಿಯ ಮುಂದೆ ಕೂಡಲೇ ಮರು ಮಂಡಿಸಲು ಕೋರಿರುವ ಹಿನ್ನೆಲೆಯಲ್ಲಿ ಈ ಮೇಲ್ಕಂಡ ಅಂಶಗಳ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯಿಂದ ಮರು ಪರಿಶೀಲನೆಗೆ ಮಂಡಿಸಿರುವ ವಿಶೇಷ ಆಯುಕ್ತರ ದಿನಾಂಕ: 26–03–2012ರ ಟಿಪ್ಪಣಿಯ ಮೇರೆಗೆ, ವಿಶೇಷ ಆಯುಕ್ತರ ದಿನಾಂಕ: 26–03–2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಚರ್ಚಿಸಲಾಗಿ, ಸದರಿ ವಿಷಯದ ಬಗ್ಗೆ ಈಗಾಗಲೇ ದಿನಾಂಕ: 31–03–2011ರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:299/10–11 ರಲ್ಲಿ ತೆಗೆದುಕೊಂಡಿರುವ ತೀರ್ಮಾನವನ್ನು ಭಾಗಶಃ ಮಾರ್ಪಡಿಸಿ, ಪ್ರಾರಂಭದಲ್ಲಿ 5 ವರ್ಷಗಳ ಅವಧಿಗೆ ಪರವಾನಿಗೆಯನ್ನು ಮಂಜೂರು ಮಾಡಲು ಹಾಗೂ ಮುಂದಿನ 10 ವರ್ಷಗಳ ಕಾಲಾವಧಿಗೆ ನವೀಕರಿಸಲು ಸರ್ಕಾರದ ಅನುಮೋದನೆ ಕೋರುವುದೆಂದು, ಉಳಿದಂತೆ ಪಾಲಿಕೆ ಸಭೆಯ ತೀರ್ಮಾನದಂತೆ

ಕ್ರಮಕೈಗೊಳ್ಳುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 12–04–2012ರ ನಿರ್ಣಯ.

***<u>ನಿರ್ಣಯ :–</u>*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 12–04–2012ರ ನಿರ್ಣಯವನ್ನು ಒಪ್ಪಿದೆ.**

## ***<u>02]. ವಿಷಯದ ಸಂಖ್ಯೆ :–ತೆಆಸ್ಥಾಸ/32/2012–13</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/361/11–12, ದಿನಾಂಕ: 11–04–2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪೀಣ್ಯ ಗ್ರಾಮ ಸೇವಾ ಸಹಕಾರ ಸಂಘ (ರಿ) ರವರು ಸಾರ್ವಜನಿಕರ & ಪಡಿತರ ಚೀಟಿದಾರರಿಗೆ ಅಹಾರ ಪದಾರ್ಥ ಮತ್ತು ಸೀಮೆ ಎಣ್ಣೆ ಹಂಚಿಕೆ ಮಾಡುತ್ತಿದ್ದು, ರಾಷ್ಟ್ರೀಯ ಹೆದ್ದಾರಿ–4ರ ರಸ್ತೆ ಅಗಲೀಕರಣಕ್ಕೆ ಸಂಘದವರ ಕಟ್ಟಡ ವಶಪಡಿಸಿಕೊಂಡಿರುವುದರಿಂದ, ವಾರ್ಡ್–38, ಹೆಚ್.ಎಂ.ಟಿ. ವಾರ್ಡ್ ಕಛೇರಿ ಇರುವ ಪಕ್ಕದಲ್ಲಿನ ಪಾಲಿಕೆಯ 720 ಚ.ಅಡಿ ಖಾಲಿ ನಿವೇಶನವನ್ನು ಗುತ್ತಿಗೆ ಆಧಾರ ನೀಡಲು ಕೋರಿರುತ್ತಾರೆ.

ವಲಯಾಧಿಕಾರಿಗಳು ಸ್ಥಳ ಪರಿಶೀಲಿಸಿ ಇದು ಪಾಲಿಕೆ ಸ್ವತ್ತಾಗಿದ್ದು, ಇದರಲ್ಲಿ 720 ಚ. ಅಡಿ ಮೂಲೆಯ ಖಾಲಿ ನಿವೇಶನವಿದ್ದು, ಹಾಲೀ ಜಮೀನು ಯಾವುದೇ ಉಪಯೋಗಕ್ಕೆ ಬರುವುದಿಲ್ಲವಾದ್ದರಿಂದ, ಸಾರ್ವಜನಿಕರಿಗೆ ಅನುಕೂಲವಾಗುವ ದೃಷ್ಟಿಯಿಂದ ನ್ಯಾಯಬೆಲೆ ಅಂಗಡಿಗೆ ಗುತ್ತಿಗೆಗೆ ನೀಡಲು ಪ್ರಸ್ತಾಪಿಸಿರುತ್ತಾರೆ. ಪಾಲಿಕೆಗೆ ಈ ನಿವೇಶನ ಅಗತ್ಯವಿಲ್ಲದಿದ್ದಲ್ಲಿ ಸಾರ್ವಜನಿಕ ಹರಾಜಿನ ಮೂಲಕ ವಿಲೇವಾರಿ ಮಾಡಲು ಅಭಿಪ್ರಾಯಿಸಲಾಗಿದೆ.

ಸರ್ಕಾರಿ ಅದೇಶ ಸಂಖ್ಯೆ: ನಅಇ129 ಟಿಎಂಬಿ 2002, ದಿನಾಂಕ: 02–06–2003 ರಲ್ಲಿನ ಸರ್ಕಾರಿ ಆದೇಶದಲ್ಲಿ ಸ್ವತ್ತು ಗುತ್ತಿಗೆಗೆ ನಿಡಲು ಅಥವಾ ಕ್ರಯ ಮಾಡಲು ಸಾರ್ವಜನಿಕ ಹರಾಜು ಮೂಲಕವೇ ಕ್ರಮವಹಿಸಲು ಆದೇಶವಿರುತ್ತದೆ.

ಈ ಹಿನ್ನೆಲೆಯಲ್ಲಿ ಪಾಲಿಕೆ ಸ್ವತ್ತನ್ನು ಹರಾಜು ಮೂಲಕ ಗುತ್ತಿಗೆಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ನಗರ ಯೋಜನೆ ಹಾಗೂ ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ದಿ॥11.04.2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ ಪಲಿಕೆ ಸ್ವತ್ತನ್ನು ಹರಾಜು ಮೂಲಕ ಕ್ರಯ ಮಾಡುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 17–04–2012ರ ನಿರ್ಣಯ.

***<u>ನಿರ್ಣಯ :–</u>*** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 17–04–2012ರ ನಿರ್ಣಯವನ್ನು ಒಪ್ಪಿದೆ.**

## ***<u>03]. ವಿಷಯದ ಸಂಖ್ಯೆ :–ತೆಆಸ್ಥಾಸ/33/2012–13</u>***

**<u>ನಿರ್ಣಯ :–</u>** 2011–12ನೇ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.1,275–00 ಲಕ್ಷಗಳ ಪೈಕಿ, ದಿನಾಂಕ : 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12 ರಂತೆ 185 ಸಂಘ/ಸಂಸ್ಥೆಗಳಿಗೆ ರೂ.1,158–50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿದ ರೂ.116.50 ಲಕ್ಷಗಳಿಗಿಂತ ಹೆಚ್ಚಾಗಿ ಇತರೇ ಸಂಘ/ಸಂಸ್ಥೆಗಳಿಗೆ ಅನುದಾನವನ್ನು ಮಂಜೂರು ಮಾಡಲಾಗಿರುವುದು ತಿಳಿದುಬಂದಿರುತ್ತದೆ. 2011–12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸದ ಸಂಘ/ಸಂಸ್ಥೆಗಳಿಂದ ಬೇಡಿಕೆ ಹಾಗೂ ಆಯುಕ್ತರಿಂದ ಪ್ರಸ್ತಾವನೆಗಳು ಸಮಿತಿಯ ತೀರ್ಮಾನಕ್ಕಾಗಿ ಬಂದ ಹಿನ್ನೆಲೆಯಲ್ಲಿ ಹೆಚ್ಚುವರಿಯಾಗಿ ಅನುದಾನವನ್ನು ಮಂಜೂರು ಮಾಡಲಾಗಿದ್ದು, 185 ಸಂಘ/ಸಂಸ್ಥೆಗಳಿಗೆ ಮೀಸಲಿರಿಸಿರುವ ಅನುದಾನದ ಪೂರ್ಣ ಮೊತ್ತ ಬಿಡುಗಡೆಯಾಗದೆ ಇದ್ದು 2011–12ನೇ ಸಾಲಿನ ಆರ್ಥಿಕ ವರ್ಷ

ಮುಗಿದಿರುವುದರಿಂದ, 185 ಸಂಘ/ಸಂಸ್ಥೆಗಳಿಗೆ ಮೀಸಲಿಸಿರುವ ಅನುದಾನದಲ್ಲಿನ ಉಳಿಕೆ ಮೊತ್ತದಲ್ಲಿ ಹೆಚ್ಚುವರಿಯಾಗಿರುವ ಮೊತ್ತವನ್ನು ಮರು ಹೊಂದಾಣಿಕೆ ಮಾಡಿಕೊಂಡು ಭರಿಸುವುದೆಂದು ಸಮಿತಿಯು ತೀರ್ಮಾನಿಸಿತು.

## 04]. ವಿಷಯದ ಸಂಖ್ಯೆ :–ತೆಆಸ್ಥಾಸ/34/2012–13

**ನಿರ್ಣಯ :–** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸ್ವತ್ತುಗಳನ್ನು ಗುರುತಿಸುವ ಸಲುವಾಗಿ ಈಗಾಗಲೇ ಪಿ.ಐ.ಡಿ ಸಂಖ್ಯೆಯನ್ನು ನೀಡಲಾಗುತ್ತಿದ್ದು, ಪಿ.ಐ.ಡಿ ಸಂಖ್ಯೆಯಲ್ಲಿ ವಾರ್ಡ್ ಸಂಖ್ಯೆ, ರಸ್ತೆ ಸಂಖ್ಯೆ ಹಾಗೂ ಸ್ವತ್ತುಗಳ ಸಂಖ್ಯೆ ಸೇರಿರುವುದರಿಂದ ಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಳ್ಳುವ ಎಲ್ಲಾ ಕಾಮಗಾರಿಗಳ ವಿವರಗಳನ್ನು ರಿಜಿಸ್ಟರ್‌ನಲ್ಲಿ ದಾಖಲು ಮಾಡಿ ಪ್ರತಿ ವಾರ್ಡ್ ಕಛೇರಿಯಲ್ಲಿ ನಿರ್ವಹಣೆ ಮಾಡುವುದನ್ನು ಕಡ್ಡಾಯ ಗೊಳಿಸುವುದಲ್ಲದೇ ರಿಜಿಸ್ಟರ್‌ನಲ್ಲಿ ರಸ್ತೆ ಪ್ರಾರಂಭದಿಂದ ಕೊನೆಯವರೆಗಿನ ಪಿ.ಐ.ಡಿ ಸಂಖ್ಯೆಯನ್ನು ನಮೂದಿಸುವುದನ್ನು ಕಡ್ಡಾಯಗೊಳಿಸಿದಲ್ಲಿ ಒಂದೇ ಕಾಮಗಾರಿಯನ್ನು ಹಲವು ಬಾರಿ ಕೈಗೊಳ್ಳುವುದನ್ನು ತಪ್ಪಿಸಬಹುದಾಗಿರುತ್ತದೆ. ಇದರಿಂದ ಪಾಲಿಕೆಗೆ ಆರ್ಥಿಕ ನಷ್ಟವುಂಟಾಗುವುದನ್ನು ತಡೆಯುವುದಲ್ಲದೆ ಪಾಲಿಕೆಯ ಆಡಳಿತಾತ್ಮಕ ಹಾಗೂ ಆರ್ಥಿಕ ಶಿಸ್ತಿಗೆ ಒತ್ತು ನೀಡಿದಂತಾಗುತ್ತದೆ. ಇನ್ನೂ ಮುಂದೆ ಜಿ.ಐ.ಎಸ್ ಆಧಾರಿತ ರಸ್ತೆ ಇತಿಹಾಸ ಮತ್ತು ರಸ್ತೆ ಇತಿಹಾಸ ನಮೂನೆಗಳನ್ನು ಪೂರ್ಣಪ್ರಮಾಣದಲ್ಲಿ ಕಡ್ಡಾಯವಾಗಿ ದಾಖಲಿಸತಕ್ಕದು.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪ್ರತಿ ವಾರ್ಡ್ ಕಛೇರಿಗಳಲ್ಲಿ ಸಂಬಂಧಪಟ್ಟ ಅಭಿಯಂತರರುಗಳು ಕಾಮಗಾರಿ ರಿಜಿಸ್ಟರ್‌ಗಳನ್ನು ಕಡ್ಡಾಯವಾಗಿ ನಿರ್ವಹಣೆ ಮಾಡುವುದರ ಜೊತೆಗೆ ಅದರಲ್ಲಿ ಆ ರಸ್ತೆಗೆ ಸಂಬಂಧಿಸಿದ ಪಿ.ಐ.ಡಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವಂತೆ ಕಟ್ಟುನಿಟ್ಟಿನ ಆದೇಶವನ್ನು ಹೊರಡಿಸುವುದೆಂದು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿತು.

## 05]. ವಿಷಯದ ಸಂಖ್ಯೆ :–ತೆಆಸ್ಥಾಸ/35/2012–13

**ಪ್ರಸ್ತಾವನೆ :–** ಶ್ರೀ. ಬಿ.ಆರ್.ನಂಜುಂಡಪ್ಪ, ಮಾನ್ಯ ಆಡಳಿತ ಪಕ್ಷದ ನಾಯಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಸಲ್ಲಿಸಿರುವ ಪತ್ರವನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಪತ್ರದಲ್ಲಿ ತಮ್ಮ ಪ್ರತಿನಿಧಿಕೆಯ ವಾರ್ಡ್–17, ಜೆ.ಪಿ.ಪಾರ್ಕ್ ವಿಭಾಗದ ವ್ಯಾಪ್ತಿಯಲ್ಲಿರುವ ಈ ಕೆಳಕಂಡ ಸಂಘ/ಸಂಸ್ಥೆಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

| ಕ್ರ.ಸಂ. | ಸಂಘ/ಸಂಸ್ಥೆಗಳ ಹೆಸರು ಮತ್ತು ವಿಳಾಸ | ಮೀಸಲಿಟ್ಟಿರುವ ಅನುದಾನ (ರೂ.ಲಕ್ಷಗಳಲ್ಲಿ) | ಆಯವ್ಯಯ ಪುಸ್ತಕದ ವಿವರ |
|---|---|---|---|
| 01 | ಶ್ರೀ ಧರ್ಮರಾಯ ಸ್ವಾಮಿ ದೇವಸ್ಥಾನ (ರಿ), ಯಶವಂತಪುರ | 3.00 | ಅನುಬಂಧ–2, ಕ್ರ.ಸಂ.43 ರಂತೆ |
| 02 | ಶ್ರೀ ವೆಂಕಟೇಶ್ವರ ಸ್ವಾಮಿ, ಶ್ರೀ ದೊಡ್ಡಮ್ಮ, ಶ್ರಿ ಮಾರಿಯಮ್ಮ ಮತ್ತು ಶ್ರೀ ಕಾಳಿಕಾಂಬ ದೇವಸ್ಥಾನ ಟ್ರಸ್ಟ್ (ರಿ), ಬಿ.ರಾಮಯ್ಯ ಕಾಲೋನಿ | 3.00 | ಅನುಬಂಧ–2, ಕ್ರ.ಸಂ.44 ರಂತೆ |
| 03 | ನೃತ್ಯ ಲಹರಿ ಕಲಾ ಕೇಂದ್ರ, | 2.00 | ಅನುಬಂಧ–2, ಕ್ರ.ಸಂ.130 ರಂತೆ |
| 04 | ಬಿ.ಇ.ಎಲ್. ಆಶಾಂಕುರ ಸಿಲ್ವರ್ ಜ್ಯೂಬಿಲಿ ಟ್ರಸ್ಟ್ | 5.00 | ಅನುಬಂಧ–2, ಕ್ರ.ಸಂ.42 ರಂತೆ |

(ಸಂಘ/ಸಂಸ್ಥೆಗಳು ಕೋರಿ ಸಲ್ಲಿಸಿರುವ ಮನವಿಗಳನ್ನು ಇದರೊಂದಿಗೆ ಲಗತ್ತಿಸಿದೆ)

**ನಿರ್ಣಯ :–** ಮೇಲ್ಕಂಡ ಸಂಘ/ಸಂಸ್ಥೆಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

## *06]. ವಿಷಯದ ಸಂಖ್ಯೆ :–ತೆಆಸ್ಥಾಸ/36/2012–13*

**ಪ್ರಸ್ತಾವನೆ :–** ಶ್ರೀ. ಎಸ್.ಕೆ.ನಟರಾಜ, ಮಾಜಿ ಮಹಾಪೌರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಸಲ್ಲಿಸಿರುವ ಪತ್ರವನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಪತ್ರದಲ್ಲಿ ತಮ್ಮ ಪ್ರತಿನಿಧಿಕೆಯ ವಾರ್ಡ್–178, ಸಾರಕ್ಕಿ ವಿಭಾಗದ ವ್ಯಾಪ್ತಿಯಲ್ಲಿರುವ ಈ ಕೆಳಕಂಡ ಸಂಘ/ಸಂಸ್ಥೆಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

| ಕ್ರ.ಸಂ. | ಸಂಘ/ಸಂಸ್ಥೆಗಳ ಹೆಸರು ಮತ್ತು ವಿಳಾಸ | ಮೀಸಲಿಟ್ಟಿರುವ ಅನುದಾನ (ರೂ.ಲಕ್ಷಗಳಲ್ಲಿ) | ಆಯವ್ಯಯ ಪುಸ್ತಕದ ವಿವರ |
|---|---|---|---|
| 01 | ಶ್ರೀ ಪ್ರಸ್ನನ ಆಂಜನೇಯ ಸ್ವಾಮಿ ಟ್ರಸ್ಟ್ (ರಿ), 13ನೇ ಅಡ್ಡರಸ್ತೆ, ಸಾರಕ್ಕಿ ಗ್ರಾಮ, ಜೆ.ಪಿ.ನಗರ 1ನೇ ಹಂತ, ಬೆಂಗಳೂರು–78 | 10.00 | ಅನುಬಂಧ–2, ಕ್ರ.ಸಂ.68 ರಂತೆ |
| 02 | ಜೆ.ಪಿ.ನಗರ ಸಾಂಸಕೃತಿಕ ಮತ್ತು ಕ್ಷೇಮಾಭಿವೃದ್ಧಿ ಸಂಘ, 11ನೇ ಬಿ ಅಡ್ಡರಸ್ತೆ, ಜೆ.ಪಿ.ನಗರ 1ನೇ ಹಂತ, ಬೆಂಗಳೂರು–78 | 10.00 | ಅನುಬಂಧ–2, ಕ್ರ.ಸಂ.65 ರಂತೆ |
| 03 | ಪ್ರೇಮಾಂಜಲಿ ಎಜುಕೇಷನ್ ಟ್ರಸ್ಟ್, ನಂ.ಎನ್–3, ಎಲ್.ಐ.ಸಿ. ಪಾಲಿಸಿಹೋಲ್ಡರ್ಸ್ ಕಾಲೋನಿ, 24ನೆ ಮುಖ್ಯರಸ್ತೆ, ಜೆ.ಪಿ.ನಗರ 1ನೇ ಹಂತ, ಬೆಂಗಳೂರು–78 | 25.00 | ಅನುಬಂಧ–2, ಕ್ರ.ಸಂ.67 ರಂತೆ |

(ಸಂಘ/ಸಂಸ್ಥೆಗಳು ಕೋರಿ ಸಲ್ಲಿಸಿರುವ ಮನವಿಗಳನ್ನು ಇದರೊಂದಿಗೆ ಲಗತ್ತಿಸಿದೆ)

**ನಿರ್ಣಯ :–** ಮೇಲ್ಕಂಡ ಸಂಘ/ಸಂಸ್ಥೆಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

## *07]. ವಿಷಯದ ಸಂಖ್ಯೆ :–ತೆಆಸ್ಥಾಸ/37/2012–13*

**ಪ್ರಸ್ತಾವನೆ :–** ಪ್ರಧಾನ ಕಾರ್ಯದರ್ಶಿ **"ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ"** #.26, ರೆಡ್ ಕ್ರಾಸ್ ಭವನ, ಒಂದನೇ ಮಹಡಿ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001 ರವರು ತಮ್ಮ ಸಂಸ್ಥೆಯು ಹಮ್ಮಿಕೊಳ್ಳುತ್ತಿರುವ ಆರೋಗ್ಯ ಕಾರ್ಯಕ್ರಮಗಳಿಗಾಗಿ 2011–12ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಿರುವ ರೂ.5.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ. (ಪತ್ರ ಲಗತ್ತಿಸಿದೆ)

**ನಿರ್ಣಯ :–** **"ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ"** #.26, ರೆಡ್ ಕ್ರಾಸ್ ಭವನ, ಒಂದನೇ ಮಹಡಿ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001 ರವರು ಬಡ ರೋಗಿಗಳ ಚಿಕಿತ್ಸೆ, ವಿಕಲಚೇತನರಿಗೆ ಸಾಧನ ಸಲಕರಣೆಗಳನ್ನು ವಿತರಿಸಲು ಹಾಗೂ ಇನ್ನಿತ್ತರೇ ಆರೋಗ್ಯ ಕಾರ್ಯಕ್ರಮಗಳಿಗಾಗಿ, 2011–12ನೇ ಸಾಲಿನ ಆಯವ್ಯಯದಲ್ಲಿ ಸಂಘ/ಸಂಸ್ಥೆಗಳಿಗೆ ಅನುದಾನ ನಿಗಧಿಪಡಿಸಿರುವ ಅನುಬಂಧ–2ರ ಪಟ್ಟಿಯಲ್ಲಿನ ಕ್ರಮಸಂಖ್ಯೆ:107 ರಲ್ಲಿ ಕಾಯ್ದಿರಿಸಲಾಗಿರುವ ರೂ.5,00,000/– (ಐದು ಲಕ್ಷ ಮಾತ್ರ) ಗಳ ಅನುದಾನ ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

## *08]. ವಿಷಯದ ಸಂಖ್ಯೆ :-ತೆಆಸ್ಥಾಸ/38/2012-13*

**ಪ್ರಸ್ತಾವನೆ** :- ವಾಸವಿ ಯುವಜನ ಸಂಘದ ವತಿಯಿಂದ ಕೈಗೊಳ್ಳಲಾಗುತ್ತಿರುವ **"ಶಿವರಾತ್ರಿ ಮಹೋತ್ಸವ"** ವನ್ನು ಶ್ರೀ ವಾಸವಿ ದೇವಸ್ಥಾನ, ಮಲ್ಲೇಶ್ವರಂ, ಬೆಂಗಳೂರು-560003 ಇಲ್ಲಿ ದೇವತಾ ಪೂಜಾ ವಿಧಿ ವಿಧಾನಗಳು, ನಗೆಹಬ್ಬ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಬಾರಿ ವಿಜೃಂಭಣೆಯಿಂದ ದಿನಾಂಕ : 20-02-2012 ರಂದು ಆಚರಿಸಲಾಗಿದ್ದು 2011-12ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಿರುವ ರೂ.10.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ. (ಪತ್ರ ಲಗತ್ತಿಸಿದೆ)

> **ನಿರ್ಣಯ** :- ವಾಸವಿ ಯುವಜನ ಸಂಘದ ವತಿಯಿಂದ ಕೈಗೊಳ್ಳಲಾಗುತ್ತಿರುವ **"ಶಿವರಾತ್ರಿ ಮಹೋತ್ಸವ"** ಕಾರ್ಯಕ್ರಮಗಳಿಗಾಗಿ 2011-12ನೇ ಸಾಲಿನ ಆಯವ್ಯಯದಲ್ಲಿ ಸಂಘ/ಸಂಸ್ಥೆಗಳಿಗೆ ಅನುದಾನ ನಿಗದಿಪಡಿಸಿರುವ ಅನುಬಂಧ-2ರ ಪಟ್ಟಿಯಲ್ಲಿನ ಕ್ರಮಸಂಖ್ಯೆ:9 ರಲ್ಲಿ ಕಾಯ್ದಿರಿಸಲಾಗಿರುವ ರೂ.10,00,000/- (ಹತ್ತು ಲಕ್ಷ ಮಾತ್ರ) ಗಳ ಅನುದಾನ ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.
>
> [

## *09]. ವಿಷಯದ ಸಂಖ್ಯೆ :-ತೆಆಸ್ಥಾಸ/39/2012-13*

**ಪ್ರಸ್ತಾವನೆ :- ಮೆ॥. ಕನೆಕ್ಟ್ ಕಮ್ಯೂನಿಕೇಷನ್, ಮೆ॥.ಅವಿನಾಶಿಆಡ್ಸ್, ಲಕ್ಷ್ಮಿ ಎಂಟರ್ ಪ್ರೈಸಸ್ಸ್, ಲೋಬ್ ಮೀಡಿಯಾ** ಮತ್ತು **ಅಮೃತ್ ಅಡ್ವರ್‌ಟೈಸಿಂಗ್** ಎಂಬ ಸಂಸ್ಥೆಗಳು ತಮ್ಮ ಸಂಸ್ಥೆಗಳ ಜಾಹೀರಾತು ಪ್ರದರ್ಶನಕ್ಕಾಗಿ ಹೋರ್‌ಡಿಂಗ್ಸ್‌ಗಳನ್ನು ಅಳವಡಿಸಿಕೊಳ್ಳುಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೊಸ ಜಾಹೀರಾತು ಬೈಲಾಗಳ ನಿಯಮ/ಷರತ್ತುಗಳಿಗೆ, ಒಳಪಟ್ಟು ಈ ಸಂಬಂಧ ಪಾಲಿಕೆಯಿಂದ ನಿಗದಿಪಡಿಸಲಾಗುವ ಎಲ್ಲಾ ರೀತಿಯ ಶುಲ್ಕ/ಗುತ್ತಿಗೆ ಹಣವನ್ನು ಪಾವತಿಸಲು ಬದ್ಧರಾಗಿರುವುದಾಗಿ, ಹೋರ್‌ಡಿಂಗ್ಸ್‌ಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಅಳವಡಿಸಿಕೊಳ್ಳುಲು ಅನುಮತಿ ಕೋರಿರುತ್ತಾರೆ. (ಪತ್ರಗಳನ್ನು ಲಗತ್ತಿಸಿದೆ)

[

### *ಅವಿನಾಶಿ ಆಡ್ಸ್ :-*

| Sl.No | Size of the Hoardings | Location | Number of Hoardings |
|---|---|---|---|
| 01 | 40 X 20 | Byatarayanapura Site No.274 | 01 |
| 02 | 40 X 20 | Nagawara Site No.854/1-2 | 02 |
| 03 | 30 X 15 | Marathahalli Site No.21 | 01 |
| 04 | 24 X 12 | Domlur Flyover Site No.257 | 01 |
| 05 | 30 X 15 | Kengeri Site No.119/2(48/3) | 01 |
| 06 | 30 X 15 | Peenya dasarahalli Site No.17/4A | 02 |
| 07 | 30 X 15 | Kanakapura Site No.15 | 02 |

### *ಅಮೃತ್ ಅಡ್ವರ್‌ಟೈಸಿಂಗ್:-*

| Sl.No | Size of the Hoardings | Location | Number of Hoardings |
|---|---|---|---|
| 01 | 30 X 15 | #.28/1, Hennur Main Road, Kalyananagar, Bengaluru. | 08 |
| 02 | 30 X 15 | #.50/8A, JNR Complex, Gubbi Cross Kotthanur, Bengaluru. | 02 |
| 03 | 40 X 20 | #.50/8A, JNR Complex, Gubbi Cross Kotthanur, Bengaluru. | 02 |

### *ಲಕ್ಷ್ಮಿ ಎಂಟರ್ ಪ್ರೈಸಸ್:-*

| Sl.No | Size of the Hoardings | Location | Number of Hoardings |
|---|---|---|---|

| | | | |
|---|---|---|---|
| 01 | 30 X 15 | Channakeswara High School, Channakeshwaranagar, parapana agrahara Jail Junc, Hosur Rd. | 04 |
| 02 | 30 X 15 | #.75, Veeranna palya, Veeranna Garden House, Nagavara Ring Rd, Nagavara, Bengaluru. | 02 |

***ಕನೆಕ್ಟ್ ಕಮ್ಯೂನಿಕೇಷನ್:–***

| Sl.No | Size of the Hoardings | Location | Number of Hoardings |
|---|---|---|---|
| 01 | 24 X 40 | No. 18 Tumkur Road, Yeshwantpur (Gopal Theater), Bangalore-560002 | 01 |
| 02 | 24 X 12 | No. 2, Janardhan Corporation, Residency road Bangalore. | 01 |
| 03 | 24 X 12 | No. 27E, Sankey road – Cunningham road, high grounds, Bangalore-560001. | 01 |
| 04 | 24 X 40 | Chamundi Hotels Pvt.ltd, Palace compound, Jayamahal road, Bangalore | 01 |
| 05 | 24 X 12 | No. 43/1, Mathikere, YMS Complex, Bangalore | 01 |
| 06 | 24 X 12 | No. 3, Curve Road, Shivajinagr, Bangalore | 01 |
| 07 | 24 X 12 | No. 17, Tumkur Road, Yeshwanthpur, (YMS Kalyana Mantapa), Bangalore-560024 | 01 |
| 08 | 24 X 40 | No. 1106/01/02, Bellary Road, Hebbal, Kempapura, Bangalore-560024 | 01 |
| 09 | 24 X 12 | No. 3, Sharada Krupa, Achaiah Chetty Layout, Mekhri Circle, Bangalore-560080 | |

***ಲೋಬ್ ಮೀಡಿಯಾ:–***

| Sl.No | Size of the Hoardings | Location | Number of Hoardings |
|---|---|---|---|
| 01 | 40 X 20 | Jeevan Sandhya, Kanakapura Road | 01 |
| 02 | 40 X 20 | Jeevan Sandhya, Kanakapura Road | 01 |
| 03 | 15 X 20 | No.56, 32nd Cross 11th Main Jayanagar, 4th blk, Bangalore-560076 | 01 |

**ನಿರ್ಣಯ :–** ಆಯುಕ್ತರ ಸುತ್ತೋಲೆ ಸಂಖ್ಯೆ :ಜಆ(ಜಾ)/ಪಿಆರ್/88/08–09, ದಿನಾಂಕ : 29.11.2008ನ್ನು ಮಾರ್ಪಡಿಸುತ್ತಾ, **ಮೆ॥. ಕನೆಕ್ಟ್ ಕಮ್ಯೂನಿಕೇಷನ್, ಮೆ॥. ಅವಿನಾಶಿ ಆಡ್ಸ್, ಲಕ್ಷ್ಮಿ ಎಂಟರ್ ಪ್ರೈಸಸ್, ಲೋಬ್ ಮೀಡಿಯಾ** ಮತ್ತು **ಅಮೃತ್ ಅಡ್ವರ್ಟೈಸಿಂಗ್**'', ಸಂಸ್ಥೆಗಳು ತಮ್ಮ ಸಂಸ್ಥೆಗಳ ಜಾಹೀರಾತು ಪ್ರದರ್ಶನಕ್ಕಾಗಿ ಹೋರ್ಡಿಂಗ್ಸ್‌ಗಳನ್ನು ಈ ಮೇಲ್ಕಂಡ ಸ್ಥಳಗಳಲ್ಲಿ ಅಳವಡಿಸಿಕೊಳ್ಳಲು ಅನುಮತಿ ಕೋರಿರುವ ಹಿನ್ನೆಲೆಯಲ್ಲಿ ಪಾಲಿಕೆಯ ಆದಾಯದ ಹಿತದೃಷ್ಟಿಯಿಂದ ಹೊಸ ಜಾಹೀರಾತು ಬೈಲಾಗಳ ಷರತ್ತುಗಳಿಗೆ ಒಳಪಟ್ಟು ಶುಲ್ಕಗಳನ್ನು ನಿಗಧಿಪಡಿಸಿ ಅನುಮತಿ ನೀಡವುದೆಂದು ಸಮಿತಿಯು ತೀರ್ಮಾನಿಸಲಾಯಿತು.

## *10]. ವಿಷಯದ ಸಂಖ್ಯೆ :–ತೆಆಸ್ಥಾಸ/40/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ: 16–04–2012 ರಲ್ಲಿ ವಿವರಿಸಿರುವಂತೆ, Strenghthening, Widening and asphalating of Roads in Dasarahalli, Mahadevapura, and Byatarayanapura zones ಕಾಮಗಾರಿಗೆ 2008–09ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ1741 ಅಡಿ ವರ್ಕ್‌ಕೋಡ್ ನೀಡಲಾಗಿದ್ದು, ಮರುನವೀಕರಣಕ್ಕೆ ರೂ.4977.69 ಲಕ್ಷಗಳ ಅನುದಾನ ಅವಶ್ಯವಿದ್ದು, ಇತರೇ ಮೂಲಭೂತ

ಸೌಕರ್ಯಗಳ ಶಾಖೆಯ ಲೆಕ್ಕಶೀರ್ಷಿಕೆಗಳಡಿ ಮುಂದುವರೆದ ಕಾಮಗಾರಿಗಳ ಅನುದಾನದಲ್ಲಿ ಉಳಿಕೆಯಾಗುವ ಮೊತ್ತದಲ್ಲಿ ಮರುಹೊಂದಾಣಿಕೆ ಮಾಡಿಕೊಂಡು ಮರು ನವೀಕರಿಸಲು, ಕರ್ನಾಟಕ ಮುನಿಸಿಪಲ್ ಕಾಯಿದೆ 1976 ಸೆಕ್ಷನ್ 172 ರ ಪ್ರಕಾರ ಮರುಹೊಂದಾಣಿಕೆ (Re-appropriation) ಪ್ರಸ್ಥಾವನೆಯನ್ನು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :– ದಿನಾಂಕ : 16–04–2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಿದೆ.***

## ***11]. ವಿಷಯದ ಸಂಖ್ಯೆ :–ತೆಆಸ್ಥಾಸ/41/2012–13***

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಎಲ್ಎಕ್ಯೂ/ಸಿಆರ್/15/2011–12, ದಿನಾಂಕ ಃ 16–11–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ–160ರ BEML ಬಡಾವಣೆಯ ಜವಾಹರಲಾಲ್ ನೆಹರು ಮುಖ್ಯ ರಸ್ತೆಯ Ideal Homes ಬಡಾವಣೆಯ 12ನೇ E ಅಡ್ಡರಸ್ತೆ ಸಂಧಿಸುವ ರಸ್ತೆಯಲ್ಲಿ ಅಂತಿಮಗೊಂಡಿದ್ದು, ಮಧ್ಯದಲ್ಲಿ ಮಳೆ ನೀರುಗಾಲುವೆ ಇದ್ದು, ಸದರಿ ಸ್ಥಳದಲ್ಲಿ ಮಳೆ ನೀರು ಚರಂಡಿಯನ್ನು ಅಭಿವೃದ್ಧಿಪಡಿಸಿ ಆರ್.ಸಿ.ಸಿ ಬಾಕ್ಸ್ ಕಲ್ವರ್ಟ್ ನಿರ್ಮಿಸುವುದು ಸೇರಿದಂತೆ ಪೂರ್ವ ಭಾಗದ ನಿವೇಶನಗಳಲ್ಲಿನ ಭಾಗಶ: ಸುಮಾರು 6.505 ಚ. ಅಡಿ ವಿಸ್ತೀರ್ಣವನ್ನು ಉಪಯೋಗಿಸಿಕೊಂಡು ಸಂಪರ್ಕ ರಸ್ತೆ ನಿರ್ಮಿಸಲು ಸದರಿ ಸ್ವತ್ತನ್ನು ಪಾಲಿಕೆಗೆ ಭೂಸ್ವಾಧೀನಪಡಿಸಿಕೊಡಲು ಕೋರಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ರಾಜರಾಜೇಶ್ವರಿನಗರ ವಲಯ ರವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಕಾರ್ಯಪಾಲಕ ಅಭಿಯಂತರರು (ಯೋಜನೆ), ಮುಖ್ಯ ಅಭಿಯಂತರರು, ಆರ್. ಆರ್. ನಗರ ಮತ್ತು ಅಪರ ಆಯುಕ್ತರು, ಆರ್. ಆರ್. ನಗರ ಶಿಫಾರಸ್ಸು ಮಾಡಿ ಕಳುಹಿಸಿರುತ್ತಾರೆ.

ಪಾಲಿಕೆಯ ಉಪ ಆಯುಕ್ತರು (ಭೂಸ್ವಾಧೀನ) ರವರು ದಿನಾಂಕ:11–08–2011 ರಂದು ರಾಜರಾಜೇಶ್ವರಿನಗರ ವಲಯದ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರೊಂದಿಗೆ ಪ್ರಸ್ತಾಪಿತ ಕಾಮಗಾರಿಯ ಸ್ಥಳ ಪರಿಶೀಲನೆ ಮಾಡಿರುತ್ತಾರೆ. ಪ್ರಸ್ತಾಪಿತ ಸ್ಥಳದಲ್ಲಿ ಇರುವ ಮಳೆ ನೀರು ಚರಂಡಿಯಲ್ಲಿ ಮಳೆ ನೀರು ಪೂರ್ವದ ಕಡೆಯಿಂದ ಹರಿದು ಬರುತ್ತಿದ್ದು, ಈ ಮಳೆ ನೀರಿನ ಚರಂಡಿಗೆ ಹಾಲಿ Deckslab ಅಳವಡಿಸಲಾಗಿದೆ. ಇದರ ಅಳತೆ ಕನಿಷ್ಠ 3.5 ಮೀಟರ್ ಇರಬೇಕಾಗಿದ್ದು, ರಸ್ತೆ ಸೇರುವ ಕಡೆ 2 ಮೀಟರ್‌ಗೆ ಕಡಿಮೆ ಮಾಡಿ ನಿರ್ಮಿಸಲಾಗಿದೆ. ಈ ಹಿಂದೆ ಸೋಸೈಟಿ ರವರು ಚರಂಡಿ ಮತ್ತು ರಸ್ತೆಯನ್ನು ನಿರ್ಮಾಣ ಮಾಡುವಾಗಲೇ ಕಿರಿದಾಗಿ ಮಾಡಲಾಗಿರುವುದರಿಂದ, ದಕ್ಷಿಣದ ಮೂಲೆಯಲ್ಲಿರುವ ನಿವೇಶನದಲ್ಲಿ 2175 ಚ.ಅ ಜಾಗವನ್ನು ಭೂಸ್ವಾಧೀನಪಡಿಸಿಕೊಂಡು, ಉತ್ತರದಿಂದ ದಕ್ಷಿಣಕ್ಕೆ ಇರುವ ಹಾಲಿ ರಸ್ತೆಯನ್ನು Deckslab ಪ್ರದೇಶದಲ್ಲಿ ಅಗಲ ಮಾಡಿ ಪೂರ್ವದಿಂದ ಪಶ್ಚಿಮಕ್ಕೆ ಹರಿಯುವ ಮಳೆ ನೀರುಗಾಲುವೆಯನ್ನು (SWD) ಪೂರ್ವದ ಕಡೆ ಹಾಲಿ ಇರುವ ರಸ್ತೆಯ ಅಗಲಕ್ಕೆ ಸಮನಾದ ಅಳತೆಯ ಪಟ್ಟಿ 3.5 ಮೀಟರ್ ಇರುವುದನ್ನು ಹಾಗೆಯೇ ಪಶ್ಚಿಮದ ಕಡೆ ಹೊಸ Deckslab ನಿರ್ಮಿಸಿ ಪೂರ್ವದಿಂದ ಬರುವ ನೀರು ಸರಾಗವಾಗಿ ಹರಿಯಲು ಅವಕಾಶ ಕಲ್ಪಿಸಬಹುದಾಗಿದೆ. ಹಾಗೆಯೇ BEML ಬಡಾವಣೆ, 3ನೇ ಹಂತದ ಜವಾಹರಲಾಲ್ ನೆಹರು ಮುಖ್ಯರಸೆಯಿಂದ Ideal Homes ಬಡಾವಣೆಯ 12ನೇ E ಅಡ್ಡರಸ್ತೆಗೆ ಹಾಲಿ ಇರುವಂತೆ 60 ಅಡಿ ಅಗಲದ Deck ನಿರ್ಮಿಸಿದಲ್ಲಿ ಜವಾಹರಲಾಲ್ ನೆಹರು ರಸ್ತೆಯಿಂದ Ideal Homes ಬಡಾವಣೆಯ 12ನೇ ಇ ಅಡ್ಡರಸ್ತೆಗೆ ಬಸ್‌ಗಳು ಹಾಗೂ ಇತರೆ ದೊಡ್ಡ ವಾಹನಗಳು ಸುಗಮವಾಗಿ ಚಲಿಸಲು ಅವಕಾಶವಾಗುತ್ತದೆಂದು, ಮೊದಲು ಅಗತ್ಯವಿರುವ ನಿವೇಶನವನ್ನು ಭೂಸ್ವಾಧೀನ ಪಡೆದು ನಂತರ ಕಾಮಗಾರಿ ಪ್ರಾರಂಭಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟಿರುತ್ತಾರೆ. ಇದನ್ನು ಒಪ್ಪಲಾಗಿದೆ. ಭೂಸ್ವಾಧೀನ ಪ್ರಸ್ತಾಪಿತ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮೂಲ ಹಕ್ಕು ದಾಖಲೆಗಳು/ಖಾತಾ ಇತ್ಯಾದಿಗಳನ್ನು ಸಲ್ಲಿಸಿರುವುದಿಲ್ಲ. ಇವುಗಳನ್ನು ಭೂಸ್ವಾಧೀನ ಕಾಯ್ದೆಯ ಕಲಂ 5 (ಎ) ವಿಚಾರಣೆ ಹಾಗೂ ಜಂಟಿ ಅಳತೆ ಸಮಯದಲ್ಲಿ ಪರಿಶೀಲಿಸಬೇಕಾಗಿರುತ್ತದೆ. ಅಪರ ಆಯುಕ್ತರು, ಆರ್. ಆರ್. ನಗರ ವಲಯ, ಕಾರ್ಯಪಾಲಕ ಅಭಿಯಂತರರು (ಯೋಜನೆ), ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯ ರವರು ಸಲ್ಲಿಸಿರುವ ಪ್ರಸ್ತಾವನೆ, ಭೂಮಾಪಕರು ಸಲ್ಲಿಸಿರುವ ನಕ್ಷೆಯಲ್ಲಿ ನಮೂದಿಸಿರುವ ವಿವರಗಳು ಹಾಗೂ ಬೆಂಗಳೂರು

ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ಬಡಾವಣೆ ನಕ್ಷೆಯಂತೆ ಪ್ರಸ್ತಾಪಿತ ಕಾಮಗಾರಿಗಾಗಿ ಅವಶ್ಯವಿರುವ ಸ್ವತ್ತುಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಗ್ರಾಮದ ಹೆಸರು | ವಾರ್ಡ್ ನಂ. | ಸೈಟ್ ನಂ. | ಖಾತಾ ನಂ. | ಮಾಲೀಕರ/ ಅನುಭವದಾರರ ಹೆಸರು | ಭೂಸ್ವಾಧೀನಕ್ಕೆ ಒಳಪಡುವ ಅಂದಾಜು ವಿಸ್ತೀರ್ಣ (ಚ.ಅ) | ಷರಾ |
|---|---|---|---|---|---|---|---|
| 1 | ಹಲೆಗೆವಡೇರಹಳ್ಳಿ | 160 | ಇಲ್ಲ | ಇಲ್ಲ | ಸರ್ಕಾರಿ ಜಮೀನು | 650.00 | ಖಾಲಿ ನಿವೇಶನ |
| 2 | ಹಲಗೆವಡೇರಹಳ್ಳಿ | 160 | 355 | ಇಲ್ಲ | ಹೆಚ್.ಬಿ.ಮಾಧವರಾವ್ (BEML ಸೋಸೈಟಿ ನಿವೇಶನದ ಕ್ರಯದಾರರು) | 414.00 | ಖಾಲಿ ನಿವೇಶನ |
| | | | | | ಒಟ್ಟು | **1064.00** | |

ಮೇಲ್ಕಂಡ ಪಟ್ಟಿಯಂತೆ ಭೂಸ್ವಾಧೀನಪಡಿಸಿಕೊಳ್ಳಲು ಪ್ರಸ್ತಾಪಿಸಿರುವ ಸ್ವತ್ತುಗಳು ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಹೊಂದಿರುವ ವಸತಿ ಪ್ರದೇಶದಲ್ಲಿದ್ದು, ಸರ್ಕಾರವು ಪ್ರಕಟಿಸಿರುವ ಅಧಿಸೂಚನೆ ಸಂಖ್ಯೆ: CVC-19/2010–11, ಬೆಂಗಳೂರು, ದಿನಾಂಕ: 21–09–2011 ರಂತೆ ಈ ಪ್ರದೇಶದಲ್ಲಿನ ವಸತಿ ನಿವೇಶನಗಳ ದರವು ಪ್ರತಿ ಚ. ಅಡಿ 1 ಕ್ಕೆ ರೂ. 3700/– ಗಳಾಗಿರುತ್ತದೆ. ಈ ದರದಂತೆ ಭೂಸ್ವಾಧೀನಪಡಿಸಿಕೊಳ್ಳಲು ಪ್ರಸ್ತಾಪಿಸಿರುವ ವಿಸ್ತೀರ್ಣಕ್ಕೆ ಪಾವತಿಸಬೇಕಾದ ಅಂದಾಜು ಭೂಪರಿಹಾರವನ್ನು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗಿದೆ.

**"ಅ"– ಭೂ ಪರಿಹಾರ ವೆಚ್ಚ**

| ಕ್ರ. ಸಂ. | ವಿವರಣೆ | ಮೊಬಲಗೂ ರೂ. ಗಳಲ್ಲಿ |
|---|---|---|
| 1 | ದಿನಾಂಕ: 21–09–2011ರ ಸರ್ಕಾರದ ಮಾರ್ಗಸೂಚಿ ದರದಂತೆ, ಚ.ಅಡಿ ಒಂದಕ್ಕೆ ರೂ. 3700/– ರಂತೆ 1064 ಚ.ಅಡಿಗಳಿಗೆ | 39,36,800/– |
| 2 | ಈ ಮೊಬಲಗಿಗೆ 1894ರ ಭೂಸ್ವಾಧೀನ ಕಾಯ್ದೆಯ ಕಲಂ 23 (2)ರ ಅನ್ವಯ ಶೇಕಡಾ 30ರಂತೆ ಶಾಸನ ಬದ್ಧ ಭತ್ಯೆ | 11,81,040/– |
| 3 | 1894ರ ಭೂಸ್ವಾಧೀನ ಕಾಯ್ದೆಯ ಕಲಂ 23 (1) (ಎ) ರ ಅನ್ವಯ ಮಾರುಕಟ್ಟೆ ಬೆಲೆ ಮೇಲೆ ಶೇಕಡಾ 12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (ಒಂದು ವರ್ಷಕ್ಕೆ) | 4,72,416/– |
| | ಒಟ್ಟು (1+2+3) | **55,90,256/–** |

**"ಆ"–ಇತರೆ ವೆಚ್ಚ**

| | | |
|---|---|---|
| 4 | ಸಿಬ್ಬಂದಿ ವೆಚ್ಚ ಶೇಕಡಾ 10 ರಷ್ಟು | – |
| 5 | ಆಡಿಟ್ ವೆಚ್ಚ ಶೇಕಡಾ 1 ರಷ್ಟು | – |
| 6 | ಪ್ರಕಟಣಾ ವೆಚ್ಚ (ಅಂದಾಜು) | 1,00,000/– |
| | ಒಟ್ಟು (1+2+3+6) | **56,90,256/–** |
| ಷರಾ: ದಿನಾಂಕ: 5–9–1963ರ ಸರ್ಕಾರದ ಅಧಿಸೂಚನೆ ಸಂಖ್ಯೆ: FD 126 RFC 60, ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಛೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮ ಸಂಖ್ಯೆ 4 ಮತ್ತು 5 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ, ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಾಚಾರದಿಂದ ಕೈಬಿಡಲಾಗಿದೆ. | | |

**(ಅ+ಆ) ಒಟ್ಟು**

**(ಐವತ್ತಾರು ಲಕ್ಷದ ತೊಂಭತ್ತು ಸಾವಿರದ ಇನ್ನೂರ ಐವತ್ತಾರು ರೂಗಳು ಮಾತ್ರ)**

ಮೇಲೆ ನಮೂದಿಸಿರುವ ಸ್ವತ್ತುಗಳನ್ನು ಭೂಸ್ವಾಧೀನ ಕಾಯ್ದೆ 1894 ರನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಹಾಗೂ ಇದಕ್ಕೆ ತಗಲುವ ಭೂ ಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ. 56,90,256/- (ರೂ. ಐವತ್ತಾರು ಲಕ್ಷದ ತೊಂಭತ್ತು ಸಾವಿರದ ಇನ್ನೂರ ಐವತ್ತಾರು ಮಾತ್ರ) ಗಳನ್ನು ಪಾಲಿಕೆಯ 2011-12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-11-2011ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20-12-2011 ರ ನಿರ್ಣಯದ ಮೇರೆಗೆ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯನ್ನು ನಿರೀಕ್ಷಿಸಿ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿರುವ ಪಾಲಿಕೆ ಸಭೆಯ ದಿನಾಂಕ : 27-12-2011ರ ತೀರ್ಮಾನ.

***ನಿರ್ಣಯ :-*** ***ಪಾಲಿಕೆ ಸಭೆಯ ದಿನಾಂಕ : 27-12-2011ರ ನಿರ್ಣಯವನ್ನು ಒಪ್ಪಿದೆ.***

## ***121. ವಿಷಯದ ಸಂಖ್ಯೆ: ತೆಆಸ್ಥಾಸ/55/2011-12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎಲ್‌ಎಕ್ಯೂ/ಸಿಆರ್/54/2010-11, ದಿನಾಂಕ : 09-03-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ: 51 ರಲ್ಲಿನ ಕುವೆಂಪುನಗರ ಬಡಾವಣೆಯ ಸಮೀಪವಿರುವ ಅಂಬೇಡ್ಕರ್‌ನಗರ ಕೊಳಚೆ ಪ್ರದೇಶ ಸುಮಾರು 40 ಎಕರೆ ವಿಸ್ತಾರದ ಪ್ರದೇಶವಾಗಿದ್ದು, ಈ ಕೊಳಚೆ ಪ್ರದೇಶದ ನಿವಾಸಿಗಳಿಗೆ, ವಸತಿ ಸಮುಚ್ಚಯ, ಆಟದ ಮೈದಾನ, ಆಸ್ಪತ್ರೆ, ಉದ್ಯಾನವನ ಅಂಗನವಾಡಿ ಕಟ್ಟಡ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಯಾವುದೇ ಸರ್ಕಾರಿ ಜಾಗ ಲಭ್ಯವಿಲ್ಲವೆಂದು, ಮಹದೇವಪುರ ವಲಯದ ವಿಜನಾಪುರ ವಾರ್ಡ್ ನಂ-51 ರ ವ್ಯಾಪ್ತಿಯಲ್ಲಿ ಕುವೆಂಪುನಗರದ ಸಮೀಪದಲ್ಲಿ ವಿಜನಾಪುರ ಗ್ರಾಮದ ಸರ್ವೆ ನಂ-19/2 ರಲ್ಲಿ 02 ಗುಂಟೆ ಖರಾಬ್ ಸೇರಿ ಜುಮ್ಲಾ 5.20 ಎಕರೆ ವಿಸ್ತೀರ್ಣದ ದೊಡ್ಡ ಖಾಲಿ ಜಾಗವಿದ್ದು, ಈ ಪ್ರದೇಶವನ್ನು ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನ ಪಡಿಸಿಕೊಳ್ಳಲು ವಿಜನಾಪುರ ವಾರ್ಡ್ ನಂ-51 ರ ಪಾಲಿಕೆ ಸದಸ್ಯರು, ಪೂಜ್ಯ ಮಹಾಪೌರರು, ಬಿ.ಬಿ.ಎಂ.ಪಿ ಹಾಗೂ ಜಂಟಿ ಆಯುಕ್ತರು ಮಹದೇವಪುರ ವಲಯ ರವರನ್ನು ಕೋರಿರುತ್ತಾರೆ.

ಮನವಿಯನ್ನು ಪರಿಶೀಲಿಸಿ, ವಿಜನಾಪುರ ಗ್ರಾಮದ ಸರ್ವೆ ನಂ-19/2 ರಲ್ಲಿನ 5.18 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ಕೊಳಚೆ ಪ್ರದೇಶದ ನಿವಾಸಿಗಳಿಗೆ ಮೂಲಭೂತ ಸೌಕಾರ್ಯಗಳನ್ನು ಒದಗಿಸಲು ಹಾಗೂ ಈ ಸ್ಥಳದಲ್ಲಿ ಯಾವುದೇ ಬೆಲೆ ಬಾಳುವ ಕಟ್ಟಡ, ಮರವಳಿ ಇಲ್ಲವೆಂದು, ಈ ಪ್ರದೇಶವನ್ನು ಭೂಸ್ವಾಧೀನ ಪಡಿಸಿಕೊಳ್ಳಲು, ಕೋರಿ, ಎ & ಡಿ ತಃಖ್ತೆ, ಸರ್ವೆ ಸ್ಕೆಚ್ ಮತ್ತು ಆರ್.ಟಿ.ಸಿ. ದಾಖಲೆಗಳೊಂದಿಗೆ ಸಹಾಯಕ ಕಂದಾಯ ಅಧಿಕಾರಿ, ಹೊರಮಾವು ಉಪ ವಲಯ ರವರು ಪ್ರಸ್ತಾವನೆಯನ್ನು ಉಪ ಆಯುಕ್ತರು, ಮಹದೇವಪುರ ವಲಯ ರವರ ಮುಖಾಂತರ ಜಂಟಿ ಆಯುಕ್ತರು, ಮಹದೇವಪುರ ವಲಯ ರವರಿಗೆ ಸಲ್ಲಿಸಿರುತ್ತಾರೆ.

ವಿಜನಾಪುರ ಗ್ರಾಮದ ಸರ್ವೆ ನಂ-19/2 ರಲ್ಲಿನ 5.18 ಎಕರೆ ಜಾಗವು ವಿವಾದಿತ ಪ್ರದೇಶವಾಗಿದ್ದು, ಈ ವಾರ್ಡ್‌ನಲ್ಲಿನ ಜನಸಂಖ್ಯೆಯಲ್ಲಿ ದಟ್ಟವಾದ ಬೆಳವಣಿಗೆಯಾಗಿದ್ದು, ಇಲ್ಲಿನ ಸಾರ್ವಜನಿಕ ಉಪಯೋಗಕ್ಕೆ ಬೇಕಾದ ಪಾಲಿಕೆಯ ಅಥವಾ ಸರ್ಕಾರಿ ಸ್ಥಳ ಇಲ್ಲದಂತಾಗಿದ್ದು, ಅಲ್ಲದೆ ಈ ಸ್ಥಳದ ಹತ್ತಿರದಲ್ಲಿನ ಕೆರೆ ಅಂಗಳ ಒಂದರಲ್ಲಿ ದೊಡ್ಡದಾಗಿ ಬೆಳವಣಿಗೆಯಾಗಿರುವ ಕೊಳಚೆ ಪ್ರದೇಶದಿಂದಾಗಿ ಕೆರೆ ಮುಚ್ಚಿಹೋಗಿ ಮಳೆಗಾಲದಲ್ಲಿ ಪದೇ ಪದೇ ಪ್ರವಾಹ ಪರಿಸ್ಥಿತಿ ಉಂಟಾಗುತ್ತಿದ್ದು, ಪ್ರವಾಹ ನಿಯಂತ್ರಿಸಲು ಮಳೆನೀರಿನ ಬೃಹತ್ ನೀರುಗಾಲುವೆ ನಿರ್ಮಾಣಕ್ಕೆ ತಾಂತ್ರಿಕವಾಗಿ ಯೋಗ್ಯವೆಂದು ಕಂಡು ಬರುವ ಮಾರ್ಗಗಳ ಆಯ್ಕೆಯಾದಗಲ್ಲೆಲ್ಲಾ ಇಲ್ಲಿನ ಸ್ಥಳೀಯರಿಂದ ವಿರೋಧ ವ್ಯಕ್ತವಾಗುತ್ತಿದ್ದು, ಈ ಸಮಸ್ಯೆಗೆ ಪರಿಹಾರ ಇಲ್ಲದಂತಾಗಿರುತ್ತದೆ. ಆದ್ದರಿಂದ, ಅಂಬೇಡ್ಕರ್ ನಗರ ಮತ್ತು ಲಕ್ಷ್ಮಣಮೂರ್ತಿನಗರದ ಕೆರೆ ಅಂಗಳದಲ್ಲಿನ ಸ್ಲಂ ನಿವಾಸಿಗಳ ಪುನರ್‌ವಸತಿಗಾಗಿ ವಸತಿ ಸಮುಚ್ಚಯ, ಆಟದ ಮೈದಾನ, ಆಸ್ಪತ್ರೆ, ಉದ್ಯಾನವನ, ಅಂಗನವಾಡಿ ಕಟ್ಟಡ ಹಾಗೂ ಇತರೇ ಮೂಲಭೂತ ಸೌಕರ್ಯಗಳನ್ನು ಒದಗಿಸಲು ವಿಜನಾಪುರ ಗ್ರಾಮದ ಸರ್ವೆ ನಂ-19/2 ರಲ್ಲಿನ 5.18 ಎಕರೆ ಖಾಲಿಯಿರುವ ಈ ಪ್ರದೇಶವನ್ನು ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನ ಪಡಿಸಿಕೊಳ್ಳಲು

ಜಂಟಿ ಆಯುಕ್ತರು, ಮಹದೇವಪುರ ವಲಯ ರವರು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ಭೂಸ್ವಾಧೀನ ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಿರುತ್ತಾರೆ.

ಕಡತದಲ್ಲಿ ಲಭ್ಯ ದಾಖಲೆಗಳ ಮಾಹಿತಿಯಂತೆ ಈ ಜಮೀನಿಗೆ ಸಂಬಂಧಪಟ್ಟಂತೆ ಶ್ರೀ.ಬಿ.ಎಂ.ಮುನಿಶಾಮಪ್ಪ ಮತ್ತು ಮಕ್ಕಳು ಹಾಗೂ ಇತರೆ ವಾರಸುದಾರರ ನಡುವೆ ವಿವಾದವಿರುತ್ತದೆ ಹಾಗೂ ಈ ಜಮೀನಿನ ಮೇಲೆ ಗೇಣಿ ಅರ್ಜಿ ದಾಖಲಾಗಿದ್ದು, ಮಾನ್ಯ ಉಚ್ಛನ್ಯಾಯಾಲಯ ಮತ್ತು ಸರ್ವೋಚ್ಛ ನ್ಯಾಯಾಲಯಗಳಲ್ಲಿ ಈ ಪ್ರಕರಣಗಳ ವಿಚಾರಣೆ ನಡೆದು ದಾಖಲಾಗಿದ್ದು, ಪ್ರಕರಣ ಸಂಖ್ಯೆ: ಎಲ್.ಆರ್.ಎಫ್. ನಂ–2746/75–76 ರಂತೆ ಭೂನ್ಯಾಯಮಂಡಳಿ ಮುಂದೆ ಪ್ರಕರಣ ಪುನರ್ ಪರಿಶೀಲನೆಗಾಗಿ ಬಾಕಿ ಇರುವುದಾಗಿ ಕಂಡು ಬಂದಿರುತ್ತದೆ.

| **ಕ್ರ. ಸಂ.** | **ಭೂಸ್ವಾಧೀನಕ್ಕೆ ಒಳಪಟ್ಟ ಆಸ್ತಿಯ ಮಾಲೀಕರ/ಖಾತೆದಾರರ ಹೆಸರು (ಆರ್.ಟಿ.ಯಂತೆ)** | **ಗ್ರಾಮ** | **ಸರ್ವೆ ನಂಬರ್** | **ಒಟ್ಟು ವಿಸ್ತೀರ್ಣ (ಎಕರೆ)** | **ಆಕಾರ ರೂ.ಪೈ** | **ತರಹೆ** | **ಭೂಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ (ಎಕರೆ)** | **ಚಕ್ಕುಬಂದಿ (ಸರ್ವೆ ನಂ)** | | | |
|---|---|---|---|---|---|---|---|---|---|---|---|
| | | | | | | | | **ಪೂ** | **ಪ** | **ಉ** | **ದ** |
| 1 | ಬಿ.ಎಂ.ಮುನಿಶಾಮಪ್ಪ ಬಿನ್ ಮೇಸ್ತ್ರಿ ಮುನಿವೆಂಕಟಪ್ಪ | ವಿಜಿನಾ ಪುರ | 19/2 | 5.20 (–)0.02 (ಖರಾಬ್) =5.18 | 8.62 | ಖುಷ್ಕಿ | 5–18 | ಸ.ನ 23 | ಸ.ನಂ 18& 14 | ಸ.ನ 19/1 | ಸ.ನ 20 |

**ಭೂಸ್ವಾಧೀನಕ್ಕೆ ಒಳಪಡುವ ಸ್ವತ್ತುಗಳ ವಿವರ ಈ ಕೆಳಕಂಡಂತೆ ಇರುತ್ತದೆ**

ಮೇಲ್ಕಂಡ ಕೃಷಿ ಜಮೀನಿಗೆ 1894 ರ ಭುಸ್ವಾಧೀನ ಕಾಯ್ದೆಯನ್ವಯ, ಕೇಂದ್ರ ಮೌಲ್ಯಮಾಪನ ಸಮಿತಿಯ ಮಾರ್ಗಸೂಚಿ ದರದನ್ವಯ ಪಾವತಿಸಬೇಕಾದ ಪರಿಹಾರ ಹಾಗೂ ಇತರೇ ವೆಚ್ಚಗಳು ಈ ಕೆಳಕಂಡಂತೆ ಇರುತ್ತವೆ.

| **"ಅ"** | | |
|---|---|---|
| **ಕ್ರಮ ಸಂಖ್ಯೆ** | **ಕೇಂದ್ರ ಮೌಲ್ಯಮಾಪನ ಸಮಿತಿಯ ಮಾರ್ಗಸೂಚಿ ಬೆಲೆ** | **ಮೌಲ್ಯ (ರೂ.)** |
| 1 | ಅ) ಭೂಸ್ವಾಧೀನ ಪಡಿಸಿಕೊಳ್ಳುವ ವಿಸ್ತೀರ್ಣದ ಮೌಲ್ಯ (5.18 ಗುಂಟೆ ) ಎಕರೆ ಒಂದಕ್ಕೆ ರೂ.125 ಲಕ್ಷಗಳಂತೆ | 6,81,25,000/– |
| 2 | ಆ) ಭೂಸ್ವಾಧೀನ ಪಡಿಸಿಕೊಳ್ಳುವ ಸ್ವತ್ತಿನಲ್ಲಿನ ಕಟ್ಟಡದ ವಿಸ್ತೀರ್ಣ/ಮೊಬಲಗು | ಇಲ್ಲ |
| | **ಒಟ್ಟು** | **6,81,25,000/–** |
| 3 | ಈ ಮೊಬಲಗಿಗೆ 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1) ರನ್ವಯ ಮಾರುಕಟ್ಟೆ ಬೆಲೆಯ ಮೇಲೆ ಸಾಲಿಯಾನ ಶೇಕಡ 12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ 1 ವರ್ಷಕ್ಕೆ | 81,75,000/– |
| 4 | 1894 ಭೂಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶಾಸನಬದ್ಧ ಭತ್ಯೆ ಶೇ.30 ರಂತೆ | 2,04,37,500/– |
| | **ಒಟ್ಟು** | **9,67,37.500/–** |

**ಇತರೇ ಸರ್ಕಾರಿ ವೆಚ್ಚಗಳು**

| | | |
|---|---|---|
| 1 | ಸಿಬ್ಬಂದಿ ವೆಚ್ಚ ಶೇಕಡ 10 ರಷ್ಟು | 96,73,750/– |
| 2 | ಆಡಿಟ್ ವೆಚ್ಚ ಶೇಕಡ 1 ರಷ್ಟು | 9,67,375/– |
| 3 | ಪ್ರಕಟಣಾ ವೆಚ್ಚ ಅಂದಾಜು | 1,00,000/– |
| | **ಒಟ್ಟು** | **1,07,41,125/–** |
| | **(ಅ+ಆ)** | **10,74,78,625/–** |

**(ಹತ್ತು ಕೋಟಿ ಎಪ್ಪತ್ನಾಲ್ಕು ಲಕ್ಷದ ಎಪ್ಪತ್ತೆಂಟು ಸಾವಿರದ ಆರುನೂರ ಇಪ್ಪತ್ತೈದು ರೂಗಳು ಮಾತ್ರ)**

ಮೇಲ್ಕಂಡ ಸ್ವತ್ತನ್ನು 1894 ರ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನ ಪಡಿಸಿಕೊಳ್ಳಲು ತಗಲುವ ಭೂ–ಪರಿಹಾರದ ಮೊತ್ತ ಮತ್ತು ವೆಚ್ಚಗಳು ಸೇರಿ ಒಟ್ಟು ರೂ.10,74,78,625/– **(ಹತ್ತು ಕೋಟಿ ಎಪ್ಪತ್ನಾಲ್ಕು ಲಕ್ಷದ ಎಪ್ಪತ್ತೆಂಟು**

**ಸಾವಿರದ ಆರುನೂರ ಇಪ್ಪತ್ತೈದು ರೂಗಳು ಮಾತ್ರ)** ಗಳನ್ನು 2011-12 ನೇ ಸಾಲಿನ ಆಯ-ವ್ಯಯದಲ್ಲಿ ಭರಿಸುವ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:9-3-2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 05-04-2011ರ ನಿರ್ಣಯ.

***ನಿರ್ಣಯ : ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಯಿತು, ಆಯುಕ್ತರ ದಿನಾಂಕ : 09.03.2011ರ ಟಿಪ್ಪಣಿಯಲ್ಲಿ ಭೂಸ್ವಾಧೀನಕ್ಕಾಗಿ ಪ್ರಸ್ತಾಪಿಸಿರುವ ಸ್ಥಳದ ವಿಸ್ತೀರ್ಣವು 5 ಎಕರೆಗೂ ಮೀರಿರುವುದರಿಂದ ಪಾಲಿಕೆಯ ಯೋಜನೆಗಳ ಉಪಯೋಗಕ್ಕೆ ಬಳಸಿಕೊಳ್ಳ ಬಹುದಾಗಿದ್ದು ಈ ಬಗ್ಗೆ ಪುನರ್ ಪರಿಶೀಲಿಸಿ ಸ್ಪಷ್ಟವಾದ ವಿವರಗಳೊಂದಿಗೆ ಕಡತವನ್ನು ಮರು ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.***

***13].ವಿಷಯದ ಸಂಖ್ಯೆ: ತೆಆಸ್ಥಾಸ/67/2011-12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿ.ಆರ್/154/10-11, ದಿನಾಂಕ : 05-03-2011 ರಲ್ಲಿ ವಿವರಿಸಿರುವಂತೆ, ಸಹ ಕಂದಾಯ ಅಧಿಕಾರಿ (ಪುಲಿಕೇಶಿನಗರ) ಉಪ ವಿಭಾಗಕ್ಕೆ ಬರುವ ವಾರ್ಡ್-61 ಎಸ್.ಕೆ.ಗಾರ್ಡನ್‌ನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸ್ವತ್ತಿನ ಅಳತೆ 100x200 ಅಡಿಗಳ ನಿವೇಶನವನ್ನು 30 ವರ್ಷಗಳಿಗೆ ದಿನಾಂಕ : 02-10-1975 ರಿಂದ 01-10-2005ರ ವರೆವಿಗೆ ಅಧ್ಯಕ್ಷರು ಕುಂಬಾರ ಕರಕುಶಲ ಕಾರ್ಮಿಕರ ಸಂಘ ನ್ಯೂ ಪಾಟರಿ ಟೌನ್, ವಾರ್ಡ್-61 ಬೆಂಗಳೂರು-05 ರವರಿಗೆ ಸರ್ಕಾರದ ಆದೇಶ ಸಂಖ್ಯೆ:ಹೆಚ್.ಎಂ.ಎ/332/ಎಂ.ಎನ್.ಜಿ/75 ದಿನಾಂಕ:30-08-1975ರಲ್ಲಿ ವಾರ್ಷಿಕ ರೂ.500/-ಗಳ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದ್ದು, ದಿನಾಂಕ : 01-10-2005 ರಂದು ಗುತ್ತಿಗೆಗೆ ನೀಡಿರುವ ಅವಧಿಯು ಪೂರ್ಣಗೊಂಡಿರುವುದರಿಂದ ನಗರ ಪಾಲಿಕೆ ಸ್ವತ್ತನ್ನು ನಗರ ಪಾಲಿಕೆಗೆ ಹಿಂದಿರುಗಿಸಲು ನೋಟೀಸ್ ಜಾರಿ ಮಾಡಲಾಗಿರುತ್ತದೆ.

ದಿನಾಂಕ:02-08-2010 ರಂದು ಸದರಿ ಸಂಘದವರು ಗುತ್ತಿಗೆ ಅವಧಿಯನ್ನು ನವೀಕರಿಸಲು ಶೇ 50% ರಷ್ಟು ರಿಯಾಯಿತಿ ನೀಡಿ ಕ್ರಯಕ್ಕೆ ಮಂಜೂರು ಮಾಡಲು ಸರ್ಕಾರವನ್ನು ಕೋರಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ15/ಎಂಎನ್‌ಜಿ/2006 ದಿನಾಂಕ:06-05-2006 ರಂತೆ ಸದರಿಯವರ ಮನವಿಯನ್ನು ತಿರಸ್ಕರಿಸಿರುತ್ತಾರೆ.

ಅದರಂತೆ ಗುತ್ತಿಗೆಗೆ ನೀಡಿರುವ ನಗರ ಪಾಲಿಕೆ ಸ್ವತ್ತನ್ನು ಪಾಲಿಕೆ ವಶಕ್ಕೆ ಪಡೆಯಲು ಮುಖ್ಯ ಅಭಿಯಂತರರು (ಪೂರ್ವ) ಹಾಗೂ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ರವರಿಗೆ ಕಳುಹಿಸಿಕೊಡಲಾಗಿದ್ದು, ಈ ಮಧ್ಯೆ ನಗರ ಪಾಲಿಕೆ ಸ್ವತ್ತನ್ನು ಹಿಂದಿರುಗಿಸಲು ಉಪ ಆಯುಕ್ತರು (ಆಸ್ತಿಗಳು) ರವರ ಆದೇಶದ ಸಂಖ್ಯೆ:ಅ.ಆ.ಸ/ಇ.ಸಿ/ಪಿಆರ್/16/10-11, ದಿನಾಂಕ:29-07-2010 ರಂತೆ ಕೆ.ಪಿ.ಪಿ.ಕಾಯ್ದೆ 4 ರಂತೆ ಅಧ್ಯಕ್ಷರು ಕುಂಬಾರ ಕರಕುಶಲ ಸಂಘಕ್ಕೆ ನೋಟೀಸ್ ಜಾರಿಗೊಳಿಸಿದ್ದು, ಪುನ: ದಿನಾಂಕ: 17-09-2010 ರಂದು ಕೆ.ಪಿ.ಪಿ.ಕಾಯ್ದೆ 5 ಫಾರಂ 'ಬಿ' ರ ಪ್ರಕಾರ ನಗರ ಪಾಲಿಕೆ ಸ್ವತ್ತನ್ನು ಹಿಂದಿರುಗಿಸಲು ನೋಟೀಸ್ ಜಾರಿಮಾಡಲಾಗಿರುತ್ತದೆ. ಈ ಮಧ್ಯೆ ಶ್ರೀ.ಕಣ್ಣನ್ ಮತ್ತು ಶ್ರೀ. ವೆಂಕಟರಾಮಯ್ಯ ಶೆಟ್ಟಿ ಎಂಬುವವರು ಸದರಿಯವರಿಗೆ ನಗರ ಪಾಲಿಕೆ ವತಿಯಿಂದ ನೀಡಿರುವ ಗುತ್ತಿಗೆ ಅವಧಿಯು ಮುಗಿದಿರುವುದರಿಂದ ಸ್ವತ್ತನ್ನು ಹಿಂಪಡೆಯಲು ದೂರು ಅರ್ಜಿ ಸಹ ಸಲ್ಲಿಸಿರುತ್ತಾರೆ.

ಈ ಮಧ್ಯೆ ಸಂಘದವರು ಮಾನ್ಯ ಸಚಿವರ ಶಿಫಾರಸ್ಸು ಪತ್ರವನ್ನು ನೀಡಿ ಸದರಿ ಸಂಘಕ್ಕೆ ಮುಂದಿನ 50 ವರ್ಷಗಳ ಅವಧಿಗೆ ಗುತ್ತಿಗೆ ಅವಧಿ ನವೀಕರಿಸಲು ಕೋರಿರುತ್ತಾರೆ. ಮಾನ್ಯ ಆಯುಕ್ತರವರು ಸಂಖ್ಯೆ:ಡಿ.ಎಸ್.ಆರ್/5262/10-11 ದಿನಾಂಕ:22-11-2010ರ ಆದೇಶದಂತೆ ಸದರಿ ಗುತ್ತಿಗೆಗೆ ನೀಡಿದ್ದ ಸ್ವತ್ತನ್ನು

ಕ್ರಯಕ್ಕೆ ನೀಡಲು ಕೋರಿರುವುದನ್ನು ತಿರಸ್ಕರಿಸಿ ಗುತ್ತಿಗೆ ಅವಧಿ ಮುಗಿದಿರುವ ದಿನಾಂಕದಿಂದ 5 ವರ್ಷದ ಅವಧಿಗೆ ನವೀಕರಿಸಲು ಪ್ರಸ್ತಾವನೆಯನ್ನು ಅನುಮೋದಿಸಿರುತ್ತಾರೆ.

ಪ್ರಸ್ತುತ ಸ್ವತ್ತಿನ ಮಾರುಕಟ್ಟೆ ದರವು ವಸತಿಗೆ ಚದರ ಅಡಿ 1ಕ್ಕೆ ರೂ.2200/- ಗಳಿದ್ದು, ಸ್ವತ್ತಿನ ವಿಸ್ತೀರ್ಣ 100*200=20,000 ಚದರ ಅಡಿಗಳಿದ್ದು, ಸ್ವತ್ತಿನ ಮೌಲ್ಯ ರೂ.4,40,00,000/-ಗಳಾಗುತ್ತದೆ. ಮಾರುಕಟ್ಟೆ ದರದ ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ 44,00,000/-ರೂಗಳಾಗುತ್ತದೆ. ಮಾಸಿಕ ರೂ.3,66,667/-ಗಳಾಗುತ್ತದೆ. ಆದ್ದರಿಂದ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಕರಾರು ನೊಂದಾಯಿಸುವ ದಿನಾಂಕದವರೆಗೆ ಹಳೆಯ ದರದಂತೆ, ನಂತರದ 5 ವರ್ಷಗಳಿಗೆ ಪ್ರಸಕ್ತ ಮಾರುಕಟ್ಟೆ ದರದಂತೆ ಗುತ್ತಿಗೆ ಅವಧಿಯನ್ನು ನವೀಕರಿಸುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 05-03-2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 15-03-2011 ರ ನಿರ್ಣಯ.

*ನಿರ್ಣಯ : ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಯಿತು, ಆಯುಕ್ತರ ದಿನಾಂಕ : 05-03-2011ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸ್ವತ್ತನ್ನು ಕುಂಬಾರ ಕರ ಕುಶಲ ಕೈಗಾರಿಕಾ ಸಹಕಾರ ಸಂಘ ನಿಯಮಿತ ರವರಿಗೆ ಗುತ್ತಿಗೆಗೆ ನೀಡಿದ್ದು ಸದರಿ ಸ್ಥಳದಲ್ಲಿ ಹಲವಾರು ಕುಟುಂಬಗಳು ವಾಸವಿರುವುದು ಕಂಡುಬಂದಿರುತ್ತದೆ ಸದರಿ ಸ್ವತ್ತನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವ ಬಗ್ಗೆ ದೂರುಗಳು ಬಂದಿರುವ ಹಿನ್ನೆಲೆಯಲ್ಲಿ ಸದರಿ ಸ್ಥಳದಲ್ಲಿ ವಾಸವಿರುವ ಕುಟುಂಬಗಳು ಕುಂಬಾರ ಕರ ಕುಶಲ ಕೈಗಾರಿಕಾ ಸಹಕಾರ ಸಂಘದ ಸದಸ್ಯರುಗಳೇ ಹಾಗೂ ಅವರುಗಳು ತಮ್ಮ ಕುಲ ಕಸುಬನ್ನು ಮಾಡುತ್ತಿದ್ದಾರೆಯೇ, ಮತ್ತು ಸ್ವತ್ತನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದಾಗಿ ಬಂದಿರುವ ದೂರುಗಳು ನ್ಯಾಯ ಸಮ್ಮತವಾಗಿವೆಯೇ ಎಂಬುದನ್ನು ಪರಿಶೀಲಿಸಿ ಮರು ಮಂಡಿಸಲು ಕಡತವನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.*

## *14]. ವಿಷಯದ ಸಂಖ್ಯೆ :-ತೆಆಸ್ಥಾಸ/107/2011-12*

ಆಯುಕ್ತರ ಟಿಪ್ಪಣಿ ದಿನಾಂಕ : 14-06-2011ರಲ್ಲಿ ವಿವರಿಸಿರುವಂತೆ, ವಿ. ಮಹದೇವ್ ರವರು ಹೊಸಕೆರೆ ರಸ್ತೆ (ಮಾಗಡಿ ರಸ್ತೆ) ಬಿನ್ನಿಮಿಲ್ ಮುಂಭಾಗ 15 X 15 ಅಡಿಗಳ ನಗರ ಪಾಲಿಕೆ ಜಾಗದ ಗುತ್ತಿಗೆ ಅವಧಿಯನ್ನು ನವೀಕರಿಸಲು ಕೋರಿರುತ್ತಾರೆ.

ಸದರಿ ಗುತ್ತಿಗೆಯ ಬಗ್ಗೆ 1974 ರ ಕೆ.ಪಿ.ಪಿ. ಕಾಯ್ದೆ ಅಧಿನಿಯಮ 4(1) ರ ರೀತ್ಯಾ ದಿನಾಂಕ: 09-08-2010 ರಲ್ಲಿ ಹೊಸಕೆರೆ ರಸ್ತೆ (ಮಾಗಡಿ ರಸ್ತೆ) ಬಿನ್ನಿಮಿಲ್ ಮುಂಭಾಗ 15 X 15 ಅಡಿಗಳ ಜಾಗದಲ್ಲಿ ಅಂಗಡಿ ನಡೆಸುತ್ತಿದ್ದು ಗುತ್ತಿಗೆ ಅವಧಿಯನ್ನು ನವೀಕರಿಸಿಕೊಳ್ಳದೇ ಅನಧಿಕೃತವಾಗಿ ನಡೆಸುತ್ತಿರುವ ಮೇರೆಗೆ ನೋಟಿಸ್ ಜಾರಿ ಮಾಡಲಾಗಿರುತ್ತದೆ.

ಸದರಿ ಗುತ್ತಿಗೆದಾರರನ್ನು ಸಂಖ್ಯೆ:ಡಿ.ಆರ್.ಬಿ(ಸಿ)ಪಿ.ಆರ್/308/98-99 ದಿನಾಂಕ: 09-12-1998 ತಿಂಗಳಿಗೆ ರೂ. 500/- ರಂತೆ ಗುತ್ತಿಗೆಗೆ ನೀಡಲಾಗಿತ್ತು ಹಾಗೂ ಪೆಟ್ಟಿ ಅಂಗಡಿ ನಡೆಸಲು ಸಹ ಅನುಮತಿ ನೀಡಲಾಗಿತ್ತು.

ಅರ್ಜಿದಾರರು ಆರ್.ಸಿ.ಸಿ ಕಟ್ಟಡವನ್ನು ಪರಿವರ್ತಿಸಿಕೊಂಡಿರುತ್ತಾರೆ. ಆಗಸ್ಟ್ 2000 ರಿಂದ ಇಲ್ಲಿಯವರೆಗೂ ರೂ. 67500/- ಬಾಕಿ ಇರುತ್ತದೆ.

ಆದ್ದರಿಂದ ಬಾಕಿ ಇರುವ ಗುತ್ತಿಗೆ ಹಣವನ್ನು ಪಾವತಿಸಿಕೊಂಡು ಗುತ್ತಿಗೆ ಅವಧಿ ನವೀಕರಿಸುವುದೇ ಅಥವಾ ನಗರ ಪಾಲಿಕೆ ಜಾಗವನ್ನು ತೆರವುಗೊಳಿಸುವುದೇ ಎಂಬ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಯಿತು, ಅರ್ಜಿದಾರರು ಬಾಕಿ ಇರುವ ಗುತ್ತಿಗೆ ಮೊತ್ತವನ್ನು ಪಾವತಿಸಿದ ನಂತರ ನವೀಕರಿಸುವ ಬಗ್ಗೆ ತೀರ್ಮಾನಕ್ಕಾಗಿ ಕಡತವನ್ನು ಮರು ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## 15]. ವಿಷಯದ ಸಂಖ್ಯೆ :–ತೆಆಸ್ಥಾಸ/111/2011–12

ಆಯುಕ್ತರ ಟಿಪ್ಪಣಿ ದಿನಾಂಕ : 20–06–2011ರಲ್ಲಿ ವಿವರಿಸಿರುವಂತೆ, ಶ್ರೀ. ಎಂ. ಪ್ರಭಾಕರ್, 26ನೇ ಅಡ್ಡರಸ್ತೆ, ಕಿಲಾರಿ ರಸ್ತೆ, ವಾರ್ಡ್–109ರ ವ್ಯಾಪ್ತಿಯಲ್ಲಿ ಬರುವ ನಗರ ಪಾಲಿಕೆಯ ಜಾಗವಾದ 182 ಚದರ ಅಡಿಗಳ ಜಾಗವನ್ನು 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಿದ್ದು ಗುತ್ತಿಗೆ ಅವಧಿಯು ದಿನಾಂಕ : 14–03–1995 ಕ್ಕೆ ಮುಕ್ತಾಯಗೊಂಡಿರುತ್ತದೆ. ಗುತ್ತಿಗೆ ಅವಧಿಯನ್ನು ನವೀಕರಿಸಿಕೊಳ್ಳದೇ ಅನಧಿಕೃತವಾಗಿ ಕಟ್ಟಡವನ್ನು ಉಪಯೋಗಿಸುತ್ತಿರುತ್ತಾರೆ.
ಸದರಿಯವರಿಗೆ ದಿನಾಂಕ : 15–03–1990 ರಿಂದ 5ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಸಿಕ ರೂ.1000/– ರಂತೆ ಬಾಡಿಗೆ ನೀಡುವ ಷರತ್ತಿನಂತೆ ಗುತ್ತಿಗೆಗೆ ನೀಡಲಾಗಿದ್ದ 5 ವರ್ಷಗಳ ಗುತ್ತಿಗೆ ಅವಧಿ ಮುಗಿದ ನಂತರ ನವೀಕರಣಗೊಂಡಿಲ್ಲದ ಕಾರಣ ಅನಧಿಕೃತವೆಂದು ಭಾವಿಸಿ 1974 ರ ಕೆ.ಪಿ.ಪಿ ಆಕ್ಟ್ 4(1) ರ ರೀತ್ಯಾ ನೋಟಿಸನ್ನು ಜಾರಿ ಮಾಡಲಾಗಿದೆ.
ಮೇಲ್ಕಂಡ ಗುತ್ತಿಗೆಗೆ ನೀಡಿರುವ ನಗರ ಪಾಲಿಕೆಯ 182 ಚದರ ಅಡಿ ಜಾಗಕ್ಕೆ ನಿಗಧಿಪಡಿಸಿದ್ದ ವಾರ್ಷಿಕ ಗುತ್ತಿಗೆ ಮೊತ್ತ ರೂ.1000/– ರಂತೆ ದಿನಾಂಕ : 15–03–1990 ರಿಂದ 14–03–2011 ರ ವರೆಗೆ ರೂ. 16,000/– ಗಳು ಬಾಕಿ ಇರುತ್ತದೆ. ಈ ಮೊತ್ತವು ಗುತ್ತಿಗೆ ನವೀಕರಣಗೊಂಡಿಲ್ಲದ ಅವಧಿಯದಾಗಿರುತ್ತದೆ.
ಆದ್ದರಿಂದ ಬಾಕಿ ಇರುವ ಗುತ್ತಿಗೆ ಹಣವನ್ನು ಪಾವತಿಸಿಕೊಂಡು ಗುತ್ತಿಗೆ ಅವಧಿಯನ್ನು ನವೀಕರಿಸಬಹುದೇ ಅಥವಾ 182 ಚದರ ಅಡಿಗಳ ಜಾಗವನ್ನು ಮಹಾನಗರ ಪಾಲಿಕೆಯ ಸುಪರ್ದಿಗೆ ತೆಗೆದುಕೊಳ್ಳುವುದೇ ಅಥವಾ ಗುತ್ತಿಗೆದಾರರನ್ನು ತೆರವುಗೊಳಿಸಬಹುದೇ ಎಂಬ ಬಗ್ಗೆ ನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಯಿತು, ಅರ್ಜಿದಾರರು ಬಾಕಿ ಇರುವ ಗುತ್ತಿಗೆ ಮೊತ್ತವನ್ನು ಪಾವತಿಸಿದ ನಂತರ ನವೀಕರಿಸುವ ಬಗ್ಗೆ ತೀರ್ಮಾನಕ್ಕಾಗಿ ಕಡತವನ್ನು ಮರು ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## 16]. ವಿಷಯದ ಸಂಖ್ಯೆ :–ತೆಆಸ್ಥಾಸ/253/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)ಪಿಆರ್/07/11–12, ದಿನಾಂಕ : 21–06–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ.64 (4), ಮಲ್ಲೇಶ್ವರಂ ರಲ್ಲಿನ ಕಾಡುಮಲ್ಲೇಶ್ವರ 7ನೇ ಮುಖ್ಯರಸ್ತೆಯಲ್ಲಿ 30X65 ಅಡಿ ಅಳತೆಯ ಪಾಲಿಕೆಯ ಖಾಲಿ ನಿವೇಶನವನ್ನು ಶ್ರೀ.ಅಯ್ಯಪ್ಪ ದೇವಸ್ಥಾನ ನಿರ್ಮಿಸಲು ಮೊದಲಿಗೆ ಗುತ್ತಿಗೆಗೆ ನೀಡಿದ್ದು, ಅನಂತರದಲ್ಲಿ 9000 ಚ.ಅಡಿಗಳ ನಿವೇಶನವನ್ನು ವಾರ್ಷಿಕ ಗುತ್ತಿಗೆ ಮೊತ್ತ ರೂ.500/– ಗಳಂತೆ ದಿನಾಂಕ:02–08–1978 ರಿಂದ 01–08–2008ರ ವರೆಗೆ 30 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿದ್ದು, ಇದರ ಅವಧಿಯು ಸಹಾ 01–08–2008ಕ್ಕೆ ಮುಕ್ತಾಯವಾಗಿದ್ದು, ಈಗ ಸದರಿ ಶ್ರೀ.ಅಯ್ಯಪ್ಪ ಸ್ವಾಮಿ ಟ್ರಸ್ಟ್ ರವರು 99 ವರ್ಷಗಳ ಅವಧಿಗೆ ಗುತ್ತಿಗೆ ವಿಸ್ತರಿಸಬೇಕೆಂದು ಕೋರಿರುತ್ತಾರೆ.

ಪ್ರಸ್ತುತ ಸ್ಥಳವು ರಸ್ತೆ ಅಗಲೀಕರಣಕ್ಕೆ ಅವಶ್ಯವಿದೆಯೆಂದು ಕಂಡು ಬಂದಿದ್ದು, ನಂತರದಲ್ಲಿ ಸದ್ಯಕ್ಕೆ ಅದರ ಅವಶ್ಯಕತೆ ಇರುವುದಿಲ್ಲವೆಂದು ತಿಳಿಸಿ ಒಂದು ವೇಳೆ ಸದರಿ ಸ್ಥಳ ರಸ್ತೆ ಅಗಲೀಕರಣಕ್ಕೆ ಬೇಕಾದಲ್ಲಿ ಇದರಂತೆ

ಷರತ್ತು ವಿಧಿಸಿ ಗುತ್ತಿಗೆ ಮುಂದುವರೆಸಲು ಕ್ರಮ ತೆಗೆದುಕೊಳ್ಳಬಹುದೆಂದು ಕಾರ್ಯಪಾಲಕ ಅಭಿಯಂತರರು (ರಸ್ತೆ ಅಗಲೀಕರಣ) ರವರು ಕಂಡಿಕೆ 79 ರಲ್ಲಿ ವರದಿ ನೀಡಿರುತ್ತಾರೆ.

ಪ್ರಸ್ತುತ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲಿಸಲಾಗಿ ಇದು ಒಟ್ಟು 9000 ಚ.ಅಡಿ ಜಾಗವಿದ್ದು, ಸುಮಾರು. 3800.94 ಚದರ ಅಡಿಯಲ್ಲಿ ದೇವಸ್ಥಾನ ನಿರ್ಮಾಣ ಮಾಡಿದ್ದು, 1817.78 ಚ.ಅಡಿ ಜಾಗದಲ್ಲಿ ಕಟ್ಟಡ ನಿರ್ಮಾಣ ಕಾರ್ಯ ನಡೆದಿದ್ದು, ಈಗ ಸ್ಥಗಿತಗೊಂಡಿದ್ದು ಇನ್ನು 359.25 ಚದರ ಅಡಿ ಜಾಗದಲ್ಲಿ ದೇವಸ್ಥಾನದ ಕಛೇರಿ ಕಟ್ಟಡವಿರುವುದಾಗಿ ತಿಳಿದು ಬರುತ್ತದೆ.

ಪ್ರಸ್ತುತ ಸ್ವತ್ತಿನ ಗುತ್ತಿಗೆ ಅವಧಿಯು ದಿನಾಂಕ:01-08-2008ಕ್ಕೆ ಮುಕ್ತಾಯವಾಗಿದ್ದು, ಸರ್ಕಾರದ 2007ರ ಮಾರ್ಗಸೂಚಿ ದರದಂತೆ ಪ್ರಸ್ತುತ ಮಾರುಕಟ್ಟೆ ದರ ಚದರ ಅಡಿ ಒಂದಕ್ಕೆ ರೂ.3500/-ಗಳಾಗಿದ್ದು ಇದರಂತೆ 9000 ಚದರ ಅಡಿ ಜಾಗಕ್ಕೆ 3500X9000=3,15,00,000 ರೂ ಆಗುತ್ತದೆ. ಶೇ 10% ರಷ್ಟು ವಾರ್ಷಿಕ ಗುತ್ತಿಗೆ ದರ ರೂ. 31,50,000/- ಗಳಾಗುತ್ತದೆ. ಹಾಗೂ ಮಾಸಿಕ ಗುತ್ತಿಗೆ ದರವು ರೂ.2,62,500/- ಆಗುತ್ತದೆ ಎಂದು ತಿಳಿಸಿ ಗುತ್ತಿಗೆ ಅವಧಿ ನವೀಕರಣಕ್ಕೆ ವಲಯಾಧಿಕಾರಿಗಳು ಶಿಫಾರಸ್ಸು ಮಾಡಿರುತ್ತಾರೆ

ದಿನಾಂಕ:01-03-2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಮತ್ತು ಕ್ರಯಕ್ಕೆ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಮೇಲಿನ ವಿವರಗಳ ಹಿನ್ನೆಲೆಯಲ್ಲಿ ಶ್ರೀ.ಅಯ್ಯಪ್ಪ ಸ್ವಾಮಿ ಟ್ರಸ್ಟ್ ರವರಿಗೆ ಕರಾರು ನೊಂದಾಯಿಸಿದ ದಿನಾಂಕದಿಂದ 5 ವರ್ಷದ ಅವಧಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 21-06-2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 26-07-2011ರ ನಿರ್ಣಯ.

***ನಿರ್ಣಯ : ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಯಿತು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 26-07.2011ರ ನಿರ್ಣಯವನ್ನು ಒಪ್ಪುತ್ತಾ, ಪ್ರಸ್ತಾಪಿಸಿರುವ ಸ್ಥಳವು ರಸ್ತೆ ಅಗಲೀಕರಣಕ್ಕೆ ಬೇಕಾದಲ್ಲಿ ಅರ್ಜಿದಾರರು ಯಾವುದೇ ಪ್ರತಿಫಲವನ್ನು ಅಪೇಕ್ಷಿಸದೇ ಪಾಲಿಕೆ ವಶಕ್ಕೆ ಬಿಟ್ಟು ಕೊಡುವಂತೆ ಷರತ್ತನ್ನು ವಿಧಿಸಿ ಮಾಸಿಕ ರೂ.5000/- ಗಳ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## 19]. ವಿಷಯದ ಸಂಖ್ಯೆ :-ತೆಆಸ್ಥಾಸ/550/2011-12

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/41/05-06, ದಿನಾಂಕ: 24-01-2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್-93(77), ವಸಂತನಗರ ಉಪವಿಭಾಗ ವ್ಯಾಪ್ತಿಯ ರೇಸ್‌ಕೋರ್ಸ್ ರಸ್ತೆ, ಮಾಧವನಗರದಲ್ಲಿ ಶ್ರೀಮತಿ.ಮಂಜುಳರವರಿಗೆ 10X10 ಅಡಿಗಳ ಮೀನು ಮಾರಾಟ ಮಳಿಗೆ ಸ್ಥಾಪಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿಸಮಿತಿ ವಿಷಯದ ಸಂಖ್ಯೆ:104/2010-11, ದಿನಾಂಕ:13-12-2010 ರಂದು 3-ವರ್ಷಗಳ ಕಾಲಾವಧಿಗೆ ಮಾಸಿಕ 3000/-ರೂ.ಗಳಂತೆ ಗುತ್ತಿಗೆಗೆ ನೀಡಲಾಗಿತ್ತು.

ವಸಂತನಗರ ವಾರ್ಡಿನ ನಗರಪಾಲಿಕೆ ಸದಸ್ಯರು ಪ್ರಸ್ತುತ ಜಾಗವು ಸಾರ್ವಜನಿಕರು ಓಡಾಡುವ ಜಾಗವಾಗಿದ್ದು, ಸಾರ್ವಜನಿಕರು ವಿರೋಧ ವ್ಯಕ್ತಪಡಿಸುತ್ತಿರುವುದರಿಂದ, ಗುತ್ತಿಗೆ ರದ್ದುಪಡಿಸಲು ಕೋರಿರುತ್ತಾರೆ. ದಿನಾಂಕ:25-05-2011ರಲ್ಲಿ ಸದರಿ ಸದಸ್ಯರು ಮೀನು ಮಾರಾಟದ ಪರವಾನಿಗೆಯ

ಬದಲಿಗೆ ಊಟ ಮತ್ತು ಉಪಹಾರ ವ್ಯಾಪಾರಕ್ಕೆ ಮಂಜೂರಾತಿ ನೀಡಲು ಕೋರಿರುತ್ತಾರೆ. ಪಾಲಿಕೆ ವಿರೋಧ ಪಕ್ಷದ ನಾಯಕರು ಸಹಾ ಈ ಕೋರಿಕೆಯನ್ನು ಪರಿಗಣಿಸಲು ಪತ್ರ ಬರೆದು ವಿನಂತಿಸಿರುತ್ತಾರೆ.

ಅರ್ಜಿದಾರರು ದಿನಾಂಕ:23–05–2011 ರಂದು ಅರ್ಜಿ ಸಲ್ಲಿಸಿ, ಅವರು ಸ್ವಂತ ಖರ್ಚಿನಲ್ಲಿ 30X40 ಅಡಿಗಳಷ್ಟು ಹಳ್ಳವನ್ನು ಸಮತಟ್ಟುಮಾಡಿ 10X10 ಅಡಿಗಳ ಬದಲು 10X08 ಅಡಿಗಳ ವಿಸ್ತೀರ್ಣದ ಸ್ಥಳವನ್ನೇ ಉಪಯೋಗಿಸುತ್ತಾ ಒಂದು ಪೆಟ್ಟಿಗೆ ಅಂಗಡಿಯಲ್ಲಿ ವ್ಯಾಪಾರ ಪ್ರಾರಂಭಿಸಲಾಗಿದೆ. ಇದಕ್ಕೆ 3 ಅಡಿ ದೂರ ನಗರಪಾಲಿಕೆ ಶೌಚಾಲಯ ಇದ್ದು, ಇದರಿಂದ, ದುರ್ವಾಸನೆ ಬರುತ್ತಿದ್ದು, 10 ಅಡಿ ಉದ್ದ ಮತ್ತು 8 ಅಡಿ ಎತ್ತರದ ಜಿಂಕ್‌ಶೀಟ್ ಗೋಡೆಯನ್ನು ನಿರ್ಮಿಸಲಾಗಿದೆಯೆಂದು, ಮುಂದುವರೆಸುತ್ತಾ, 10X10 ಅಡಿಗಳನ್ನೇ ಕಾಯಂ ಮಾಡಿಕೊಡಲು ಕೋರಿರುತ್ತಾರೆ.

ಜಂಟಿ ಆಯುಕ್ತರು(ಪೂರ್ವ)ರವರು ಕರಡು ಟಿಪ್ಪಣಿಯನ್ನು ಮಂಡಿಸುತ್ತಾ, ಮೀನು ವ್ಯಾಪಾರದ ಬದಲಾಗಿ ಸ್ವಇಚ್ಛೆಯಂತೆ ಊಟ ಮತ್ತು ಉಪಹಾರದ ವ್ಯಾಪಾರಕ್ಕೆ ಬದಲಾವಣೆ ಮಾಡುತ್ತಾ, ಉಲ್ಲಂಘಿಸಿರುವ ಬಗ್ಗೆ 10X10 ಅಡಿಗಳ ಖಾಲಿ ನಿವೇಶನವನ್ನು ಸಹಾ ಅನಧಿಕೃತವಾಗಿ ಸ್ವಾಧೀನಪಡಿಸಿರುವ ಬಗ್ಗೆ ಅರ್ಜಿದಾರರಿಗೆ ಹಿಂಬರಹ ನೀಡಿದ್ದು, ಮುಂದಿನ ತೀರ್ಮಾನಕ್ಕೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿಸಮಿತಿ ಮುಂದೆ ಟಿಪ್ಪಣಿ ಮಂಡಿಸಿರುತ್ತಾರೆ.

ಸಹಾಯಕ ಕಂದಾಯ ಅಧಿಕಾರಿ(ವಸಂತನಗರ) ಇವರ ವರದಿ ಪ್ರಕಾರ ಅನಧಿಕೃತವಾಗಿ ಜಾಗವನ್ನು ಅತಿಕ್ರಮಿಸಿಕೊಂಡಿರುವುದಿಲ್ಲವೆಂದು ಸಮಜಾಯಿಷಿ ನೀಡಿದ್ದು, ನನಗೂ ಇದು ಮನವರಿಕೆ ಯಾಗಿರುತ್ತದೆಂದು ವರದಿ ನೀಡಿರುತ್ತಾರೆ. ಇವರ ವರದಿಗೆ ಮೇಲಿನ ಎಲ್ಲಾ ವಲಯಮಟ್ಟದ ಅಧಿಕಾರಿಗಳು ಸ್ಪಂದಿಸಿರುತ್ತಾರೆ. ಯಾರು ದಿನನಿತ್ಯ ಓಡಾಡುವ ನಗರದ ಪ್ರಮುಖ ಜಾಗದಲ್ಲಿರುವ ಈ ಸ್ಥಳವನ್ನು ಪರಿಶೀಲನೆ ಮಾಡಿರುವುದಿಲ್ಲ. ದಿನಾಂಕ:13–12–2011 ರಂದು ಸ್ಥಳ ಪರಿಶೀಲಿಸಲಾಗಿ, ಭೂಮಾಪಕರು (ಪೂರ್ವ) ರವರು ತಯಾರಿಸಿರುವ ನಕ್ಷೆ ಯನ್ನು ಲಗತ್ತಿಸಿದೆ.

ಆಸ್ತಿಶಾಖೆಯ ಸ್ಥಳ ಪರಿಶೀಲನಾ ವರದಿಯಂತೆ, ರೇಸ್‌ಕೋರ್ಸ್ ರಸ್ತೆಯ ಮಧ್ಯದಲ್ಲಿರುವ ಪ್ರದೇಶ ಒಂದು ತ್ರಿಕೋನ ಪ್ರದೇಶದಲ್ಲಿ ದಟ್ಟವಾಗಿ ಹುಲ್ಲು ಬೆಳೆಸಿ ಬಂಬೂ ಗಿಡಗಳನ್ನು ನೆಟ್ಟು ಸುತ್ತಲೂ ಗ್ರಿಲ್ ನಿರ್ಮಿಸಿ ಹಸಿರು ಪ್ರದೇಶವನ್ನಾಗಿ ಪಾಲಿಕೆವತಿಯಿಂದ ನಿರ್ವಹಿಸಲಾಗಿತ್ತು. ಆಸ್ತಿಶಾಖೆಯಲ್ಲಿ ಹಳೆಯ ವಹಿಯಲ್ಲಿ ಇದು ಉದ್ಯಾನವನವೆಂದು ನಮೂದಿಸಲಾಗಿರುವುದು ಕಂಡು ಬಂದಿದೆ. ಪಶ್ಚಿಮ ಭಾಗದಲ್ಲಿ ಸಾರ್ವಜನಿಕ ಶೌಚಾಲಯವಿದ್ದು, ಉತ್ತರ ಭಾಗದಲ್ಲಿ ನಂದಿನಿ ಹಾಲಿನ ಬೂತ್‌ಗೆ ನೀಡಲಾಗಿದ್ದು, ಪೂರ್ವ ಭಾಗದಲ್ಲಿ ಹಾಪ್‌ಕಾಮ್ಸ್ ಮಳಿಗೆ ಮತ್ತು ಕಾಂಡಿಮೆಂಟ್ಸ್‌ಗೆ ನೀಡಲಾಗಿರುತ್ತದೆ. ಮಧ್ಯದಲ್ಲಿ ಉಳಿದಿರುವ ಜಾಗದಲ್ಲಿ ಪ್ರಸಕ್ತ ಗುತ್ತಿಗೆದಾರರಾದ ಮಂಜುಳರವರು 21X23 ಅಡಿ ಅಳತೆಯ ಶೆಡ್‌ನ್ನು ನಿರ್ಮಿಸಿ, ಸುತ್ತಮುತ್ತಲಿನ ಸಂಪೂರ್ಣ ಜಾಗವನ್ನು ಉಪಯೋಗಿಸಿ ಮಾಂಸಹಾರಿ ಹೋಟೆಲ್‌ನ್ನು ನಡೆಸುತ್ತಿದ್ದು, ಶೌಚಾಲಯ ಮತ್ತು ಇವರ ಶೆಡ್ಡಿನ ಮಧ್ಯದಲ್ಲಿ ಹಾಲೋಬ್ಲಾಕ್ಸ್ ಇಟ್ಟಿಗೆಯ ಗೋಡೆಯನ್ನು ನಿರ್ಮಿಸಿರುತ್ತಾರೆ. ಈ ಅಂಗಡಿಗಳ ವಹಿವಾಟಿನಿಂದ ಉದ್ಭವಿಸುವ ಕಸ ಇತ್ಯಾದಿಯನ್ನು ಪೂರ್ವ ದಿಕ್ಕಿನಲ್ಲಿರುವ ಖಾಲಿ ಇರುವ ಪಾಲಿಕೆಯ ತೋಟದಲ್ಲಿ ಎಸೆದಿರುವುದು ಕಂಡು ಬರುತ್ತದೆ.

ಗುತ್ತಿಗೆಯು ನೀಡಿದ ಜಾಗ ಮತ್ತು ಉದ್ದೇಶ ಎರಡೂ ಧಿಕ್ಕರಿಸಿ ಅವರ ಮನಸ್ಸಿಗೆ ಬಂದ ಹಾಗೆ ವಹಿವಾಟು ನಡೆಸುತ್ತಿದ್ದು ಹಾಗೂ ಪ್ರಮುಖ ರಸ್ತೆಯ ಮಧ್ಯದ ಪಾಲಿಕೆ ಜಾಗದಲ್ಲಿ ಯಾವುದೇ ಅನುಮತಿಯಿಲ್ಲದೇ ಗೋಡೆಯನ್ನು ನಿರ್ಮಿಸಿ ಯಾವುದೇ ಕಾನೂನಿಗೆ ಲೆಕ್ಕಿಸದೇ ವ್ಯವಹರಿಸುತ್ತಿರುವುದು ಗೋಚರವಾದ ಸಂಗತಿಯಾಗಿದೆ. ಕರಾರು ಪತ್ರವನ್ನು ಸಹಾ ಮಾಡದೇ ಪಾಲಿಕೆಯ ಅಧಿಕಾರಿಗಳು ಈ ರೀತಿಯ ವ್ಯವಹಾರ ನಡೆಸಲು ಅನುವು ಮಾಡಿಕೊಟ್ಟಿರುವುದು ಆಶ್ಚರ್ಯಕರವಾದ ಸಂಗತಿಯಾಗಿರುತ್ತದೆ. ಸ್ಥಳೀಯ ಸಹ ಕಂದಾಯ ಅಧಿಕಾರಿ ತಪ್ಪು ವರದಿಯನ್ನು ನೀಡಿ ಕರಾರು ಪತ್ರವನ್ನು ನೊಂದಾಯಿಸದೇ ಎಲ್ಲಾ ಕಾನೂನುಬಾಹಿರ ವ್ಯವಹಾರಕ್ಕೆ ಅನುವು ಮಾಡಿಕೊಟ್ಟಿರುತ್ತಾರೆ.

ಈ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಕ್ರಮ ಜರುಗಿಸಲು ಪ್ರಸ್ತಾಪಿಸಲಾಗಿರುವುದನ್ನು ಆಯುಕ್ತರು ಅನುಮೋದಿಸಿರುತ್ತಾರೆ.

1. ಸಹಾಯಕ ಕಂದಾಯ ಅಧಿಕಾರಿ(ವಸಂತನಗರ)ರವರಿಂದ ವಿವರಣೆಯನ್ನು ಪಡೆದು ಜಂಟಿ ಆಯುಕ್ತರು (ಪೂರ್ವ) ರವರು ಇಲಾಖಾ ತನಿಖೆ ಪ್ರಾರಂಭಿಸಲು ಸೂಚಿಸಲಾಗಿದೆ.
2. ಕರಾರು ಪತ್ರವಿಲ್ಲದೇ ಪ್ರಾರಂಭಿಸಿರುವ ಅನಧಿಕೃತ ಸಂಪೂರ್ಣ ಕಟ್ಟಡ ಮತ್ತು ಗೋಡೆಯನ್ನು ತೆರವುಗೊಳಿಸಿ ಕರಾರು ನೊಂದಾಯಿಸಿದ ನಂತರ ಪಾಲಿಕೆಯ ಅನುಮೋದನೆಯಂತೆ ಜಾಗವನ್ನು ಹಸ್ತಾಂತರಿಸಿ ಯಾವ ಉದ್ದೇಶಕ್ಕೆ ಪಾಲಿಕೆ ನೀಡಿದೆಯೋ ಅದೇ ಉದ್ದೇಶಕ್ಕೆ ನಡೆಸುವ ಹಾಗೆ ನೋಡಿಕೊಳ್ಳತಕ್ಕದೆಂದು ಜಂಟಿ ಆಯುಕ್ತರು(ಪೂರ್ವ)ರವರಿಗೆ ಸೂಚಿಸಲಾಗಿದೆ.
3. ಸುತ್ತಮುತ್ತಲೂ ಖಾಲಿ ಉಳಿದಿರುವ ಪ್ರದೇಶವನ್ನು ಸಂಬಂಧಪಟ್ಟ ಅಭಿಯಂತರರು ಗಿಡಗಳನ್ನು ಬೆಳೆಸಲು ಅಗತ್ಯಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಮೇಲಿನಂತೆ ಕ್ರಮ ಜರುಗಿಸಲು ದಿನಾಂಕ 11-01-2012ರಂದು ಜಂಟಿ ಆಯುಕ್ತರು (ಪೂರ್ವ) ಸಹ ಕಂದಾಯ ಅಧಿಕಾರಿ ಹಾಗೂ ಸಹಾಯಕ ಕಾರ್ಯನಿರ್ವಾಹಕಅಭಿಯಂತರರು(ವಸಂತನಗರ) ರವರಿಗೆ ಆಂತರಿಕ ಕಛೇರಿ ಟಿಪ್ಪಣಿ ಮೂಲಕ ಸೂಚಿಸಲಾಗಿದೆ.

ಮೇಲ್ಕಂಡಂತೆ ಕೂಲಂಕುಷ ವರದಿ ಹಾಗೂ ಕೈಗೊಂಡಿರುವ ಕ್ರಮದ ಬಗ್ಗೆ ಹಾಗೂ ಸ್ಥಳೀಯ ನಗರಪಾಲಿಕೆ ಸದಸ್ಯರು ಗುತ್ತಿಗೆ ಉದ್ದೇಶ ಬದಲಾವಣೆಗೆ ನೀಡಿರುವ ಕೋರಿಕೆಯ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ಮಾನ್ಯ ಆಯುಕ್ತರ ದಿನಾಂಕ: 21-01-2012ರ ಟಿಪ್ಪಣಿಯನ್ನು ಮಾರ್ಪಡಿಸಿ, ಸದರಿ ಅರ್ಜಿದಾರರಿಗೆ ನೀಡಿದ್ದ ಮೀನು ಮಾರಾಟ ಮಳಿಗೆಯನ್ನು ಸ್ಥಳೀಯರ ದೂರಿನ ಮೇರೆಗೆ ರದ್ದುಪಡಿಸಿ, ಇದರ ಬದಲಿಗೆ ಊಟದ ವ್ಯಾಪಾರಕ್ಕಾಗಿ 3 ವರ್ಷಗಳ ಅವಧಿಗೆ ಹಾಗೂ ಈಗಿರುವ ಪ್ರಸ್ತುತ 21 X 23 ಅಡಿ ಅಳತೆಗೆ ಈ ನಿರ್ಣಯದ ದಿನಾಂಕದಿಂದ ಗುತ್ತಿಗೆಗೆ ನೀಡಲು ತಿರ್ಮಾನಿಸಿ, ಸದರಿ ಸ್ಥಳದಲ್ಲಿ ಸ್ವಚ್ಚತೆಯನ್ನು ಕಾಪಾಡಿಕೊಂಡು ಹೋಗಲು ಸೂಚಿಸಲಾಗಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 07-02-2012ರ ನಿರ್ಣಯ.

***ನಿರ್ಣಯ :-*** **ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಯಿತು, ಅರ್ಜಿದಾರರಾದ ಶ್ರೀಮತಿ ಮಂಜುಳ ರವರು ಕೋರಿರುವಂತೆ 10'X 10' ಅಡಿಗಳ ಜಾಗವನ್ನು ಮಾತ್ರ ನೀಡುವ ಮಾರ್ಪಾಡಿನೊಂದಿಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 07.02.2012ರ ನಿರ್ಣಯವನ್ನು ಒಪ್ಪುತ್ತಾ, 10'X 10' ಅಡಿಗಳಿಗೆ ಮಾಸಿಕ ರೂ.3000/- (ಮೂರು ಸಾವಿರ) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

**ಜಿ. ಮಂಜುನಾಥ್‌ರಾಜು**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**